
ಕರ್ನಾಟಕ ಲಲಿತಕಲಾ ಅಕಾಡೆಮಿ

ಜನಪ್ರಿಯ ದೇಶಿ ಕಲಾಮಾಲೆ

# ಹಚ್ಚೆ ಚಿತ್ರಕಲೆ

● ಡಾ. ಎಸ್.ಸಿ. ಪಾಟೀಲ



# ಹಚ್ಚೆ ಚಿತ್ರಕಲೆ


**ಲೇಖಕರು**

**ಡಾ.ಎಸ್.ಸಿ.ಪಾಟೀಲ**



**ಕರ್ನಾಟಕ ಲಲಿತಕಲಾ ಅಕಾಡೆಮಿ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು ೫೬೦೦೦೨

HACHHE CHITRAKALE
By: Dr.S.C.Patil
Published by
B.T.Munirajayya, Registrar
Karnataka Lalithakala Academy Kannada Bhavana, J.C.Road
**BANGALORE**-560002
First Impression: 2004
Pages: XII + Price Rs 40-00
ಬೆಲೆ ರೂ. : ೪೦-೦೦

ಪ್ರಥಮ ಮುದ್ರಣ : ೨೦೦೪

© ಲೇಖಕರದು

ಈ ಪುಸ್ತಕದಲ್ಲಿರುವ ಅಭಿಪ್ರಾಯಗಳು

ಆಯಾ ಲೇಖಕರಿಗೆ ಸಂಬಂಧಿಸಿದ್ದು

**ಪ್ರಧಾನ ಸಂಪಾದಕರು**

ಶ್ರೀ ಪೀಟರ್ ಎ. ಲೂಯಿಸ್

**ಸಂಪಾದಕರು**

ಡಾ.ಎಸ್.ಸಿ.ಪಾಟೀಲ

**ಪ್ರಕಟಣಾ ಸಮಿತಿ ಸದಸ್ಯರು**

ಶ್ರೀ ಸುರೇಶ ಡಿ.ಹಾಲಬಾವಿ

ಡಾ. ಪೂರ್ಣಿಮಾ ಪಾಟೀಲ

ಶ್ರೀ ಪಿ.ಎಸ್.ಕಡೇಮನಿ

ಶ್ರೀ ಬಿ.ಎಸ್.ದೇಸಾಯಿ

ಶ್ರೀ ದಿಲೀಪಕುಮಾರ ಕಾಳೆ

**ಪ್ರಕಾಶಕರು**

ಶ್ರೀ ಬಿ.ಟಿ.ಮುನಿರಾಜಯ್ಯ, ರಿಜಿಸ್ಟ್ರಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ಸಮನ್ವಯಕಾರ : ಶ್ರೀ ಪ.ಸ.ಕುಮಾರ

ಮುಖಪುಟ : ಶ್ರೀ ಸುಧಾಕರ ದರ್ಬೆ

ಅಕ್ಷರ ಜೋಡಣೆ : ಯಾಜಿ ಗ್ರಾಫಿಕ್ಸ್, ಹೊಸಪೇಟೆ  ಅಕ್ಷರೋಗಾಫಿಕ್ಸ್

ಮುದ್ರಣ

ನಂ. 3/1, 6ನೇ ಅಡ್ಡರಸ್ತೆ ಮಾಗಡಿ ಮುಖ್ಯರಸ್ತೆ,

ಅಗ್ರಹಾರ ದಾಸರಹಳ್ಳಿ, ಬೆಂಗಳೂರು - 560 079

ಫೋನ್ : 98451 63672, 23304131

# ಅಧ್ಯಕ್ಷರ ಮಾತು

ಆತ್ಮೀಯರೆ,

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ, ರೂಪಿಸಿ ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡು ವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನ ವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್' 'ನಿಮ್ಮೊಂದಿಗೆ ನಾವು' 'ಮನೆಗೊಂದು ಕಲಾಕೃತಿ', 'ಜನಪದ ಶೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕು ವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

**ಯಂಗ್ ಸ್ಟ್ರೋಕ್ಸ್'**: ಕರ್ನಾಟಕದ ನಾಲ್ಕು ವಿಭಾಗಗಳಿಂದ ಆಯ್ದ ಪ್ರತಿಭಾವಂತ ಯುವಕಲಾವಿದರ ಕಲಾಪ್ರದರ್ಶನವನ್ನು ಬೆಂಗಳೂರು, ಮುಂಬೈ ಮತ್ತು ನವದೆಹಲಿಯಲ್ಲಿ ಪ್ರದರ್ಶಿಸಿದ್ದೇವೆ. ಸುಂದರ ಕೈಪಿಡಿಯನ್ನು ಮುದ್ರಿಸಿದ್ದೇವೆ.

**ಮನೆಗೊಂದು ಕಲಾಕೃತಿ** : ಮಧ್ಯಮ ವರ್ಗದ ಜನರ ಮನೆಯಲ್ಲಿ ನಾಡಿನ ಕಲಾವಿದರ ಕೃತಿಗಳು ರಾರಾಜಿಸಬೇಕೆಂಬ ಉದ್ದೇಶದಿಂದ ಕಡಿಮೆ ಬೆಲೆಯಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಿದವು. ಜನರ ಉತ್ಸಾಹ

ಹಾಗೂ ಪ್ರೋತ್ಸಾಹ ನಮ್ಮನ್ನು ನಿಬ್ಬೆರಗಾಗಿಸಿತು. ಐದು ನೂರಕ್ಕೂ ಹೆಚ್ಚು ಕಲಾಕೃತಿಗಳು ಮಧ್ಯಮ ವರ್ಗದ ಮನೆಗಳನ್ನು ಅಲಂಕರಿಸಿದರೆ, ಅಕಾಡೆಮಿ ಬೊಕ್ಕಸಕ್ಕೆ ಲಕ್ಷಕ್ಕೂ ಹೆಚ್ಚು ಆದಾಯ ಬಂತು.

**ನಿಮ್ಮೊಂದಿಗೆ ನಾವು** : ಕರ್ನಾಟಕದ ಎಲ್ಲ ಕಡೆಗಳಲ್ಲೂ ಈ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸಿದೆ. ಈಗಾಗಲೇ ಎಪ್ಪತ್ತೈದು ಸಾವಿರ ಜನರಿಗೆ ಕಲೆಯ ಕಿರು ಪರಿಚಯ ವನ್ನು ಮಾಡಿಸಿದೆ.

**ಜನಪದ ಶೃತಿ-ಆಧುನಿಕ ಕೃತಿ** : ಜಾನಪದದ ಬೇರುಗಳು ಗಟ್ಟಿಯಾಗಿರುವ ಹಳ್ಳಿಯಲ್ಲಿ ಆಧುನಿಕ ಚಿತ್ರಕಲೆಯನ್ನು ಎತ್ತಿನ ಬಂಡಿಗಳ ಮೇಲೆ ಚಿತ್ರಿಸಿ 'ಚಲಿಸುವ ಗ್ಯಾಲರಿ'ಗಳನ್ನು ನಿರ್ಮಿಸಿದ್ದೇವೆ.

**ಯುವ ಕಲಾವಿದರಿಗೆ ಫೆಲೋಶಿಪ್** : ಮೂವರು ಯುವ ಪ್ರತಿಭೆಗಳನ್ನು ಆಯ್ಕೆ ಮಾಡಿ ಅವರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ರೂ.೩೦೦೦ (ಮೂರು ಸಾವಿರ) ಧನ ಸಹಾಯ ನೀಡಿ ಸ್ವತಂತ್ರವಾಗಿ ಚಿಂತಿಸಿ ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಿ ಕೊಟ್ಟಿದ್ದೇವೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಹೊಸದುರ್ಗದ ಹತ್ತಿರವಿರುವ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆ ಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್. ದಂಡಾವತಿಮಠ ಹಾಗೂ ಡಾ.ಎಂ.ವಿ.ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫೆಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ

ಕಲಾ ಪ್ರದರ್ಶನದಲ್ಲಿ ನೀಡುವ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸುತ್ತಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕೊರೆಯುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿ ದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವು ಹತ್ತು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯು ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಕಲಾವಾರ್ತೆ ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತು ಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. ಹಾಗೆಯೇ ಅಕಾಡೆಮಿಯ

ಎಲ್ಲ ಸದಸ್ಯರ ತೀರ್ಮಾನದಂತೆ ಹತ್ತು ಜನ ಹಿರಿಯ ಕಲಾವಿದರ ಚಿತ್ರಸಂಪುಟ ಮತ್ತು ಒಂಬತ್ತು ಜನ ಹಿರಿಯ ಕಲಾವಿದರಾದ ಪ್ರೊ.ವ್ಹಿ.ಜಿ.ಅಂದಾನಿ, ಎಸ್.ಕಾಳಪ್ಪ, ಎಚ್.ಎಸ್. ಇನಾಮತಿ, ಕೆ.ಕೇಶವಯ್ಯ, ಪುರುಷೋತ್ತಮ ಕಾರಂತ, ಎಂ.ಆರ್.ಬಾಳೀಕಾಯಿ, ರಘೋತ್ತಮ ಪುಟ್ಟಿ, ವ್ಹಿ.ಟಿ.ಕಾಳ ಹಾಗೂ ಸಿ.ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು ಆಯಾ ಲೇಖಕರು ಆ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಸಂಪಾದಿಸಿಕೊಟ್ಟ ಡಾ.ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಅಕಾಡೆಮಿಯ ಇನ್ನೊಂದು ಗ್ರಂಥ 'ಮುಖಗಳೊಂದಿಗೆ ಮುಖಾಮುಖಿ' ಭಾವಚಿತ್ರ ಪರಂಪರೆ ಶೀರ್ಷಿಕೆಯ ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದು ಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ.ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲ ನೋಟವನ್ನು ಒಂದೆಡೆಗೆ ಮಾಡಿಕೊಡುವ ಉದ್ದೇಶದಿಂದ ಕರ್ನಾಟಕ ಚಿತ್ರಕಲಾ ದರ್ಶನ ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು ಇದನ್ನು ಡಾ.ಎಸ್.ಸಿ.ಪಾಟೀಲ ಅವರು ಸಂಪಾದಿಸಿ ಕೊಡುತ್ತಿದ್ದಾರೆ. ಅದಕ್ಕಾಗಿ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ

ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ದೃಷ್ಟಿಯಿಂದ ಈ ಕೆಳಗಿನ ಗ್ರಂಥಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ.

೧. ರಂಗೋಲಿ ಚಿತ್ರಕಲೆ

೨. ಶೀಗಿ ಚಿತ್ರಕಲೆ

೩.ಕಸೂತಿ ಚಿತ್ರಕಲೆ

೪. ಹಚ್ಚೆ ಚಿತ್ರಕಲೆ

೫. ಬೆಳದಿಂಗಳ ಚಿತ್ರಕಲೆ

೬. ಚಿತ್ತಾರಗೊಂಬೆ ಚಿತ್ರಕಲೆ

೭. ನಾಗಾರಾಧನೆ ಮತ್ತು ಚಿತ್ರಕಲೆ

೮. ಯಕ್ಷಗಾನ ಮತ್ತು ಚಿತ್ರಕಲೆ

೯. ಬಿದರಿ ಚಿತ್ರಕಲೆ

೧೦. ಭೂತಾರಾಧನೆ ಮತ್ತು ಚಿತ್ರಕಲೆ

ಅಳಿದು ಹೋಗುತ್ತಿರುವ ನಮ್ಮ ಜಾನಪದರ ಈ ಚಿತ್ರಕಲೆಯನ್ನು ಉಳಿಸಿ ಬೆಳೆಸಿ ಕೊಳ್ಳುವ ಮತ್ತು ಜನಸಾಮಾನ್ಯರಿಗೂ ಪರಿಣಿತರಿಗೂ ಸುಲಭ ಬೆಲೆಯಲ್ಲಿ ಕಲೆಯ ಈ ಸಾಹಿತ್ಯವನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ. ಎಲ್ಲ ವರ್ಗದ ಜನರು ಕಲೆಯನ್ನು ಅರ್ಥೈಸಿಕೊಳ್ಳಬೇಕು ಮತ್ತು ಅದರೊಂದಿಗೆ ತಾವೂ ಬೆರೆತುಕೊಳ್ಳಬೇಕು ಅಂದಾಗ ಮಾತ್ರ ಕಲೆ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಇಂತಹ ಕೆಲಸಗಳು ಹಲವಾರು ರೀತಿಯಿಂದ ಆಗಬೇಕಾಗಿದೆ. ಕಲಾ ಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಕಲಾ ಪ್ರಾತ್ಯಕ್ಷಿಕೆ ಇತ್ಯಾದಿ ಯಾಗಿ ಮಾಡುತ್ತ ಹೆಚ್ಚು ಹೆಚ್ಚು ಜನಪ್ರಿಯಗೊಳಿಸುವ ಕೆಲಸಗಳು ನಡೆದಷ್ಟು ಈ ಕ್ಷೇತ್ರ ಬೆಳೆಯುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಜನಪ್ರಿಯ ಕಲಾಮಾಲಿಕೆಯಲ್ಲಿ ಈ ಹೊತ್ತಿಗೆಗಳನ್ನು ಪ್ರಕಟಿಸು ತ್ತಿದ್ದೇವೆ. ನಮ್ಮ ಮನವಿಯನ್ನು ಒಪ್ಪಿ ಈ ಹೊತ್ತಿಗೆಗಳನ್ನು ತಮ್ಮ ಬಿಡುವಿಲ್ಲದ ವೇಳೆಯಲ್ಲಿಯೂ ನಮಗಾಗಿ ಕಷ್ಟಪಟ್ಟು ಬರೆದುಕೊಟ್ಟ ಎಲ್ಲ ಲೇಖಕರಿಗೆ ಮತ್ತು ಈ ಪುಸ್ತಕಗಳ ಯೋಜನೆಯನ್ನು ರೂಪಿಸಿ, ಪರಿಣಿತ ಲೇಖಕರನ್ನು ಹುಡುಕಿ, ಅವರಿಂದ ಬರ ವಣಿಗೆಯನ್ನು ಬರೆಯಿಸಿ ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ.ಎಸ್.ಸಿ.ಪಾಟೀಲ ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫೇಕ್ಸ್ ಸಂಸ್ಥೆಗೆ ವಂದನೆಗಳು. ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ವಿಶೇಷವಾಗಿ ಸಮನ್ವಯಕಾರರಾಗಿ ಈ ಕಾರ್ಯ ಆಗು ಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯ ಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿವರ್ಗ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮಧನ್ಯವಾದಗಳು. ನಮ್ಮ ಈ ಕಿರುಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

**ಬೆಂಗಳೂರು** — **ಪೀಟ ಎ. ಲೂಯಿಸ್**

**೨೦೦೪** — **ಅಧ್ಯಕ್ಷರು**

# ಸಂಪಾದಕೀಯ

ಎಲ್ಲ ಅನ್ಯಶಿಸ್ತುಗಳಲ್ಲಿ ಆದಂತೆ ದೃಶ್ಯಕಲೆಯ ಕ್ಷೇತ್ರದಲ್ಲೂ ಹೊಸ ನೀರು ಪಶ್ಚಿಮದಿಂದ ಹರಿದು ಬಂದಿದೆ. ಅದರೊಂದಿಗೆ ನಮ್ಮದೇ ಆದ ದೇಶಿಪರಂಪರೆಯ ತಿಳುವಳಿಕೆಯ ಹಿನ್ನಲೆಯಲ್ಲಿಯೂ ಈ ಕಲೆ ಬೆಳೆದು ಬಂದಿದೆ. ಈ ಎರಡೂ ವಿಭಿನ್ನ ಜ್ಞಾನ ಪರಂಪರೆಯ ತಿಳುವಳಿಕೆಯ ಸಂಪರ್ಕ, ಸಂಸರ್ಗದಲ್ಲಿ ಮತ್ತೊಂದು ಬಗೆಯ ಹೊಸಜ್ಞಾನ ಪ್ರವಾಹ ನಮ್ಮ ಕಲಾಪ್ರಪಂಚದಲ್ಲಿ ಸಂಚಲನೆಗೊಂಡಿದ್ದು ಅದು ನಮ್ಮನ್ನು ದಿಗ್ಭ್ರಮೆಗೊಳಿಸುವಷ್ಟು ಈ ಕ್ಷೇತ್ರವನ್ನು ಆವರಿಸಿಕೊಳ್ಳುತ್ತಿದೆ.

ನಮ್ಮ ತನವನ್ನೆಲ್ಲ ನಾವು ಎಲ್ಲಿ ಕಳೆದುಕೊಳ್ಳುತ್ತೇವೆ ಎಂಬ ಆತಂಕ ಕೂಡ ಕಲಾವಲಯದಲ್ಲಿ ಉಂಟಾಗುತ್ತದೆ. ಜಾಗತೀಕರಣ ನಮ್ಮ ಸ್ಥಳೀಕರಣದ ಕಲಾ ಸಂಸ್ಕೃತಿಯ ಮೇಲೆ ಮೂಡಿಸಿದ ಈ ಪರಿಣಾಮದ ಬಗ್ಗೆ ಗಂಭೀರ ಚಿಂತನೆಗಳು ನಡೆಯಬೇಕಾಗಿವೆ. ಇಂತಹ ಸಂಕ್ರಮಣ ಕಾಲದಲ್ಲಿ ಸಹಜವಾಗಿಯೇ ದೇಶಿಕಲಾ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಪ್ರಾಪ್ತವಾಗುತ್ತಲಿದೆ.

ಕರ್ನಾಟಕದಲ್ಲಿ ಈಗ ಸ್ಥಾನಿಕ ನೆಲೆಯಲ್ಲಿ ಪ್ರಾದೇಶಿಕ ಹಿನ್ನೆಲೆಯ ದೇಶಿಚಿತ್ರ ಕಲೆಯ ಬಹುವಿನ್ಯಾಸಗಳ ಕಡೆಗೆ ನಾವು ಗಮನಹರಿಸಬೇಕಾಗಿದೆ. ಇಂದು ಶಿಷ್ಟಪರಂಪರೆಯ ಚಿತ್ರಕಲೆಯೇ ಎಂಬ ವಾತಾವರಣ ಉಂಟಾಗಿದೆ. ಆದರೆ ಕಲೆಯ ತಾಯಿ ಬೇರುಗಳು ಜನಪದ ಚಿತ್ರಕಲೆಯಿಂದ ಬಂದವುಗಳು ಎಂಬ ಪ್ರಜ್ಞೆಯನ್ನು ನಾವು ಅರಿಯಬೇಕಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ಜಾನಪದ ನೆಲೆಯ ಚಿತ್ರಕಲಾ ಸಂಸ್ಕೃತಿಯನ್ನು ನಾವು ಜಾಗತಿಕ ನೆಲೆಯಲ್ಲಿ ಪರಿಚಯಿಸುವ, ಅನ್ವಯಗೊಳಿಸುವ, ಕಾರ್ಯಕ್ರಮಗಳನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಈ ದಿಸೆಯಲ್ಲಿ ಅಕಾಡೆಮಿಯ ಈ ಯೋಜನೆ ಒಂದು ಸಣ್ಣ ಪ್ರಯತ್ನ ಮಾತ್ರ. ಹೆಚ್ಚಿನ ಅಧ್ಯಯನಗಳಿಗೆ ಇದು ನಾಂದಿಯಾಗುತ್ತದೆ ಎಂಬ ವಿಶ್ವಾಸನಮ್ಮದಾಗಿದೆ. ಸಾವಿರಾರು ವರ್ಷಗಳ ನಮ್ಮ ಚಿತ್ರಕಲೆಯನ್ನು

ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಅದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿ ಒದಗಿಸಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಹೀಗೆ ಜಾನಪದ ನಮ್ಮ ಪ್ರಾಚೀನ ಮಾರ್ಗ ಚಿತ್ರಕಲೆಯ ಒಂದು ಅವಿಭಾಜ್ಯ ಅಂಗವಾಗಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಜಾನಪದ ಜನಪದರ ಬದುಕಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ವ್ಯವಸ್ಥೆ ಜನಾಂಗದ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಚಿತ್ರಕಲೆ ಆಯಾ ಪ್ರದೇಶದ ಜನಾಂಗದ ಸಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರ ಸಾಮಾಗ್ರಿಯಾಗಿದೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ವ್ಯಕ್ತಿ ತನ್ನ ಅನುಭವಗಳಿಗೆ ಜೀವ ಕೊಟ್ಟಿದ್ದು, ಬಣ್ಣ ತುಂಬಿದ್ದು ಇಂಥ ಕಲೆಗಳ ಮೂಲಕವೇ, ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ವರ್ಣಮಯವಾಗಿ ಈ ಕಲೆ ಬೆಳೆದು ಬಂದಿದೆ.

ಇಂದಿನ ಶಿಷ್ಟಪರಂಪರೆ ಚಿತ್ರಕಲೆಯೇ ನಮ್ಮ ಚಿತ್ರಕಲೆ ಎಂಬ ಭ್ರಮೆಯಲ್ಲಿರುವ ನಮಗೆ ನಮ್ಮ ದೇಶಿಚಿತ್ರಕಲೆಯ ಬಗೆಗಿನ ತಿಳುವಳಿಕೆ ತೀರ ಕಡಿಮೆ. ಈ ಕೊರತೆಯನ್ನು ಹೋಗಲಾಡಿಸುವ ಪ್ರಯತ್ನವಾಗಿ ಅಕಾಡೆಮಿ ದೇಶೀ ಜನಪ್ರಿಯ

ಕಲಾಮಾಲೆಯ ಅಡಿಯಲ್ಲಿ ಕರ್ನಾಟಕ ವಿವಿಧ ಪ್ರದೇಶದ ಪ್ರಾತಿನಿಧಿಕವಾದ ಜನಪದ ಚಿತ್ರಕಲೆಯ ಗ್ರಂಥಗಳನ್ನು ಹೊರತರಲಾಗುತ್ತಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಮತ್ತು ದಾಖಲೀಕರಣಗೊಳಿಸುವ ಮಹತ್ವದ ಉದ್ದೇಶವನ್ನು ಹೊಂದಲಾಗಿದ್ದು ಕ್ಷೇತ್ರ ಕಾರ್ಯದಿಂದ ಮೂಲ ಪ್ರಮಾಣಭೂತವಾದ ಸಂಶೋಧನಾ ವಿವರಗಳು ಇಲ್ಲಿ ಹರಳುಗಟ್ಟಿ ನಿಂತಿವೆ.

ನಮ್ಮ ಮಾರ್ಗ ಸೂಚನೆಯ ಮೇರೆಗೆ ಹತ್ತುಜನ ವಿದ್ವಾಂಸರಿಗೆ ರಂಗೋಲಿ ಚಿತ್ರಕಲೆ, ಶೀಗಿ ಚಿತ್ರಕಲೆ, ಕಸೂತಿ ಚಿತ್ರಕಲೆ, ಹಚ್ಚೆ ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಚಿತ್ತಾರದ ಗೊಂಬೆ ಚಿತ್ರಕಲೆ, ನಾಗಾರಾಧನೆ ಮತ್ತು ಚಿತ್ರಕಲೆ ಯಕ್ಷಗಾನ ಮತ್ತು ಚಿತ್ರಕಲೆ, ಬಿದರಿ ಚಿತ್ರಕಲೆ, ಭೂತಾರಾಧನೆ ಮತ್ತು ಚಿತ್ರಕಲೆ ಎಂಬ ಹತ್ತು ವಿಷಯಗಳ ಕುರಿತು ಕಿರುಗ್ರಂಥಗಳನ್ನು ಬರೆಯಲು ವಿನಂತಿಸಿಕೊಳ್ಳಲಾಗಿತ್ತು ಆದರೆ ಕೆಲವು ಜನ ವಿದ್ವಾಂಸರು ಒಪ್ಪಿಗೆ ಸೂಚಿಸಿ ಬರೆದು ಕೊಡುತ್ತೇವೆ ಎನ್ನುತ್ತಲೇ ದಿನಗಳನ್ನು ಮುಂದೂಡಿ ಕೊನೆಗೂ ಅವರಿಂದ ಬರವಣಿಗೆ ಬರದೇ ಇದ್ದಾಗ ಇಬ್ಬರು ಎರಡೆರಡು ಗ್ರಂಥಗಳನ್ನು ಬರೆಯುವುದು ಅನಿವಾರ್ಯವಾಯಿತು. ಭೂತಾರಾಧನೆ ಮತ್ತು ಚಿತ್ರಕಲೆ ಕುರಿತು ಗ್ರಂಥ ಇನ್ನು ನಮ್ಮ ಕೈ ಸೇರದೇ ಇರುವುದರಿಂದ ಸಧ್ಯ ಬಂದಿರುವ ಒಂಬತ್ತು ಕಿರು ಗ್ರಂಥಗಳನ್ನು ಪ್ರಕಟಿಸುತ್ತಿದ್ದೇವೆ.

ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಎ. ಲೂಯಿಸ್ ಮತ್ತು ಪ್ರಕಟಣಾ ಸಮಿತಿಯ ಸದಸ್ಯರು ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರು ಈ ಯೋಜನೆಯಲ್ಲಿ ಈ ಗ್ರಂಥಗಳನ್ನು ಪ್ರಕಟಿಸಲು ಸರ್ವಾನುಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದರೊಂದಿಗೆ ಸಹಕಾರ ನೀಡಿದ್ದಾರೆ. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಅವರು ನನಗಿಂತಲೂ ಹೆಚ್ಚು ಕಾಳಜಿ ವಹಿಸಿ ಬರಹಗಳನ್ನು ತರಿಸಿಕೊಡಲು ಮತ್ತು ಮುದ್ರಣದ ಜವಾಬ್ದಾರಿಯನ್ನು ಹೊತ್ತು ಸಹಾಯ ಮಾಡಿದ್ದಾರೆ. ಅವರು ತೋರಿದ ಪ್ರೀತಿ, ಸಹಕಾರಕ್ಕೆ ವಂದನೆಗಳು. ಪ್ರಕಟಣೆಯಲ್ಲಿ ಸಹಾಯ ಮಾಡಿದ ಸ್ನೇಹಿತ ಸದಸ್ಯರಾದ ಪ.ಸ.ಕುಮಾರ ಅವರಿಗೂ ಅಕಾಡೆಮಿಯ ಸಿಬ್ಬಂದಿ ವರ್ಗದವರಿಗೂ ಮತ್ತು ಕಡಿಮೆ ವೇಳೆಯಲ್ಲಿ ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ ಮಾಡಿಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾ ಯಾಜಿ ಮತ್ತು ಗಣೇಶ ಯಾಜಿಯವರಿಗೆ ಸಹ ವಂದನೆಗಳನ್ನು ತಿಳಿಸುವುದು ನನ್ನ ಕರ್ತವ್ಯ ವಾಗಿದೆ.

**ಬಸವ ಜಯಂತಿ** — **ಡಾ. ಎಸ್. ಸಿ. ಪಾಟೀಲ**

**೨೦೦೪** — **ಸಂಪಾದಕರು**

ಮಾನವನ ಸಾಂಸ್ಕೃತಿಕ ಬೆಳವಣಿಗೆಯ ಇತಿಹಾಸದಲ್ಲಿ ಕಲಾಸೃಷ್ಟಿಯೂ ಒಂದು ಮಹತ್ವದ ಹಂತ. ನಾಗರಿಕತೆಯ ಮೆಟ್ಟಿಲ್ಲನ್ನೇರುವದಕ್ಕಿಂತ ಪೂರ್ವದಲ್ಲಿಯೇ ಆದಿವಾಸಿ ಮಾನವ ನಿಸರ್ಗದ ಮಡಿಲಲ್ಲಿ ವಾಸಿಸುವ ಸಂದರ್ಭದಲ್ಲಿ ತನ್ನ ಮನಸ್ಸಿನ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಚಿತ್ರರಚನೆಯ ಮಾಧ್ಯಮಕ್ಕೆ ಕಾಲಿಟ್ಟಿರಬೇಕು. ಶೃತಿ ಪಾತಳಿಯಲ್ಲಿದ್ದ ಸೃಜನಶೀಲ ಮನಸ್ಸು, ಸಾಂಸ್ಕೃತಿಕ ಜ್ಞಾನಸಂಪತ್ತು ಕ್ರಮೇಣ ದೃಶ್ಯಮಾಧ್ಯಮದಲ್ಲಿ ಅಭಿವ್ಯಕ್ತಿ ಪಡೆಯಿತು. ವ್ಯಕ್ತಿ ತನ್ನ ಮತ್ತು ಸಮೂಹದ ಜೀವನದಲ್ಲಿ ಸೌಂದರ್ಯದ ಭಾವನೆಗಳನ್ನು ಧಾರ್ಮಿಕ ವಿಧಿಕ್ರಿಯೆಯ ಹಿನ್ನಲೆಯಲ್ಲಿ ಮನರಂಜನೆಯ ಸಾಧನವಾಗಿ, ವೃತ್ತಿಯ ಒಂದು ಭಾಗವಾಗಿ ಹೀಗೆ ಹತ್ತು ಹಲವು ರೀತಿಯಲ್ಲಿ ಹೊರ ಹಾಕುತ್ತ ಬಂದಿದ್ದಾನೆ. ಈ ಸೃಜನಾತ್ಮಕವಾದ ಪುರಾತನ ಕಲಾಸೃಷ್ಟಿ, ವ್ಯಕ್ತಿಯಿಂದ ವ್ಯಕ್ತಿಗೆ ಪರಿಸರದಿಂದ ಪರಿಸರಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದು ಸಹಜವಾದ ಅಂಶ. ವ್ಯಕ್ತಿ ಹಲವಾರು ರೀತಿಯ ಪ್ರಭಾವ ಪ್ರೇರಣೆಗಳಿಗೆ ಒಳಗಾಗಿ ಹೀಗೆ ತನ್ನ ಸ್ವರೂಪದಲ್ಲಿ ಆಗಾಗ ಬದಲಾವಣೆ ಮಾಡುತ್ತ ಬಂದರೂಸಹ ಆಯಾ ಪ್ರದೇಶದ ಕಲೆಗಳು ಆಯಾ ಜನರ ವಿಭಿನ್ನ ಮನೋಭಾವದ ಸುಂದರ ಅಭಿವ್ಯಕ್ತಿಯ ಪ್ರತೀಕಗಳಾಗಿ ಬೆಳದುಬಂದಿವೆ.

ಜನಪದ ಚಿತ್ರಕಲೆಯ ಒಂದು ವಿಶಿಷ್ಟ ಪ್ರಕಾರವಾದ ಹಚ್ಚೆಯ ಚಿತ್ರಕಲೆ ಈ ಮೇಲಿನ ಮಾತುಗಳ ಆಶಯದ ಹಿನ್ನಲೆಯಲ್ಲಿ ಬೆಳೆದು ಬಂದ ವಿಶ್ವವ್ಯಾಪಿ ಕಲೆ. ಇದಕ್ಕೆ ಲೋಕ ವ್ಯಾಪಕತ್ವ ಇರುವಂತೆಯೇ ಪ್ರಾಚೀನ ಇತಿಹಾಸವು ಇದೆ. ಇಂದು ನಾಗರೀಕತೆಯ ಬದಲವಣೆಯಿಂದಾಗಿ ಮೌಢ್ಯವೆಂದು ಹಣಪಟ್ಟಿ ಕಟ್ಟಿಕೊಂಡ ಈ ಕಲೆ ಅಲ್ಲಲ್ಲಿ ಒಂದಿಷ್ಟು ಜೀವ ಹಿಡಿದುಕೊಂಡು ಬದುಕಿದೆ. ಈ ಪುರಾತನ ಕಲೆಯ ಹಿಂದಿರುವ ಜ್ಞಾನದ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು. ಹೀಗೆ ವೈಜ್ಞಾನಿಕ ನೆಲೆಯಲ್ಲಿ ಈ ಕಲೆಯ ವಿಶ್ಲೇಷಣೆ ಮಾಡುವುದರಿಂದ ನಮ್ಮ ಪ್ರಾಚೀನ

ಜನರ ವಿಶಾಲ ಮನೋಭಾವನೆ ಅವರ ಅಪಾರವಾದ ಶಾಸ್ತ್ರಬದ್ಧ ತಿಳಿವಳಿಕೆ ಇಂದಿಗೂ ನಮಗೆ ಪ್ರಸ್ತುತವಾಗಿದೆ. ಹೀಗೆ ಹೊಸ ಪ್ರೇರಣೆಗಳಿಗೆ ಈ ಕಲೆ ಸ್ಪೂರ್ತಿಯಾಗಬಹುದು. ಪಾಶ್ಚಿಮಾತ್ಯ ದೇಶಗಳಲ್ಲಿ ಇಂತಹ ಪ್ರಾಚೀನ ಕಲೆಗಳ ವ್ಯವಸ್ಥಿತ ಅಧ್ಯಯನ ಹಾಗೂ ಕಾಯ್ದಿರಿಸುವಿಕೆಗಾಗಿ ದೊಡ್ಡ ದೊಡ್ಡ ಅಧ್ಯಯನ ವಿಭಾಗಗಳೇ ಸ್ಥಾಪನೆಗೊಂಡಿವೆ. ನಮ್ಮ ದೇಶದಲ್ಲಿ ನಾವು ಇನ್ನು ಯಾವ ಮಟ್ಟದಲ್ಲಿದ್ದೇವೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು.

ಚರ್ಮದ ಮೇಲೆ ಚಿತ್ರವಾಗಿ ಸ್ಥಾನ ಪಡೆದ ಹಚ್ಚೆ, ಕಲೆಯಾಗಿ ಪ್ರಪಂಚವ್ಯಾಪಿ ದೀರ್ಘ ಇತಿಹಾಸವನ್ನು ಹೊಂದಿದೆ. ಹಲವಾರು ವಿದ್ವಾಂಸರು ಈ ಹಚ್ಚೆ ಕಲೆಯ ಪ್ರಾಚೀನತೆ ಕುರಿತು ಚರ್ಚಿಸಿದ್ದಾರೆ. ಅದರ ವಿಕಾಸ, ಪ್ರಸಾರ ಕುರಿತು ಆಲೋಚನೆಗಳನ್ನೂ ಹರಿಯಬಿಟ್ಟಿದ್ದಾರೆ. ಕನ್ನಡದಲ್ಲಿ 'ಹಚ್ಚೆ' ಪದವು 'ಪಚ್ಚೆ' ಮೂಲದಿಂದ ಬಂದಿದೆ. ಪಚ್ಚೆ ಎಂದರೆ 'ಹಸಿರು ಮಣಿ' ಅಥವಾ ರತ್ನ, ಹಸಿರು ಬಣ್ಣ, ಹಣೆಯಮೇಲಿನ ಸ್ಥಿರವಾದ ತಿಲಕ ಎಂಬರ್ಥಗಳಿವೆ. ಚರ್ಮದ ಮೇಲೆ ಶಾಶ್ವತವಾಗಿ ಇರಬಲ್ಲ ಹಸಿರು ಬಣ್ಣದ ಗುರುತೇ ಹಚ್ಚೆಯಾಗಿದೆ.

ಕಿಟೆಲ್ ಕೋಶದಲ್ಲಿ ಹಚ್ಚೆಯನ್ನು ಕುರಿತು ಅಚ್ಚೆ, ಪಚ್ಚೆ, ಹೆಚ್ಚೆ ಎಂಬರ್ಥಗಳಿವೆ. ಮಲೆಯಾಳಿ ಭಾಷೆಯಲ್ಲಿ ಹಚ್ಚೆ ಕಲೆಗೆ ಪಚ್ಚ ಕುತ್ತುಕ ಅಂದರೆ ಹಚ್ಚೆ ಕುಕ್ಕುವುದು ಎನ್ನುತ್ತಾರೆ. ತಮಿಳು ಭಾಷೆಯಲ್ಲಿ ಪಚ, ಪಚ್ಚೆ ಎಂಬ ರೂಪಗಳಿವೆ. ಡಾ, ಎಂ.ಎಂ.ಕಲಬುರ್ಗಿಯವರು ಹೇಳುವಂತೆ "ದೇಹದ ಬೇರೆ ಬೇರೆ ಭಾಗಗಳ ಮೇಲೆ ಬಿಡಿಸಿಕೊಂಡ ಚಿತ್ರ, ಚಿತ್ತಾರ ಮತ್ತು ಬರೆಯಿಸಿಕೊಂಡ ಅಕ್ಷರಗಳಿಗೆ ಹಣಚಿ" ಎಂದು ಕರೆದಿದ್ದಾರೆ. ಶರೀರದ ಮೇಲೆ ಶಾಶ್ವತವಾಗಿ ಬಣ್ಣದ ಮೂಲಕ ಮೂಡಿಸಿಕೊಳ್ಳುವ ವಿನ್ಯಾಸ ಅಥವಾ ಚಿತ್ರವನ್ನು ಹಚ್ಚೆ ಚಿತ್ರ ಎಂದು ಕರೆಯಬಹುದು.

ಭಾರತದಲ್ಲಿ ಹಚ್ಚೆ ಬೇರೆ ಬೇರೆ ಜನಾಂಗಗಳಲ್ಲಿ ಬೇರೆ ಬೇರೆ ಹೆಸರಿನಿಂದ ಪ್ರಚಲಿತದಲ್ಲಿದೆ. ಮರಾಠಿಯಲ್ಲಿ 'ಗೋಂದನ್', ತೆಲುಗಿನಲ್ಲಿ ಮಚ್ಚಾ, ತುಳುವಿನಲ್ಲಿ 'ಕೈಕಾ ಪಾಡ್ತಾ', ಕೊಂಕಣಿಯಲ್ಲಿ ಹಚ್ಚೆ ಬಟ್ಟಾ ಹಿಂದಿ-ಉರ್ದುವಿನಲ್ಲಿ 'ಗೋದನಾ' ಎಂದು ಕರೆಯಲ್ಪಡುತ್ತಿದೆ.

ಕರ್ನಾಟಕದ ಮೈಸೂರು ಭಾಗದಲ್ಲಿ ಹಚ್ಚೆ, ಹೆಚ್ಚೆ ಹಚ್ಚಿ ಎಂದೂ ವಿಜಾಪೂರ ಕಲಬುರ್ಗಿ ಭಾಗದಲ್ಲಿ ಹಂಚಿಬೊಟ್ಟು, ಹಚ್ಚೆ ಎಂದೂ, ಧಾರವಾಡ, ಬೆಳಗಾವಿ ಭಾಗದಲ್ಲಿ ಹಣಚಿ, ಹಚ್ಚಿ, ಹಚ್ಚೆ, ಎಂದೂ ಬಳ್ಳಾರಿ, ರಾಯಚೂರ, ಬೀದರ ಕಡೆಗೆ ಅಚ್ಚೆ, ಹಸಿರು, ಅಣಚಿಬಟ್ಟು ಎಂದೂ ಮುಂತಾದ ಹೆಸರುಗಳಿಂದ ಇದು ಪ್ರಚಲಿತದಲ್ಲಿದೆ. ಹೀಗೆ ಹೆಸರು ಮತ್ತು ಅರ್ಥಗಳಲ್ಲಿ ವೈವಿಧ್ಯಮಯತೆಯನ್ನು

ಮೈಗೂಡಿಸಿಕೊಂಡಿರುವ ಹಚ್ಚೆ ಅತ್ಯಂತ ಪ್ರಾಚೀನವಾದುದಾಗಿದೆ.

**ಹಚ್ಚೆಯ ಪ್ರಾಚೀನತೆ.**

ಭಾರತ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ಹಚ್ಚೆಯ ಕಲೆಯನ್ನು ಅಧ್ಯಯನ ಮಾಡಿದ ಪಾಶ್ಚಿಮಾತ್ಯ ವಿದ್ವಾಂಸ ಜೆ.ಎಂ.ಕೆಂಪೆಬಲ್ ಅವರು ಹಚ್ಚೆ ಪ್ರಾಚೀನತೆಯ ಬಗೆಗೆ ಲಿಖಿತ ದಾಖಲೆ ನೀಡುತ್ತಾರೆ. ಇವರ ಪ್ರಕಾರ ಕ್ರಿ.ಪೂ. ೪೫೦ರಲ್ಲಿ ಹಚ್ಚೆ ಹಾಕಿಸಿಕೊಂಡ ವಿವರ ಬರುತ್ತದೆ. ಇನ್ನೊಂದು ಅಭಿಪ್ರಾಯದಂತೆ ಕ್ರಿ.ಪೂ. ೨೦೦೦ಕ್ಕೆ ಸೇರಿದ ಈಜಿಪ್ತನ ಮಮ್ಮಿ (ರಕ್ಷಿತ ಶವ) ಯೊಂದರ ಮೇಲೆ ಹಚ್ಚೆ ಇದ್ದುದು ಕಂಡುಬಂದಿದೆ. ಇವು ಸದ್ಯಕ್ಕೆ ಸಿಕ್ಕಿರುವ ಪ್ರಾಚೀನ ಉಲ್ಲೇಖಗಳಾಗಿವೆ. ಪ್ರಪಂಚದಾದ್ಯಂತ ಕ್ರಿ.ಪೂ.ದಿಂದಲೂ ಹಚ್ಚೆ ಸಂಪ್ರದಾಯ ಪ್ರಚಲಿತದಲ್ಲಿತ್ತು ಎಂಬುದನ್ನು ಈ ಕೆಳಗಿನ ವಿದ್ವಾಂಸರ ಅಭಿಪ್ರಾಯಗಳಲ್ಲಿ ಕಾಣಬಹುದಾಗಿದೆ.

ಜೆ. ಎಲಿಯಟ್ ಸ್ಮಿತ್ ಅವರು ಹಚ್ಚೆ ಕಲೆಯನ್ನು ಜಗತ್ತಿನ ಬಹುಪಾಲು ಕರಾವಳಿಯಾದ್ಯಂತ ಗುರುತಿಸಿದ್ದು, ಅದನ್ನು ಸೂರ್ಯಾರಾಧಕ ಸಂಸ್ಕೃತಿಯುಳ್ಳ ಜನತೆಯ ಕಲಾಮಾಧ್ಯಮವೆಂದಿದ್ದಾರೆ. ಹಿರೊಡೋಟಸ್ ಥೇಸಿಯಾದ ಮಹಿಳೆಯರು ತಮ್ಮ ದೊಡ್ಡಸ್ತಿಕೆಯ ಕುರುಹಾಗಿ ಹಚ್ಚೆ ಚುಚ್ಚಿಸಿಕೊಳ್ಳುತ್ತಿದ್ದರು ಎಂದಿದ್ದರೆ, ಪ್ಲಿನಿ ಡೇಸಿಯನ್ ಮತ್ತು ಸರ್ಮಾಟಿಯನ್ ಅವರು ಪುರುಷರು ತಮ್ಮ ದೇಹಗಳನ್ನು ಹಚ್ಚೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರು ಎಂದಿದ್ದಾರೆ. ಚಾರ್ಲ್ಸ ಡಾರ್ವಿನ್ ಉತ್ತರಧ್ರುವದಿಂದ ದಕ್ಷಿಣಧ್ರುವ ಪ್ರಾಂತದ ನ್ಯೂಜಿಲೆಂಡಿನವರೆಗಿರುವ ಯಾವುದೊಂದು ದೊಡ್ಡ ದೇಶದಲ್ಲಿಯಾಗಲಿ ಹಚ್ಚೆ ಹಾಕಿಸಿಕೊಳ್ಳದೆ ಇರುವಂತಹ ಬುಡಕಟ್ಟುಗಳ ಪ್ರಾಚೀನ ಸಂಸ್ಕೃತಿಯುಳ್ಳ ಜನರನ್ನು ಹೆಸರಿಸುವುದು ಅಸಾಧ್ಯ ಎಂದಿದ್ದಾರೆ. ಡಬ್ಲೂ ಜೋಯಸ್ ತಮ್ಮ ದೇಹಕ್ಕೆ ಬಣ್ಣ ಹಚ್ಚಿಕೊಳ್ಳದಿರುವ ಅಥವಾ ಹಚ್ಚೆ ಚುಚ್ಚಿಸಿಕೊಳ್ಳದಿರುವ ಜನರೇ ಜಗತ್ತಿನಲ್ಲಿಲ್ಲ ಎಂದಿದ್ದಾರೆ. ಹೀಗೆ ಹಚ್ಚೆ ಪ್ರಪಂಚದ ಎಲ್ಲ ಭಾಗದಲ್ಲೂ ನೋಡಲು ದೊರೆಯುವಷ್ಟು ವ್ಯಾಪಕವಾದುದಾಗಿದೆ. ಅದರ ವ್ಯಾಪಕ ಪ್ರಾಚೀನತೆಯೇ ಕಾಲನಿರ್ದಾರಕ್ಕೆ ತೊಡಕಾಗಿರುವಂತಿದೆ. ಒಟ್ಟಾರೆಯಾಗಿ ಮಾನವನಲ್ಲಿ ಸೌಂದರ್ಯಪ್ರಜ್ಞೆ ಯಾವಾಗ ಬೆಳೆಯಿತೋ ಆಗ ಹಚ್ಚೆಯೂ ಉಗಮಗೊಂಡಿದೆಯೆನ್ನಬೇಕು.

**ಭಾರತದಲ್ಲಿ ಹಚ್ಚೆ:**

ಜಗತ್ತಿನ ಬಹುಭಾಗ, ನಾಗರೀಕತೆಯ ಆವಿಷ್ಕಾರದೊಂದಿಗೆ ಪರಿಚಿತಗೊಳ್ಳತೊಡಗಿತು. ಇಂದು ಪ್ರಪಂಚ ಸಣ್ಣದಾಗಿರುವಷ್ಟು ಸೌಲಭ್ಯವಿದ್ದುದರಿಂದ

ಪರಸ್ಪರರ ಸಂಸ್ಕೃತಿ ಕೊಡು-ಕೊಳ್ಳುವುದು ನಿರಂತರ ಕ್ರಿಯೆಯಾಗಿದೆ. ಆದರೆ ಪ್ರಾಚೀನ ಕಾಲದವರು ಭಾರತವನ್ನೇ ಖಂಡವೆಂದು ಕರೆದು, ತಮ್ಮದೇ ಆದ ಪ್ರಪಂಚದಲ್ಲಿದ್ದರು. ಇಂತಹ ಕಾಲಾವಧಿಯಲ್ಲಿ ಪರಸ್ಪರ ಸಂಸ್ಕೃತಿಯ ಪರಿಚಯವಿಲ್ಲದಿದ್ದರೂ ಹಚ್ಚೆಯಂತಹ ಚರ್ಮದ ಚಿತ್ರಕಲೆ ಜಗತ್ತಿನ ಎಲ್ಲೆಡೆಯಲ್ಲೂ ಕಂಡುಬರುವುದು ಅಚ್ಚರಿಯ ವಿಷಯವಾಗಿದೆ. ಪ್ರಪಂಚದ ಉಳಿದೆಡೆಯಂತೆ ಭಾರತದಲ್ಲಿಯೂ ಪ್ರಾಚೀನವಾಗಿ ಹಚ್ಚೆಯ ಕುರುಹುಗಳನ್ನು ಕಾಣಬಹುದು. ಭಾರತದಲ್ಲಿ ಹಚ್ಚೆಯ ಪ್ರಾಚೀನತೆಯನ್ನು ಈ ಕೆಳಗಿನ ಶಿಲ್ಪದ ಸಹಾಯದಿಂದ ಕಂಡುಕೊಳ್ಳಬಹುದು.

ಇದು, ಮಧ್ಯಪ್ರದೇಶ ಭಾರುತದ ಕ್ರಿ.ಪೂ. ೨ನೇಯ ಶತಮಾನಕ್ಕೆ ಸೇರಿದ ಶುಂಗ ಅರಸರ ಕಾಲದ ಶಿಲ್ಪ ಇದರ ವಿವರ ಹೀಗಿದೆ; ಇದು ಚಂದ್ರಯಕ್ಷಿಯ ಶಿಲ್ಪ ಅವಳು ಶ್ರೀ ಶುಭದ ಅದೃಷ್ಟದ ಚಿಹ್ನೆ ಧರಿಸಿರುವುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಚಂದ್ರ, ನಕ್ಷತ್ರ ಆಕಾರದಲ್ಲಿವೆ. ಮಧ್ಯಪ್ರದೇಶದ ಮಾಳವ, ಗೊಂಡ ಪ್ರದೇಶಗಳ ಜನಪದರು ಈ ಮುಖದ ಮೇಲೆ ಹಾಕಿಸಿಕೊಳ್ಳುವ ಹಚ್ಚೆಯ ಚಿತ್ರಗಳು ಈ ಚಂದ್ರ ಯಕ್ಷಿಯ ಕಪೋಲ, ಅರ್ಥೈಸಿದರೆ ಭಾರತದಲ್ಲಿ ಹಚ್ಚೆಯ ಪ್ರಾಚೀನತೆ ಕ್ರಿ.ಪೂ. ೨.ನೇಯ ಶತಮಾನದಷ್ಟು ಹಿಂದೆ ಸರಿಯುತ್ತದೆ. ಪ್ರಾಚೀನ ಕಾಲದ ನಾಣ್ಯಗಳನ್ನು ಶೋಧಿಸಿದ ಡಾ: ವಾಸುದೇವ ಶರಣ ಅಗರವಾಲ ಅವರು ನಾಣ್ಯಗಳ ಮೇಲೆ ಹಚ್ಚೆಯ ಚಿತ್ರವಿನ್ಯಾಸಗಳನ್ನು ಗುರುತಿಸಿದ್ದಾರೆ. ಮಾಳವ ಗಿರಿಜನ ವಾಸಿಗಳಲ್ಲಿ ಈ ನಾಣ್ಯಗಳ ಮೇಲಿನ ಚಿತ್ರಗಳಂತಿರುವ ಹಚ್ಚೆ ವಿನ್ಯಾಸಗಳನ್ನೂ ಗುರುತಿಸಿ, ಸಾಮ್ಯತೆಗಳನ್ನು ವಿವರಿಸಿದ್ದಾರೆ.

ಇವು ಅಗರವಾಲ್ ಅವರು ಹೇಳುವ ನಾಣ್ಯಗಳಲ್ಲಿಯ ಹಚ್ಚೆಯ p ಚಿತ್ರವಿನ್ಯಾಸಗಳು.

ಆದರೆ ಈ ನಾಣ್ಯಗಳ ನಿರ್ದಿಷ್ಟಕಾಲ ನಿರ್ಣಯವಾದರೆ, ಹಚ್ಚೆಯ ಪ್ರಾಚೀನತೆಯನ್ನು ನಿರ್ಧರಿಸಬಹುದಾಗಿದೆ. ಇಲ್ಲಿ ಹಚ್ಚೆಯ ಚಿತ್ರವಿನ್ಯಾಸಗಳು ಶಿಲ್ಪದ ಹಾಗೂ ನಾಣ್ಯಗಳ ಮೇಲೆ ಕಂಡುಬಂದಿರುವುದು ಅಪರೂಪದ ನಿದರ್ಶನಗಳಾಗಿವೆ.

## ಕರ್ನಾಟಕದಲ್ಲಿ ಹಚ್ಚೆ:

ಕರ್ನಾಟಕದಲ್ಲಿ ಹಚ್ಚೆ ಕಲೆಯ ಪ್ರಾಚೀನತೆಯನ್ನು ವಿದೇಶಿ ಪ್ರವಾಸಿಗರ ಪ್ರವಾಸಕಥನ ಹಾಗೂ ಕಾವ್ಯಗಳ ಹಿನ್ನಲೆಯಲ್ಲಿ ಗುರುತಿಸಬಹುದಾಗಿದೆ.

ವಿದೇಶಿ ಪ್ರವಾಸಿಗರಾದ ನಿಕೊಲೊ ಕೊಂತಿ ಹಾಗೂ ತಾವರನೋ ಅವರ ಪ್ರವಾಸಿ ಬರೆಹಗಳಲ್ಲಿ ಕರ್ನಾಟಕದ ಹಚ್ಚೆಯ ಪ್ರಸ್ತಾಪಬರುತ್ತಿದೆ. ಕ್ರಿ.ಶ. ೧೬೪೧-೧೬೬೭ರಲ್ಲಿ ಬೆಟ್ಟಿ ನೀಡಿದ ತಾವರನ್ನೂ ಹೆಂಗಸರು ಸೊಂಟದ ಮೇಲ್ಭಾಗವನ್ನು ಬಗೆಬಗೆಯ ಹೂಗಳಂತೆ ಹಚ್ಚೆ ಹೊಯ್ಯಿಸಿ ಅಲಂಕಾರ ಮಾಡಿಕೊಂಡಿರುತ್ತಾರೆ. ಆ ಹೂವಿನ ಹಚ್ಚೆಗೆ ಯಾವುದೋ ಬೇರಿನ ರಸದಿಂದ ವಿಧ ವಿಧವಾದ ಬಣ್ಣ ಹಾಕುತ್ತಾರೆ. ಆಗ ಅವರ ಚರ್ಮವು ಹೂವನ್ನು ನೇಯ್ದು ಬಟ್ಟಯಂತೆ ಕಾಣುತ್ತದೆ ಎಂದಿದ್ದಾನೆ. ಕ್ರಿ.ಶ. ೧೪೪೪ರಲ್ಲಿ ಭಾರತಕ್ಕೆ ಬಂದು ವಿಜಯನಗರಕ್ಕೆ ಬೆಟ್ಟಿ ನೀಡಿದ ನಿಕೊಲೊ ಕೊಂತಿ ಇಲ್ಲಿ ಹೆಂಗಸರು ಗಂಡಸರೆಂಬ ಭೇದವಿಲ್ಲದೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಎಂದು ಬರೆದಿದ್ದಾನೆ. ಕ್ರಿ.ಶ.೧೪೪೭ರ ಕಾಲಾವಧಿಯಲ್ಲಿದ್ದ ವ್ಯಾಸರಾಯರು ಕೃಷ್ಣನನ್ನು ವರ್ಣಿಸುತ್ತ

" ಮೃಗನಾಭಿ ತಿಲಕ ನೊಸಲಲಿ ಹಚ್ಚೆಬಟ್ಟು
ಕಡೆಗಣ್ಣಕೆಂಪು ಹಚ್ಚೆಯ ರೇಖೆಗಳ
ಬೆಡಗು ಮುತ್ತಿನ ಮೂಗುತಿ ನಾಸಿಕದಲ್ಲಿ"

ಎಂದು ಹಾಡಿದ್ದಾರೆ. ಈ ಹಾಡಿನಲ್ಲಿ ಹಣೆಯ ಮೇಲೆ ಹಚ್ಚೆಯಬಟ್ಟು ಎಂದು ಕರೆದದ್ದನ್ನು ಗಮನಿಸಿಬೇಕು.

ಮಲ್ಲಿಕಾರ್ಜುನನ (ಕ್ರಿ.ಶ.ಸುಮಾರು ೧೨೫೦) ಸೂಕ್ತಿ ಸುಧಾರ್ಣವದಲ್ಲಿ ಅಣಚಿತನವಂ ಕೈಕೋಳ್ ನಿನ್ನೊಲೆ ಭಾಗ್ಯದ ಭದ್ರ ಲಕ್ಷಣದ ಪದದೊಳ್ ಸಂದಿ ಸೌಭಾಗ್ಯದಿಂ ಸ್ವಜನಂಗಳಂ ತಣಿಸಿ ಎಂಬ ಉಲ್ಲೇಖವಿದೆ. ಇಲ್ಲಿಯ 'ಅಣಚೆ' ಎನ್ನುವುದು ಹಚ್ಚೆಯನ್ನು ಸೂಚಿಸುತ್ತದೆ. ನಿಘಂಟಿನಲ್ಲಿ ಅಣಚೆ ಎನ್ನುವ ಪದಕ್ಕೆ ಮುತ್ತೈದೆ, ಸುಮಂಗಲಿ, ತಾಳಿ, ಗರತಿ, ಸೌಭಾಗ್ಯವತಿ ಎಂಬ ಅರ್ಥಗಳಿವೆ. ಹನ್ನೆರಡನೆಯ ಶತಮಾನದ ಬಸವಣ್ಣನವರ ವಚನವೊಂದರಲ್ಲಿ ಐದೆ ಅಣಚೆಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ? ಎಂಬ ಪ್ರಯೋಗವಿದೆ. ಇದನ್ನೂ ಗಮನಿಸಿದರೆ, ಅಣಚೆ ಪ್ರಾಚೀನ ಸ್ತ್ರೀಯರ ಮಂಗಲ ಚಿಹ್ನೆ ಯಾಗಿದ್ದುದು

ವ್ಯಕ್ತವಾಗುತ್ತದೆ. ಇಂಥ ಅಣಚೆ ಹಾಕಿಸಿಕೊಂಡು ಪತಿದ್ರೋಹ ಲಿಂಗದ್ರೋಹ ಮಾಡುವವರನ್ನು ಚನ್ನಬಸಣ್ಣನವರು ಭಕ್ತಾಂಗನೆಯರು ತಮ್ಮ ಲಿಂಗ ಶರೀರಂಗಳ ಮದ್ಯದಲ್ಲಿ ಹರಭಕ್ತಿಗೆ ಹೊರಗಾದ ಅಸುರಾಸಿಕವಪ್ಪ ಹಸಿರು ಹಚ್ಚೆಗಳೆಂಬ ಪತಿತ ಲೇಖನವಾದಿಯಾದ ಅನ್ಯ ಚಿಹ್ನೆಗಳು ಅಂಕಿತ ಧಾರಣ ಲೇಖನಗಳ ಮಾಡಿಕೊಂಡು ಎಂದು ಟೀಕಿಸಿದ್ದಾರೆ. ಬಹುಶಃ ಲಿಂಗವಂತೇತರ ಸ್ತ್ರೀಯರಿಗೆ ಹಸಿರು ಹಚ್ಚೆ ಮೀಸಲಾದ ಕಾಲವೊಂದಿರಬೇಕೆನಿಸುತ್ತದೆ. ಚೆನ್ನಬಸವಣ್ಣನವರು ಸ್ಪಷ್ಟವಾಗಿ ಹಸಿರು ಹಚ್ಚೆ ಎಂಬ ಪದಪ್ರಯೋಗ ಮಾಡಿದ್ದಾರೆ. ದಶರಥನ ಮಗ ರಘುರಾಮನು ರಾಕ್ಷಸರನ್ನು ಸಂಹರಿಸಿ, ಅವರ ಸತಿಯರನ್ನು ಹಿಡಿತಂದು ಅವರ ಸರ್ವಾಂಗದಲ್ಲಿ ಕೆಲವು ಮುದ್ರೆಗಳನ್ನು ಒತ್ತಿಸಿ, ದಕ್ಷಿಣಕ್ಕೆ ಕಳಿಸಿಕೊಟ್ಟ ವಿವರ ಇನ್ನೊಂದು ವಚನದಲ್ಲಿ ಹೀಗಿದೆ: ಆ ಅಸುರ ಸತಿಯರು ತಮ್ಮಂಗ ಮಧ್ಯದೊಳು ಬರೆದೊತ್ತಿದ ಆ ಭಾಗ, ಮೇಢ್ರ , ಶ್ವಪಚ್, ಪಾದುಕೆ, ಶ್ವಾನಮುದ್ರೆಗಳನ್ನು, ತಮ್ಮುಪಮೆಗಳಿಂದ ಹಸಿರು ಹಚ್ಚಗಳೆಂದು ಹೆಸರಿಟ್ಟುಕೊಂಡು ಹಲವಂದದಿಂದ ನುಡಿದು ಬರೆದಿರಿದುಕೊಂಡು, ನಡೆದು ಬಳಿವಿಡಿದು ಬಂದ ಈ ಪತಿತ ಲೇಖನವನ್ನು ಹರಭಕ್ತಾಂಗನೆಯರು ತಮ್ಮ ಕರಬಾಳ ಶರೀರಂಗಳ ಮಧ್ಯದಲ್ಲಿ ಮುಳೊನೆಗಳಿಂದ ಬರೆದಿರಿದುಕೊಂಡು ಎಂಬ ವಿವರವಿದೆ. ಇಲ್ಲಿ ಹಸಿರು ಹಚ್ಚೆಯನ್ನು ಮುಳ್ಳೂನೆಗಳಿಂದ ಬರೆಯುತ್ತಿದ್ದ ವಿವರ ದಾಖಲಾಗಿದೆ. ಇದರೊದಿಗೆ ರಾಮಾಯಣ ಕಾಲದಲ್ಲಿ ಹಚ್ಚೆ ಹಾಕುವ ಕ್ರಿಯೆಯಿತ್ತೆಂಬ ವಿವರವನ್ನೂ ಈ ವಚನ ನೀಡುತ್ತದೆ. ಮಡಿವಾಳ ಮಾಚಿದೇವ ಭವಿ ಪ್ರಾಣಿಗಳಂತೆ ಸರ್ವಾಂಗಕ್ಕೆ ಹಚ್ಚೆಯನುರಿಸಿಕೊಂಡು ಎಂದು ತನ್ನೊಂದು ವಚನದಲ್ಲಿ ಹೇಳಿದ್ದಾನೆ. ಜನಾಂಗದಿಂದ ಜನಾಂಗಕ್ಕೆ ಹಚ್ಚೆ ಪರಂಪರೆ ಬೇರೆಯಾಗಿತ್ತೆಂಬ ಅಂಶವನ್ನು ಇಲ್ಲಿ ಗುರುತಿಸಬಹುದಾಗಿದೆ. ಡಾ. ಎಂ.ಎಂ. ಕಲಬುರ್ಗಿಯವರು ಹಚ್ಚೆಯ ಪ್ರಾಚೀನತೆಯನ್ನು ಕುರಿತು ವಿವರಿಸುತ್ತ ೧೨ನೇ ಶತಮಾನದಲ್ಲಿ ಶಿವಶರಣರ ವಚನೊಲ್ಲೇಖವನ್ನು ನೀಡುತ್ತಾರೆ. ಆದರೆ ಬಸವಣ್ಣನವರ ಅಣಚೆ ಪದ ಪ್ರಯೋಗದ ವಚನವೇ ಹಚ್ಚೆಯ ಪ್ರಾಚೀನೋಲ್ಲೇಖವೆಂಬ ಅವರ ಅಭಿಪ್ರಾಯವನ್ನು ಮೀರಿ ೧೨ನೇಯ ಶತಮಾನದ ಪೂರ್ವದ (೧೦ನೇ ಶತಮಾನದ) ಪಂಪನ ಕಾವ್ಯದಲ್ಲಿ ಹಚ್ಚೆಯ ಮಾಹಿತಿ ದೊರೆಯುತ್ತದೆ.

ಪಂಪನ 'ಆದಿಪುರಾಣ'ದಲ್ಲಿ ಶ್ರೀಮತಿ ವಿವಾಹಕ್ಕೆಂದು ಅಲಂಕಾರ ಮಾಡಿದ ವರ್ಣನೆ ಹೀಗಿದೆ; ಕತ್ತುರಿಯೋಳ್ ಅಂಟಿದ ಪರಿಚೆಯ ಪರಿಚೆಯೋಳ್ ಪರಿಚಯಂ ಪಡೆದ ಮದವಟಿಯಂ ಮದವಟಿಯೋಳ್ ಪರಿಚಯಂ ಪಡೆದ ಮದವಟಿಯಂ ಮದವಟ್ಟಿಯೋಳ್ ಒಡಂಬಟ್ಟ ವಿಫುಲ ಕಪೋಳ ತಳ ಲಿಖಿತ ವಿಚಿತ್ರ ಪತ್ರಲೇಖೆಯಂ... ಇಲ್ಲಿಯ ಲಿಖಿತ ವಿಚಿತ್ರ ಪತ್ರಲೇಖೆ ಹಚ್ಚೆಯ ವಿವಿಧ

ಚಿತ್ರಗಳಾಗಿರಬೇಕೆನಿಸುತ್ತದೆ. ಇಲ್ಲವೆ ಮದರಂಗಿಯ ವಿವಿಧ ಚಿತ್ರ ವಿನ್ಯಾಸಗಳಾದರೂ ಆಗಿರಬೇಕು. ಒಟ್ಟಾರೆ ಇಲ್ಲಿಯ ಪರಿಚೆ, ಮದವಟ್ಟೆ ಹಾಗೂ ಲಿಖಿತ ವಿಚಿತ್ರಪತ್ರಲೇಖೆಯೆಂಬ ಪದಗುಚ್ಛಗಳು ಚರ್ಮದ ಮೇಲಿನ ಚಿತ್ರಕಲೆಯನ್ನು ಸೂಚಿಸುತ್ತವೆ.

ಹೀಗೆ ಕನ್ನಡ ಕಾವ್ಯಗಳಲ್ಲಿ ಹಚ್ಚೆಯ ಉಲ್ಲೇಖವಿರುವಂತೆ, ಜನಪದ ಸಾಹಿತ್ಯದಲ್ಲಿಯೂ ವಿವರಗಳು ದಾಖಲಾಗಿರುತ್ತವೆ. ಮುತ್ತೈದೆತನದ ಪ್ರತೀಕವಾಗಿ ಹಚ್ಚೆ ಜನಪದರಲ್ಲಿ ಹಿಂದಿನಿಂದಲೂ ಬಳಕೆಯಲ್ಲಿರುವುದನ್ನು ಹಚ್ಚೆಗೆ ಸಂಬಂಧಿಸಿದ ಜನಪದ ಹಾಡುಗಳು ತಿಳಿಸಿಕೊಡುತ್ತವೆ.

"ಗಂಗವ್ವ ಚುಚ್ಚಿಕೊಂಡ ಹಣಚಿ ಬೊಟ್ಟು ಗರತಿತನ ತಂತ ಕುಂಕುಮ ತಂತ ಕುಂಕುಮ ತಂತ"

ಎಂಬ ಈ ಸಾಲುಗಳನ್ನು ಗಮನಿಸಿದರೆ, ಕುಂಕುಮ ಸೌಭಾಗ್ಯಕ್ಕಾಗಿ ಹಣೆಯ ಮೇಲೆ ಹಚ್ಚೆ ನೆಲೆಯೂರಿತು: ಹಚ್ಚೆ ಹಾಕಿಸಿಕೊಂಡದ್ದಕ್ಕಾಗಿ ಮುತ್ತೈದೆ ಭಾಗ್ಯದ ಸಂಕೇತವಾದ ಕುಂಕುಮ ಹಣೆಯ ಮೇಲೆ ಬಂದಿತು ಎಂಬ ಅರ್ಥ ವ್ಯಕ್ತವಾಗುತ್ತದೆ.

ಜನಪದರಲ್ಲಿ ಹಚ್ಚೆ ಹಂಚೆ, ಹಚ್ಚೆಬಿಟ್ಟು ಮುಂತಾಗಿ ಶಬ್ದ ಪ್ರಯೋಗವಿದೆ. ಹಾಡಿನಲ್ಲಿಯೂ ಹೀಗೆಯೇ ಪ್ರಯೋಗವಾಗಿರುವುದು ಕಾಣುತ್ತವೆ.

ಹಚ್ಚನ ಹಚ್ಚೆಬೊಟ್ಟು ಉದ್ದನ ಮಲಿಕಟ್ಟು
ಸಿಗದಂಗ ಸಣ್ಣ ನಡುವಿನ ಎಲೆ ಬಾಲೆ
ಮುರುಕು ಮಾಡಬ್ಯಾಡ ಮುರದೀತು ||
ಹಣಚಿ ಬಟ್ಟಿನ ಮ್ಯಾಲ ಹರಿದಾಡುವ ಕುಂಕುಮ
ವಾರೀಗಿ ಪುರುಷ ಇದರೀಗಿ| ಕುಂತರ
ಹೆಚ್ಚಿನ ತವರ ಮರೆತೇನ॥
ಹಣಚಿ ಬಟ್ಟಿನ ಕೈಯ ಒತ್ತಿ ಹಿಡಿಯಲು ಬ್ಯಾಡ
ನೆತ್ತರಿಳಿದಾವು ಬೆರಳಿಗೆ ನನ ರಾಯ

ಅತ್ತಿ ಬೈದಾಳು ಕೈ ಬಿಡೋ

ಎಲ್ಲರಿಗೂ ಪರಿಚಿತವಿರುವ ಈ ಹಾಡುಗಳ ಅಂತರಂಗ, ಕೇಳಿದವರೆಲ್ಲ ಖುಷಿಪಡುವಂತೆ ರಸವತ್ತಾಗಿದೆ. ಮೊದಲ ಪದ್ಯದಲ್ಲಿ ಎಳೆಯ ಹುಡುಗಿಯೊಬ್ಬಳು ತನ್ನ ಹಸಿರು ಹಚ್ಚೆಯಿಂದಾಗಿ ಹೇಗೆ ಬಿಂಕ ಬಿನ್ನಾಣವನ್ನು ಮಾಡುತ್ತಿದ್ದಳೆಂದು ಚಿತ್ರಿಸಲಾಗಿದೆ. ಎರಡನೆಯ ಪದ್ಯವು ಮದುವೆಗೆ ಸಿದ್ಧಳಾಗಿ ನಿಂತ ತರುಣಿಯೊಬ್ಬಳು, ತನ್ನ ಹಣಚಿ ಬಟ್ಟಿನ ಕುಂಕುಮದ ಕೆಂಪಿನ ಹಾಗೆ ಎದುರಿಗೆ ಕುಳಿತಿರುವ ಗಂಡನನ್ನು ನೋಡಿ ಮೈಮರೆತ, ದಾಂಪತ್ಯದ ರಸಚಿತ್ರ ಮೂಡಿದೆ. ಹಣೆಯ ಮೇಲಿನ ಹಚ್ಚೆಯಂತೂ ಸೈ, ಬಟ್ಟುಗಳ ಮೇಲೆ ಹಚ್ಚೆ ಹಾಕಿದ ವಿವರವಿದೆ. ತಾನು ಬೆರಳಿಗೆ ಹಚ್ಚೆ ಹಾಕಿಸಿಕೊಂಡಿದ್ದೇನೆ ರಾಯಾ, ನೀನು ಗಮನಿಸಬೇಕು ಎಂದು ಸೂಚನೆ ನೀಡುತ್ತ, ಅತ್ತೆಯ ಭಯವನ್ನು ಬಿತ್ತಿ, ಗಂಡನ ಸರಸಕ್ಕೆ ಜಾಣ ಮಾತನ್ನು ಸೇರಿಸುತ್ತಾಳೆ.

ಹೀಗೆ ಜನಪದ ಸಾಹಿತ್ಯದಲ್ಲಿ ಹಚ್ಚೆಯ ಉಲ್ಲೇಖ ಬರುವಲ್ಲೆಲ್ಲ, ಅವು ಅವರ ಬದುಕಾಗಿ, ಪಾವಿತ್ರ್ಯದ ಸಂಕೇತವಾಗಿ, ಕೆಲವು ಸಲ ಹೆಮ್ಮೆಯ ಪ್ರತೀಕವಾಗಿ ಮುತ್ತೈದೆತನದ ಅರ್ಥ ಹೊತ್ತು ಬಂದಿದೆ.

ಜನಪದರು ಹಚ್ಚೆ ಹೊಯ್ಯುವುದು ಹಚ್ಚೆ ಹಾಕಿಸಿಕೊಳ್ಳುವುದು ಎಂದು ಅನ್ನುವಂತೆ, ಹಣೆಯ ಮೇಲಿನ ಹಚ್ಚೆಗೆ ಹಚ್ಚೆಬಟ್ಟು ಅಥವಾ ಹಚ್ಚೆಬೊಟ್ಟು ಎನ್ನುತ್ತಾರೆ. ಕೈ, ಬೆರಳುಗಳಲ್ಲಿ ಉದ್ದವೂ ಮುಂದಿನ ಭಾಗವು ದುಂಡವೂ ಇರುವಂಥ ಮಧ್ಯದ ಬೆರಳು ತುದಿಯಿಂದ ಕುಂಕುಮ ಇಟ್ಟುಕೊಳ್ಳುವುದು ಜನಪದರ ಸಾಮಾನ್ಯ ಕ್ರಿಯೆ. ಬೆರಳು ಜನಪದರ ಆಡುನುಡಿಯಲ್ಲಿ ಬಟ್ಟು ಆಗಿದೆ. ಮದುವೆಯಲ್ಲಿ ಆರತಿ ಮಾಡುವ ಸಮಯದಲ್ಲಿ ಚಿಕ್ಕ ಮಕ್ಕಳಿಗೆ ದೃಷ್ಟಿ ತಾಗದಿರಲೆಂದು ದುಂಡನೆಯ ಚಿತ್ರ. ಹಚ್ಚೆಯ ಮೇಲಿಡುವ ದುಂಡನೆ ಕುಂಕುಮ ವಿನ್ಯಾಸ ಗಲ್ಲಕ್ಕೆ ಇಡುವ ದುಂಡನೆಯ ಕಪ್ಪು ನಡುವಿನ ಬೆರಳಿನ ದುಂಡನೆಯ ತುದಿಗೆ ಸಂಬಂಧಿಸಿ ಜನಜೀವನದಲ್ಲಿ ಹಚ್ಚೆಬಟ್ಟು, ಕುಂಕುಮಬಟ್ಟು, ದೃಷ್ಟಿ ಬಟ್ಟು ಎಂದು ಪ್ರಚಲಿತವಾಗಿವೆ.

## ಹಚ್ಚೆಯ ಕುರಿತು ಐತಿಹ್ಯಗಳು:

ಹಚ್ಚೆ ಸಂಪ್ರದಾಯದ ಬಗ್ಗೆ ಜನಪದರಲ್ಲಿ ಅವರದೇ ಆದ ಐತಿಹ್ಯಗಳಿವೆ. ಹಚ್ಚೆ ಹಾಕುವ ಹೆಂಗಸರು ಪೌರಾಣಿಕ ಕಥೆಗಳಿಗೆ ಇನ್ನಷ್ಟು ಮೆರುಗುಕೊಟ್ಟು, ಕಥೆ ಹೇಳುತ್ತಾರೆ. ತನ್ಮೂಲಕ ತಮ್ಮ ವೃತ್ತಿಯನ್ನು ಇನ್ನಷ್ಟು ಬೆಳೆಯಿಸಿಕೊಳ್ಳುವ ಸದಭಿರುಚಿಯೂ ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

ಕರ್ನಾಟಕದಲ್ಲಿ ಹಚ್ಚೆ ಹಾಕುವ ಹೆಂಗಸರು ಹೇಳುವ ಕಥೆಗಳು

ಹಚ್ಚೆ ಚಿತ್ರಕಲೆ.....................................................................................................................................೮

ಕೃಷ್ಣಾವತಾರ ರಾಮಾಯಣ, ಮಹಾಭಾರತಕ್ಕೆ ಸೇರಿದವುಗಳಾಗಿವೆ. ಕರ್ನಾಟಕದ ಎಲ್ಲ ಭಾಗದಲ್ಲೂ ಇವೇ ಕಥೆಗಳಿರುವುದು ಅತ್ಯಂತ ಗಮನಾರ್ಹ, ಕೆಲವನ್ನು ಮಾದರಿಗಾಗಿ ನೋಡಬಹುದು: ದ್ರೌಪದಿ ಅರಣ್ಯವಾಸದಲ್ಲಿದ್ದಾಗ ಒಮ್ಮೆ ಸಹಜವಾಗಿಯೇ ಅವಳಿಗೆ ಹಚ್ಚೆ ಹಾಕಿಸಿಕೊಳ್ಳುವ ಆಶೆಯಾಯಿತಂತೆ ಅದಕ್ಕಾಗಿ ಆಕೆ ಹಚ್ಚೆ ಹೊಯ್ಯುವ ಸ್ತ್ರೀಯರ ಸಲುವಾಗಿ ಸಾಕಷ್ಟು ಹುಡುಕಾಡಿದಳಂತೆ. ಆದರೆ ಹಚ್ಚೆ ಹಾಕಿಸಿಕೊಳ್ಳುವ ಭಾಗ್ಯ ಆಕೆಯ ಪಾಲಿಗೆ ಬರಲಿಲ್ಲವಂತೆ. ಹಚ್ಚೆ ಇಲ್ಲದೆ ಇರುವುದರಿಂದ ಆಕೆಗೆ ಅನೇಕ ಕಷ್ಟುಗಳು ಬಂದವಂತೆ. ಹಚ್ಚೆ ಹಾಕಿಸಿಕೊಳ್ಳುವುದರಿಂದ ಸೌಭಾಗ್ಯ ಗಟ್ಟಿಯಾಗುತ್ತದೆ. ತೊಂದರೆಗಳು ಬರುವುದಿಲ್ಲ; ಸ್ವರ್ಗದಲ್ಲಿ ಸ್ಥಾನ ಸಿಗುತ್ತದೆ. ಸತ್ತಮೇಲೂ ಅವು ಜೊತೆಗೆ ಇದ್ದ ಅವರನ್ನು ಕಾಪಾಡುತ್ತವೆ ಎಂದು ಕಥೆ ಹೇಳುತ್ತಾರೆ.

ಶ್ರೀ ವಿಷ್ಣು ರಾಕ್ಷಸರ ಕುಲವನ್ನು ಸಂಹಾರ ಮಾಡಲು ಹೋಗುವ ಪ್ರಸಂಗ ಬರುತ್ತದೆ. ವಿಷ್ಣು ಯುದ್ಧಕ್ಕೆ ತಯಾರಾದಾಗ ವಿಷ್ಣುವಿನ ಹೆಂಡತಿ ಲಕ್ಷ್ಮೀ, ತನ್ನ ರಕ್ಷಣೆಗಾಗಿ ಗಂಡನನ್ನು ಪ್ರಾರ್ಥಿಸಿ ಕೊಂಡಳಂತೆ ದುಷ್ಟಶಕ್ತಿಗಳಿಂದ ರಕ್ಷಣೆ ಹೊಂದಲು ವಿಷ್ಣು ಲಕ್ಷ್ಮೀಯ ಎದೆ ಭುಜಗಳ ಮೇಲೆ ತನ್ನ ಆಯುಧಗಳಾದ ಶಂಖ, ಚಕ್ರ, ಗಧೆ, ಪದ್ಮದ ಚಿತ್ರಗಳ ಮುದ್ರೆ ಹಾಕಸಿದನಂತೆ ಇದರಿಂದ ಅವಳಿಗೆ ರಾಕ್ಷಸರಿಂದ ಯಾವ ತೊಂದರೆಯೂ ಆಗಲಿಲ್ಲವಂತೆ. ಅದರ ಪ್ರಯುಕ್ತ ಆ ಚಿಹ್ನೆಗಳನ್ನು ಯಾರೇ ಹಾಕಿಸಿಕೊಂಡರೂ ಅವರಿಗೆ ದುಷ್ಟ ಶಕ್ತಿಗಳಿಂದ ರಕ್ಷಣೆ ದೊರೆಯುತ್ತದೆಯೆಂಬ ಭಾವನೆ ಜನಪದರಲ್ಲಿ ಈಗಲೂ ಇದೆ.

ದ್ವಾರಕೆ ಮತ್ತು ಉಡುಪಿಯ ಶ್ರೀ ಕೃಷ್ಣ ದೇವಸ್ಥಾನದಲ್ಲಿ ಯಾತ್ರಾರ್ಥಿಗಳ ಎದೆ ತೋಳಿನ ಮೇಲೆ ಕೃಷ್ಣನ ಲಾಂಛನವನ್ನು ಈಗಲೂ ಹಾಕಲಾಗುತ್ತದೆ. ಈ ತರಹದ ಮುದ್ರೆಗಳು ರಕ್ಷಣೆ ಸಂಕೇತಗಳಾಗಿವೆ. ರಾಮಾಯಣದ ಶ್ರೀ ರಾಮನ ಪತ್ನಿ ಸೀತೆ ವನವಾಸದಿಂದ ಬಂದ ಮೇಲೆ ಹಚ್ಚೆ ಹಾಕುವವರನ್ನು ಕರೆಯಿಸಿ ಹಚ್ಚೆ ಹಾಕಿಸಿಕೊಂಡಳಂತೆ. ಮೊದಲೇ ಹಚ್ಚೆ ಹಾಕಿಸಿಕೊಂಡಿದ್ದರೆ, ಆಕೆಗೆ ಕಷ್ಟಗಳು ಬರುತ್ತಿರಲಿಲ್ಲವಂತೆ. ಹೀಗೆ ಕಥೆ ಹೇಳುತ್ತ ಹಚ್ಚೆ ಹಾಕುವ ಹೆಂಗಸರು ಕರ್ನಾಟಕದ ಎಲ್ಲ ಭಾಗಗಳಲ್ಲೂ ಇದ್ದಾರೆ. ಕೀಳ್ಳಿಕೇತರ ಹೆಂಗಸರಲ್ಲಿ ಈ ಕಥೆ ಹೆಚ್ಚು ಪ್ರಚಲಿತದಲ್ಲಿದೆ.

**ಡೊಂಬರಲ್ಲಿ ಕಂಡುಬರುವ ಐತಿಹ್ಯ ಹೀಗಿದೆ:** ಕಾಶಿಯ ವಿಶ್ವನಾಥನ ಪರಮ ಭಕ್ತನಾದ ಅರಸು ಹರಿಶ್ಚಂದ್ರನು ಬೇಡಿದವರಿಗೆ ಎಲ್ಲವನ್ನೂ ದಾನ ಮಾಡಿ, ಕೊನೆಗೆ ಒಬ್ಬ ಡೊಂಬನ ಆಳಾಗಿ, ಸುಡುಗಾಡು ಕಾಯಬೇಕಾಯಿತು. ಸುಡಲು



ತನ್ನ ಮಗುವಿನ ಶವ ಹೊತ್ತು ಬಂದ ಅವನ ಹಂಡೆತಿಯನ್ನು ಕತ್ತಲಲ್ಲಿ ಗುರುತಿಸದೆ, ಸುಂಕ ತರಲು ಅಲ್ಲಿಂದ ಅಟ್ಟಿದನು. ಅಷ್ಟರಲ್ಲಿ ಸೂರ್ಯೋದಯವಾಗಲು, ಒಬ್ಬರನ್ನೊಬ್ಬರು ಪರಸ್ಪರ ಗುರುತಿಸಿಕೊಂಡರು. ಮತ್ತೆ ಅವರ ಮದುವೆಯಾಗುವುದು. ಈ ಸನ್ನಿವೇಶದ ಎರಡು ಚಿತ್ರಗಳನ್ನು ಥರ್ಸ್ಟನ್ ಅವರು ತಮ್ಮ ಕೃತಿಯಲ್ಲಿ ಅಚ್ಚಿಸಿ, ಇದರ ವಿವರಣೆ ನೀಡಿದ್ದಾರೆ. ಅದು ಹೀಗಿದೆ.

೧ನೇಯ ಹಚ್ಚೆಯ ಚಿತ್ರದಲ್ಲಿ ಬೆಳದಿಂಗಳ ರಾತ್ರಿಯಲ್ಲಿ ಗಂಗಾನದಿಯ ದಂಡೆ, ಎಡಬಲ ಗಿಡಮರ, ಮಧ್ಯ ಮಸಣ ಕಾಯುವ ಹರಿಶ್ಚಂದ್ರ, ಬದಿಯಲ್ಲಿ ಕಟ್ಟಿಗೆಯ ರಾಶಿ.

೨ನೇಯ ಚಿತ್ರದಲ್ಲಿ ಉದಯಿಸುತ್ತಿರುವ ಸೂರ್ಯ, ಅರಸ-ಅರಸಿಯರ ಮಿಲನದ ಚಿತ್ರಗಳನ್ನು ಕಾಣಬಹುದಾಗಿದೆ. ಹಚ್ಚೆಯಲ್ಲಿ ಡೊಂಬರು ಹರಿಶ್ಚಂದ್ರನ ನೆನಪಿಗಾಗಿ ಈ ಹಚ್ಚೆಯನ್ನು ಹಾಕಿಸಿಕೊಳ್ಳುವುದುಂಟು. ಇಲ್ಲಿ ಡೊಂಬರ ಕಥೆಯ ಪ್ರಕಾರ ಹಚ್ಚೆಯ ಮೂಲ ಹರಿಶ್ಚಂದ್ರನವರೆಗೆ ಹೋಗುತ್ತದೆ.

ಈ ಮೇಲಿನ ಎಲ್ಲ ಪೌರಾಣಿಕ ಕಥೆಗಳನ್ನು ನೋಡಿದಾಗ, ಹಚ್ಚೆ ಸಂಪ್ರದಾಯದ ಮೂಲ ವಿಷ್ಣುವಿನವರೆಗೆ ಹೋಗುತ್ತದೆ. ದುಷ್ಟ ಶಕ್ತಿಯ ಸಂಹಾರದ ಜೊತೆಗೆ ರಕ್ಷಣೆಯ ಹಿನ್ನಲೆಯೂ ಇಲ್ಲಿದೆ. ಹೀಗೆ ಧಾರ್ಮಿಕ ಆರಾಧನೆಯ ಭಾವನೆಯಿಂದ ಹಚ್ಚೆ ಕಲೆ ಭಾರತದಲ್ಲಿ ಬೆಳವಣಿಗೆ ಹೊಂದಿದೆ. ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿಯೂ ಇದೇ ಭಾವನೆಯಿದೆ.

ರಾಮಾಯಣ ಮಹಾಭಾರತ ಮೊದಲಾದ ಮಾನವರ, ದೇವ- ದೇವತೆಗಳ ಸುತ್ತ ಹೆಣೆದುಕೊಂಡಿರುವ ಈ ಕಥೆಗಳಲ್ಲಿ ರಕ್ಷಣೆ ಆಶಯವೇ ಪ್ರಧಾನ ವಾಗಿರುವುದು ಕಂಡುಬರುತ್ತದೆ.

ಹಚ್ಚೆಯ ಅಧ್ಯಯನ:

೧೯ನೇ ಶತಕದ ಉತ್ತರಾರ್ಧದಲ್ಲಿ ಪಾಶ್ಚಿಮಾತ್ಯ ವಿದ್ವಾಂಸರು ಭಾರತದಲ್ಲಿ ಜಾಪನದ ಅಧ್ಯಯನ ಕೈಕೊಂಡು, ಈ ಕ್ಷೇತ್ರದ ಅಧ್ಯಯನದ ಬಾಗಿಲವನ್ನು



ಅನಾವರಣಗೊಳಿಸಿದರು. ಹಚ್ಚೆಯ ಪದಗಳನ್ನು ಇಂಡಿಯನ್ ಆಂಟಿಕ್ವರಿಯಲ್ಲಿ ಪ್ಲೇಟರು ಸಂಗ್ರಹಿಸಿದ್ದಾಗಿ ಮಾಸ್ತಿಯವರು ತಿಳಿಸುತ್ತಾರೆ. ಇದರಿಂದ ಆ ಸಂಪುಟಗಳಲ್ಲಿಯ ಸಂಗ್ರಹವೇ ಪ್ರಥಮ ಸಂಗ್ರಹವಾಗಿ ಪ್ಲೇಟರೇ ಭಾರತದಲ್ಲಿ ಹಚ್ಚೆ ಅಧ್ಯಯನ ಕೈಕೊಂಡ ಮೊದಲ ವಿದ್ವಾಂಸರಾಗುತ್ತಾರೆ.

೧೮೯೭ರಲ್ಲಿ ಲೂಯಿ ಆರ್.ಎಂ.ರೆನ್ನೈರವರು ಚೆನ್ ಬ್ಯಾಕ್ ಜನರನ್ನು ಕುರಿತು ಪ್ರಾಸಂಗಿಕವಾಗಿ ಅಧ್ಯಯನ ಮಾಡಿ ಹೆಣ್ಣುಮಕ್ಕಳ ಹಚ್ಚೆಯ ವಿನ್ಯಾಸ ವಿವರಿಸಿದ್ದಾರೆ. ಹಚ್ಚೆಯ ಮೂಲಕವೇ ಸ್ತ್ರೀಯರ ಸೌಂದರ್ಯ ನಿರ್ಣಯಿಸುವುದಾಗಿಯೂ ಅವರು ಹೇಳಿದ್ದಾರೆ. ಗಂಡಸರು ಹಚ್ಚೆ ಹಾಕಿಸಿಕೊಳ್ಳುವುದಿಲ್ಲವೆಂದು ಹೇಳಿ, ಹೆಣ್ಣುಮಕ್ಕಳ ಹಚ್ಚೆ ಚಿತ್ರಗಳನ್ನು ಮಾತ್ರ ಕೊಟ್ಟಿದ್ದಾರೆ. ಬಿ.ಎ. ಗುಪ್ತೆಯವರು ೧೯೦೨ರಲ್ಲಿ ಭಾರತದ ಹಲವು ರೀತಿಯ ಹಚ್ಚೆಯ ಸಂಕೇತ ಮತ್ತು ಒಂದೇ ಚಿತ್ರದ ವಿವಿಧ ರೂಪಗಳನ್ನು ಉದಾಹರಿಸಲಾಗಿದೆ. ಇದೇ ಅವಧಿಯಲ್ಲಿ ಎಚ್.ಎ.ರೋಸ್ ಮುಂದೆ ೧೯೦೪ರಲ್ಲಿ ಬಿ.ಎ.ಗುಪ್ತೆಯವರು ಹಚ್ಚೆಯ ಕೆಲವು ಚಿಹ್ನೆಗಳನ್ನು ಗುರುತಿಸಿದ ವಿವರವಿದೆ. ಇದೇ ಅವಧಿಯಲ್ಲಿ * ಗಂಗಾಸ್ಯೆ ಅವರ ಟರ್ಕಿ ಗಿಲ್ಲಿಯಸ್‌ನ ಹೆಣ್ಣು ಮಕ್ಕಳು ಹಾಕುವ  ಹಣೆಯ ಹಚ್ಚೆಯ ಚಿಹ್ನೆಗಳನ್ನು ಕುರಿತು ಈ ಲೇಖನದಲ್ಲಿ ವಿವರಿಸಲಾಗಿದೆ. ಕ್ಯಾಪ್ಟನ್ ಸಿ.ಇ.ಲೂರ್ಡ ಅವರು ಹಚ್ಚೆ ಕುರಿತು ವ್ಯಾಪಕವಾದ ಕ್ಷೇತ್ರ ಕಾರ್ಯ ಮಾಡಿ ಮೌಲಿಕವಾದ ಲೇಖನಗಳನ್ನು ಪ್ರಕಟಿಸಿದರು. ಅಧ್ಯಯನ ಕ್ಷೇತ್ರಕ್ಕೆ ಇದು ಹೊಸ ಮೈಲುಗಲ್ಲಾಯಿತೆಂದೇ ಹೇಳಬೇಕು. ೧೯೦೬ರಲ್ಲಿ ಬಿ.ಎ. ಗುಪ್ತೆಯವರು ಬೇರೆ ಬೇರೆ ಜನಾಂಗಗಳು ಹಚ್ಚೆ ಹಾಕಿಸಿಕೊಂಡ ಬಗೆಯನ್ನು ತಿಳಿಸಿದ್ದಾರೆ. ೧೯೦೭ರಲ್ಲಿ ಆರ್.ಜಿ. ವಾಯ್‌ಟಿಹೆಡ್‌ರು ಲೇಖನದಲ್ಲಿ ಹೆಣ್ಣು ಮಕ್ಕಳ ಹಚ್ಚೆಯ ಜೊತೆಗೆ ಗಂಡಸರೂ ಹಚ್ಚೆ ಹಾಕಿಸಿಕೊಳ್ಳುವ ವಿವರ ನೀಡುತ್ತಾರೆ. ಇವರೆಲ್ಲರೂ ಹಚ್ಚೆಯನ್ನು ಜನಪದ ಕಲೆಯಾಗಿ ಗುರುತಿಸಿ, ಅಭ್ಯಾಸ ಮಾಡಿದ್ದಾರೆ.

ಡಾ: ಜೈಸಿಂಗ್, ಪಿ.ಮೋದಿ ಹಾಗೂ ಕೆ.ಇ.ವಿ. ಮಂಗಲಿಯವರು ೧೯೨೦ರ ಅವಧಿಯಲ್ಲಿ ಅಪರಾಧಗಳನ್ನು ಗುರುತಿಸುವಲ್ಲಿ ಹಚ್ಚೆ ಸಹಾಯಕಾರಿಯಾಗಿರುವುದನ್ನು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ. ಇದಲ್ಲದೆ ಹಚ್ಚೆ ಪ್ರಪಂಚದಾದ್ಯಂತ ಇರುವುದನ್ನು ಪ್ರಸ್ತಾಪಿಸಿ, ಅದರಿಂದ ಬರುವ ಸಾಂಕ್ರಾಮಿಕ ರೋಗಗಳನ್ನು ಹೇಳಿದ್ದಾರೆ. ಹಚ್ಚೆ

ಕಲೆಯನ್ನು ಅಳಿಸಿ ಹಾಕುವ ಆಧುನಿಕ ವಿಧಾನಗಳನ್ನು ಮೋದಿಯವರು ತಮ್ಮ ಗ್ರಂಥದಲ್ಲಿ ತಿಳಿಸಿದ್ದಾರೆ. ಈ ಅವಧಿಯಲ್ಲಿ ಹಚ್ಚೆಯ

ಹಚ್ಚೆ ಚಿತ್ರಕಲೆ ..........................................................................................................೧೧

ಅಧ್ಯಯನವು ವೈಜ್ಞಾನಿಕವಾಗಿ ಹಾಗೂ ಅಪರಾಧಶಾಸ್ತ್ರದ ದೃಷ್ಟಿಯಿಂದ ಆರಂಭವಾಯಿತೆಂದು ಹೇಳಬೇಕು. ತರುವಾಯ ಭಾರತದಲ್ಲಿ ಹಚ್ಚೆ ಅಧ್ಯಯನವು ವ್ಯಾಪಕವಾಗಿ ನಡೆಯತೊಡಗಿತು.

**ಕರ್ನಾಟಕದಲ್ಲಿ ಹಚ್ಚೆಯ ಅಧ್ಯಯನ:** (೧೭೮೯) ರಲ್ಲಿ ಜೇಮ್ಸ್ ರೂಕ್ಸ , ಪ್ರಥಮವಾಗಿ ಹಚ್ಚೆಯ ಅಧ್ಯಯನ ಕೈಕೊಂಡ ಪಾಶ್ಚಿಮಾತ್ಯವಿದ್ವಾಂಸ ಭಾರತಕ್ಕೆ ಆಗಮಿಸಿ ಕನ್ನಡ ನಾಡನ್ನು ಸಂದರ್ಶಿಸಿ ಹಚ್ಚೆಯ ಬಗ್ಗೆ ಮಾಹಿತಿ ನೀಡಿದ ಮಾರ್ಕೋಪೊಲೊ, ನಿಕೊಲೊಕೊಂತಿ, ತಾವರ್ನೋ ಮುಂತಾದವರೂ ಪಾಶ್ಚಿಮಾತ್ಯರೇ; ತಾವರ್ನೋ(೧೬೪೧ ಮತ್ತು ೧೬೪೭) ಹಚ್ಚೆಯನ್ನು ಕುರಿತು ಹೆಂಗಸರು ಸೊಂಟದಾದ ಮೇಲ್ಭಾಗವನ್ನು ಬಗೆಬಗೆಯ ಹೂಗಳಂತೆ ಹಚ್ಚೆ ಹೊಯ್ಯಸಿ ಅಲಂಕಾರ ಮಾಡಿಕೊಂಡಿರುತ್ತಾರೆ. ಅವರ ಚರ್ಮ ಈ ಹೂವನ್ನು ನೇಯ್ದು ಬಟ್ಟೆಯಂತೆ ಕಾಣುತ್ತದೆ. ಎಂದಿದ್ದಾನೆ. ಕರ್ನಾಟಕದಲ್ಲಿ ಹಚ್ಚೆ ಹಾಕುವಾಗ ಹಾಡುವ ಹಾಡುಗಳನ್ನು ಇಂಡಿಯನ್ ಆ್ಯಂಟಕ್ವರಿಯಲ್ಲಿ(೧೮೮೫) ಪ್ಲೇಟ್‌ರು ಸಂಗ್ರಹಿಸಿದ್ದಾರೆ. ಮುಂಬೈ ಪ್ರಾಂತಕ್ಕೆ ಸೇರಿದ ಧಾರವಾಡ, ಬೆಳಗಾವಿ, ವಿಜಾಪೂರ, ಉತ್ತರ ಕನ್ನಡ ಜಿಲ್ಲೆಗಳ ೧೮೯೩ರ ಗ್ಯಾಝಟಿಯರನಲ್ಲಿ ಲಿಂಗಾಯತರು ಹಚ್ಚೆ ಹಾಕಿಸಿಕೊಳ್ಳುತ್ತಿದ್ದುದನ್ನು ಉಲ್ಲೇಖಿಸಲಾಗಿದೆ. ಇದಲ್ಲದೆ ಕೊರಚರ ಹೆಂಗಸರು ಹಚ್ಚೆ ಹಾಕುವ ವೃತ್ತಿಯಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾಗಿಯೂ ಹೇಳಲಾಗಿದೆ. ೧೮೯೭ರಲ್ಲಿ ಜೆ.ಎಂ.ಕೆಂಪೆಬಲ್ ಅವರು ಧಾರವಾಡ ಮಾಧ್ವ ಬ್ರಾಹ್ಮಣ ಸ್ತ್ರೀಯರು ಬಲಕನ್ನೆಯ ಮೇಲೆ ಸಣ್ಣಚುಕ್ಕೆಯ ಹಚ್ಚೆ ಹಾಕಿಸಿಕೊಂಡದ್ದನ್ನು ಉಲ್ಲೇಖಿಸಿದ್ದಾರೆ ಇದರಿಂದ ಧಾರವಾಡ, ಬೆಳಗಾವಿ ಪ್ರದೇಶದಲ್ಲಿಯ ಹಚ್ಚೆಯ ಕುರಿತು ಹಚ್ಚೆ ಹಾಕುವ ಕಿಳ್ಳಿಕೇತರ ಹೆಣ್ಣುಮಕ್ಕಳ ವಿಷಯವಾಗಿ ಗೊತ್ತಾಗುತ್ತದೆ.

೧೯೩೭ರಲ್ಲಿ ಮಾಸ್ತಿಯವರು ಹಚ್ಚೆ ಚುಚ್ಚುವ ಹಾಡಿನ ಬಗ್ಗೆ ಹೇಳುತ್ತ. ಇದು ಸ್ವಲ್ಪ ಮಾತಿನಲ್ಲಿ ವಿಷಯವನ್ನು ಮುಗಿಸುವ ಕಲೆ ಎಂದಿದ್ದಾರೆ. ಮಾಸ್ತಿಯವರು ಇಲ್ಲಿ ಹಚ್ಚೆಯ ಯಾವ ಹಾಡುಗಳನ್ನೂ ಸಂಗ್ರಹಿಸಿಲ್ಲ. ಆದರೆ ಹಾಡಿನ ಬಗ್ಗೆ ಉಲ್ಲೇಖಿಸಿದ್ದಾರೆ. ಅಷ್ಟೇ. ೧೯೪೩ರಲ್ಲಿ ಎಲ್. ಗುಂಡಪ್ಪ ಅವರು ಸಂಪಾದಿಸಿದ ನಾಡಪದಗಳು ಕೃತಿಯಲ್ಲಿ ಮುತ್ತು ರಾಮಸ್ವಾಮಿ ಮತ್ತು ಮತ್ತಿಘಟ್ಟ ಕೃಷ್ಣಮೂರ್ತಿಯವರು ಹಚ್ಚೆಯ ಹಾಡೊಂದನ್ನು ಪ್ರಕಟಿಸಿದ್ದಾರೆ. ಹಚ್ಚೆ ಚುಚ್ಚುವ ಸನ್ನಿವೇಶದ ರೇಖಾ ಚಿತ್ರವೊಂದನ್ನು ಹಾಕಿಸುವುದರೊಂದಿಗೆ ತ್ರಿಕೋನ, ಚೌಕ ವರ್ತುಲ ಮೊದಲಾದ ಹಲವು ಆಕಾರದ ಚಿತ್ರಗಳನ್ನು ಹೆಣ್ಣು ಮಕ್ಕಳು ಮುತ್ತೈದೆ ಲಕ್ಷಣ, ಸಂಪ್ರದಾಯ, ಹರಕೆ, ಪ್ರೀತಿಯ ಕುರುಹು ಆಗಿ ಹಚ್ಚೆ

ಹೊಯ್ಯಿಸಿಕೊಳ್ಳುವುದುಂಟು, ಕೊರವಂಜಿಯವರು ಸೂಜಿಯಿಂದ ಹಚ್ಚೆ ಚುಚ್ಚುತ್ತ ನೋವು ಮರೆಸಲು ಹಾಡು ಹೇಳುತ್ತಾರೆ. ಹಾಡುಗಳು ರಾಮಾಯಣ, ಮಹಾಭಾರತ ಇತ್ಯಾದಿ ದೇವರುಗಳಿಗೆ ಸಂಬಂಧಿಸಿದವುಗಳು ಎಂದು ವಿವರಿಸಿದ್ದಾರೆ. ಕಲಮದಾನಿ ಗುರುರಾಯರ ಪಾಶ್ಚಾತ್ಯ ಕಲಾವಿದರು ಎಂಬ ಕೃತಿ ೧೯೫೧ರಲ್ಲಿ ಪ್ರಕಟಗೊಂಡಿದೆ. ಈ ಕೃತಿಗೆ ದೀರ್ಘವಾದ ಮುನ್ನುಡಿ ಬರೆದಿರುವ ಡಿ.ಎಚ್.ಕೊಪ್ಪರ ಅವರು ಪ್ರಾಚೀನ ಭಾರತದಲ್ಲಿ ಅಂಗಲೇಪನ ಮತ್ತು ಹಚ್ಚೆ ಚುಚ್ಚಿಸಿಕೊಳ್ಳುವ ಕಲೆಗಳು ರೂಢಿಯಲ್ಲಿದ್ದುದನ್ನು ಹೇಳುತ್ತ ತನ್ನ ಮೈಯೆಲ್ಲವನ್ನು ಹಚ್ಚೆ ಹಾಕಿಸಿಕೊಂಡು ನೀವು ನನ್ನನ್ನು ಕೊಲ್ಲಲಾರಿರಿ; ನಾನು ಹಚ್ಚೆ ಚುಚ್ಚಿಸಿಕೊಂಡಿದ್ದೇನೆ. ನಾನು ಹಚ್ಚೆ ಚುಚ್ಚಿಕೊಂಡಿದ್ದೇನೆ. ಎಂದು ತನ್ನ ಮನ ಬಂದಂತೆ ಕುಣಿದಾಡುವ ಅಂದಮಾನ ದ್ವೀಪದ ಒಬ್ಬ ಡ್ಯೂಕೊ ಮನುಷ್ಯನ ಉದಾಹರಣೆಯನ್ನು ಕೊಡುತ್ತಾರೆ. ದೇಹವನ್ನು ಬಣ್ಣದಿಂದ ಲೇಪಿಸುವುದು ಹಾಗೂ ಹಚ್ಚೆ ಚುಚ್ಚಿಸಿಕೊಳ್ಳುವುದು ಪ್ರಾಚೀನ ಜನರಲ್ಲಿ ಒಂದು ಕಲೆಯಾಗಿತ್ತು. ಎಂದು ಹಚ್ಚೆಯ ಕುರಿತು ಪ್ರಾಸಂಗಿಕವಾಗಿ ವಿವರಿಸಿದ್ದಾರೆ. ಡಾ.ನಂ. ತಪಸ್ವೀಕುಮಾರ ಅವರ ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ ಎಂಬ ಮಹಾಪ್ರಬಂಧದ ಅನುಬಂಧದಲ್ಲಿ ಹಚ್ಚೆಯ ಕುರಿತ ವಿವರಗಳಿವೆ. ಎಸ್.ವಿ.ರಂಗಣ್ಣ ಅವರು ಕೋಲಾಟದ ಪದಗಳ ಕೃತಿಯಲ್ಲಿ ಹಚ್ಚೆ ಹೊಯ್ಯುವ ಹಾಡೊಂದನ್ನು ಸಂಗ್ರಹಿಸಿದ್ದಾರೆ. ಇದೇ ಅವಧಿಯಲ್ಲಿ ಎಚ್.ಎಲ್.ನಾಗೇಗೌಡರು 'ಪದವವೇ ನಮ್ಮ ಎದೆಯಲ್ಲಿ' ಎಂಬ ತಮ್ಮ ಕೃತಿಯಲ್ಲಿ ಹಚ್ಚೆಯ ಹದಿನಾರು ಹಾಡುಗಳನ್ನು ಸಂಗ್ರಹಸಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಶ್ರೀ ಎಸ್.ಕೆ.ಹೂಗಾರ ಅವರ ಕಲೆ ಮತ್ತು ಹಬ್ಬ ಕೃತಿಯಲ್ಲಿ ಮುಖ, ಕೈಕಾಲುಗಳ ಮೇಲೆ ಹಾಕಿಸಿಕೊಳ್ಳುವ ಚಿತ್ರಗಳನ್ನು ಹೆಸರಿಸಿದ್ದಾರೆ. ಡಾ: ಎಂ.ಎಂ. ಕಲಬುರ್ಗಿಯವರು ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ (೧೯೭೮) ಗ್ರಂಥದಲ್ಲಿ ಹಣಚಿ ಚುಚ್ಚುವ ಹಾಡುಗಳನ್ನು ಉಲ್ಲೇಖಿಸುತ್ತ. ಅವು ಹೆಂಗಸರ ಉಪಜೀವನದ ಹಾಡುಗಳೆಂದು ತಿಳಿಸಿದ್ದಾರೆ. ಎಸ್.ಬಿ.ರವಿಕಲಾ ಅವರು ಹಚ್ಚೆ ಒಂದು ವಿಶಿಷ್ಟ ಸಂಪ್ರದಾಯ ನಂ. ತಪಸ್ವೀಕುಮಾರರ ಹಚ್ಚೆ ಲೇಖನಗಳಲ್ಲಿ ಹಚ್ಚೆಯ ಸ್ಥೂಲ ವಿವರವಿದೆ. ಆದರೆ ಎಸ್.ಕೆ.ರಾಮಚಂದ್ರರಾವ್ ಅವರು ಹಚ್ಚೆಯನ್ನು ಚೆಲುವಿನ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ಸೀಮಿತ ಉದ್ದೇಶವನ್ನು ಹೊಂದಿರುವ ಈ ಲೇಖನಗಳು ಹಚ್ಚೆಯ ಅಧ್ಯಯನದ ಅವಶ್ಯಕತೆಯನ್ನು ತಿಳಿಸುತ್ತವೆ. ಎ.ವಿ. ಪಾಟೀಲ ಅವರು ಉತ್ತರ ಕರ್ನಾಟಕ ಜನಪದ ಕಲೆ ಮತ್ತು ವಿಧಿಕ್ರಿಯೆ, ೧೯೮೧ ಎಂಬ ಮಹಾಪ್ರಬಂಧದಲ್ಲಿ ಹಚ್ಚೆ ವಿಧಿಕ್ರಿಯೆಯಾಗಿಬಳಕೆಯಾದುದನ್ನು ಪ್ರಾಸಂಗಿಕವಾಗಿ ಚರ್ಚಿಸಲಾಗಿದೆ. ಜೀ.ಶಂ.ಪರಮಶಿವಯ್ಯ ಅವರು ಹಚ್ಚೆ ಚುಚ್ಚುವ

ಹಾಡೊಂದನ್ನು ಸಂಗ್ರಹಿಸಿದ್ದಾರೆ. ಪಿ.ಕೆ.ಖಂಡೋಬಾರ ಕರ್ನಾಟಕ ಲಂಬಾಣಿ ಜನಾಂಗ: ಒಂದು ಸಾಂಸ್ಕೃತಿಕ ಅಧ್ಯಯನ [೧೯೮೪] ಎಂಬ ಮಹಾ ಪ್ರಬಂಧದಲ್ಲಿ ಲಂಬಾಣಗಳಲ್ಲಿರುವ ಹಚ್ಚೆಯನ್ನು ಕುರಿತು ನಂಬಿಕೆಗಳನ್ನು ಪ್ರಾಸ್ತಾಪಿಸಲಾಗಿದೆ. ಬಿ.ಪಿ.ರಾಮಯ್ಯ ಅವರು ಹಚ್ಚೆ ಮತ್ತು ಕೊರವರು[೧೯೮೫] ಎಂಬ ಪರಿಚಯಾತ್ಮಕ ಲೇಖನ ಪ್ರಕಟಿಸಿದ್ದಾರೆ. ಕನ್ನಡ ಜಾನಪದ ವಿಶ್ವ ಕೋಶದಲ್ಲಿ ಹಚ್ಚೆಯ ಸಂಪ್ರದಾಯದ ಪರಿಚಯ ಮಾಡಿಕೊಡಲಾಗಿದೆ. ಎಚ್.ಎಂ. ಮಹೇಶ್ವರಯ್ಯ ಅವರು ಹಚ್ಚೆ ಒಂದು ಜಾನಪದ ಕಲೆ ಎಂಬ ಚಿಕ್ಕ ಗ್ರಂಥ [೧೯೮೮] ಪ್ರಕಟಿಸಿದ್ದಾರೆ. ಇದು ಬೆಳ್ವಲ ಅಭಿನಂದನ ಗಥದಲ್ಲಿ [೧೯೮೬] ಪ್ರಕಟಿತವಾದ ಅವರ ಲೇಖನದ ಪರಿಷ್ಕೃತ ರೂಪ. ಈ ಕೃತಿಯಲ್ಲಿ ಹಚ್ಚೆಯ ಹಾಡುಗಳು ಸಂಗ್ರಹಣೆಗೊಂಡಿವೆ. ಜನಪ್ರಿಯ ಪತ್ರಿಕೆಗಳಾದ ತರಂಗ ಮತ್ತು ಪ್ರಜಾವಾಣಿ ದಿನ ಪತ್ರಿಕೆಯಲ್ಲಿಯೂ ಹಚ್ಚೆಯನ್ನು ಕುರಿತು ಪರಿಚಯಾತ್ಮಕ ಲೇಖನ ಪ್ರಕಟವಾಗಿವೆ. ಇದು, ಕರ್ನಾಟಕದಲ್ಲಿ ಹಚ್ಚೆಯನ್ನು ಕುರಿತು ನಡೆದ ಅಧ್ಯಯನದ ಸ್ಥೂಲ ಸಮೀಕ್ಷೆ.

## ಹಚ್ಚೆಯನ್ನು ಕುರಿತ ನಂಬಿಕೆಗಳು:

ಹಚ್ಚೆಯನ್ನು ಕುರಿತು ಕರ್ನಾಟಕದ ವಿವಿಧ ಪ್ರದೇಶ, ಜನಾಂಗಗಳಲ್ಲಿರುವ ನಂಬಿಕೆಗಳನ್ನು ಹೀಗೆ ಪಟ್ಟಿ ಮಾಡಿ ಹೇಳಬಹುದು:

೧. ಸತ್ತಮೇಲೆ ಹಚ್ಚೆ ಮಾತ್ರ ಜೊತೆಗೆ ಬರುತ್ತದೆ.

೨. ಸತ್ತ ಮೂರು ದಿವಸಕ್ಕೆ ಹಚ್ಚೆ ಗಿಡದ ಮೇಲೆ ಕುಳಿತುಕೊಳ್ಳತ್ತದೆ.

೩. ಹಚ್ಚೆ ಇಲ್ಲದವರು ರಾಸಿಯ ಕಣಕ್ಕೆ ಹೋಗಬಾರದು.

೪. ಹಚ್ಚೆ ಇದ್ದವರು ಮಾಡಿದ ಅಡಿಗೆ ಬೇಗ ಹಳಸುವುದಿಲ್ಲ.

೫. ಹಚ್ಚೆ ಇದ್ದವರು ಮಾಡಿದ ಅಡಿಗೆ ಹುಲುಸು ಆಗುತ್ತದೆ.

೬. ಹಚ್ಚೆ ಇಲ್ಲದಿದ್ದರೆ ಅಣ್ಣ ತಮ್ಮರ ಮುಖ ನೋಡಬಾರದು.

೭. ಹಸಿರು (ಹಚ್ಚೆ) ಇಲ್ಲದವಳ ಕೈಯಲ್ಲಿ ನೀರು ಕುಡಿಯಬಾರದು

೮. ಪೂರ್ವಜರು ಹಚ್ಚೆಯ ಚಿತ್ರಗಳ ಮೂಲಕ ಬಂದು ಕಾಪಾಡುತ್ತಾರೆ.

೯. ಮಾಟ, ಮಂತ್ರ ಮೈಗೆ ಹತ್ತುವುದಿಲ್ಲ.

೧೦. ವಿಷ ಏರುವುದಿಲ್ಲ.

೧೧. ಮಕ್ಕಳಾಗುತ್ತವೆ.

೧೨. ಗರ್ಭಪಾತವಾಗುವುದಿಲ್ಲ.

೧೩. ಕಷ್ಟಗಳು ಬರುವುದಿಲ್ಲ.

೧೪. ಹನುಮಂತ, ದೇವಿ ಮುಂತಾದ ದೇವರ ಹಚ್ಚೆ ಹಾಕಿಸಿಕೊಂಡರೆ ದೆವ್ವ-ಭೂತ ಬಡಿದುಕೊಳ್ಳುವುದಿಲ್ಲ.

೧೫. ಕೆಟ್ಟ ಕನಸು ಬೀಳುವುದಿಲ್ಲ.

೧೬. ಸರ್ಪ ಹುಣ್ಣು, ತಲೆಶೂಲೆ, ನರ ರೋಗ, ವಾತ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ.

೧೭. ಮುಂಜಾನೆ ಎದ್ದ ಕೂಡಲೇ ಹಚ್ಚೆ ಇಲ್ಲದವಳ ಮುಖ ನೋಡಬಾರದು.

೧೮. ಮುತ್ತೈದೆಯರು ಬರಿಗೈಯಲ್ಲಿ ಇರಬಾರದು. ಒಳ್ಳೆಯದಾಗುವುದಿಲ್ಲ.

೧೯. ಮುತ್ತೈದೆಯ ಶಾಶ್ವತ ಸಂಕೇತ.

೨೦. ಗಿಂಡಿ ಇಲ್ಲದವಳು ಗಂಡನ ಕೈಗೆ ನೀರು ಕೊಡಬಾರದು.

೨೧. ಹಚ್ಚೆ ಇದ್ದ ಹೆಣ್ಣು ಮಕ್ಕಳು ಮನೆಯ ಲಕ್ಷ್ಮಿ

೨೨. ಹಚ್ಚೆ ಸೌಂದರ್ಯದ ಸಂಕೇತ

೨೩. ಹಚ್ಚೆಯಿದ್ದವರು ಮಾತ್ರ ಸ್ವರ್ಗಕ್ಕೆ ಹೋಗುತ್ತಾರೆ.

೨೪. ಹಚ್ಚೆ ಇಲ್ಲದಿದ್ದರೆ ಮದುವೆಯ ನಿಶ್ಚಯಮಾಡಿಕೊಳ್ಳಲು ಬರುವುದಿಲ್ಲ. ಮದುವೆಯೂ ಆಗುವುದಿಲ್ಲ. ಹಚ್ಚೆಯೆಂದರೆ ದೇವಿ.

೨೫. ಹಚ್ಚೆ ಇಲ್ಲದ ಸ್ತ್ರೀಯರನ್ನು ಚಾಜಕ್ಕೆ ಕರೆಯುವುದಿಲ್ಲ. ಶುಭಕಾರ್ಯದಲ್ಲಿ ಭಾಗವಹಿಸಲು ಬಿಡುವುದಿಲ್ಲ.

೧೬. ಹಚ್ಚೆ ಹಾಕಿಸಿಕೊಂಡ ಹೆಣ್ಣುಮಕ್ಕಳನ್ನು ದಾಳಿಕಾರರು ಅಪಹರಿಸುವುದಿಲ್ಲ.

೧೭. ಸ್ತ್ರೀ ಗರ್ಭಿಣಿಯಿದ್ದಾಗ ಹಚ್ಚೆ ಹಾಕಿದರೆ ಹುಟ್ಟುವ ಮಕ್ಕಳಿಗೆ ರೋಗ ತಟ್ಟುವುದಿಲ್ಲ. ಹೆರಿಗೆ ನಿರಾತಂಕವಾಗಿ ಆಗುತ್ತದೆ.

೧೮. ಗಂಡ ಸತ್ತ ನಂತರ ಹಚ್ಚೆ ಹಾಕಿಸಿಕೊಳ್ಳುವುದು ಅಮಂಗಳ, ದೇವರು ಮೆಚ್ಚುವುದಿಲ್ಲ. ಮತ್ತು ಕಾಡಾಟ ಜಾಸ್ತಿ ಆಗುತ್ತದೆ.

೧೯. ಹಚ್ಚೆ ಇಲ್ಲದವಳು ಮದುವೆಯಲ್ಲಿ ಊಟಕ್ಕೆ ಬಡಿಸಬಾರದು.

೨೦. ಸ್ತ್ರೀಯರು ಗಂಡನ ಹೆಸರನ್ನು ಬಾಯಲ್ಲಿ ಹೇಳಬಾರದು. ಹೇಳಿದರೆ ಗಂಡನ ಆಯುಷ್ಯ ಕಡಿಮೆಯಾಗುತ್ತದೆ. ಹೆಸರು ಕೇಳಿದವರಿಗೆ ಹಚ್ಚೆ ಹಾಕಿದ ಹೆಸರನ್ನು ತೋರಿಸಬೇಕು.

೨೧. ಇಷ್ಟ ಲಿಂಗವನ್ನು ಸೂಚಿಸುವ ಅಂಗೈಯಲ್ಲಿ ಹಚ್ಚ ಹಾಕಿಸಿಕೊಳ್ಳಬಾರದು.

೨೨. ಹಚ್ಚೆ ಇಲ್ಲದವರು ಉಪ್ಪಿನಕಾಯಿ ಹಾಗೂ ಧಾನ್ಯಗಳ ಮತ್ತು ಹಾಕಿದರೆ ಹುಳ ಹತ್ತಿ, ಅವು ಕೆಡುತ್ತವೆ.

೨೩. ಹಚ್ಚೆ ಇಲ್ಲದ ಸೂಲಗಿತ್ತಿಯರನ್ನು ಹೆರಿಗೆಗೆ ಕರೆಯುವುದಿಲ್ಲ.

೨೪. ಋತುಮತಿಯಾಗುವ ಪೂರ್ವದಲ್ಲಿ ಹಾಕಿಸಿಕೊಂಡ ಹಚ್ಚೆ ಧರ್ಮ ಮುದ್ರೆ ಎನಿಸಿದರೆ ಮದುವೆಯಾದ ಮೇಲೆ ಹಾಕಿಸಿಕೊಂಡ ಹಚ್ಚೆ ಪಾಪ ಮುದ್ರೆ ಆಗುತ್ತದೆ.

೨೫. ದೃಷ್ಟಿ ತಾಗುವುದಿಲ್ಲ.

೨೬. ಒಡಹುಟ್ಟಿದವರು ಹಸಿರು ಇಲ್ಲದವರ ಕೈಯಲ್ಲಿಯ ನೀರು ಕುಡಿಯಬಾರದು.

೨೭. ಖಾಲಿ ಮುಂಗೈಯನ್ನು ಅಣ್ಣ ತಮ್ಮಂದಿರು ನೋಡಬಾರದು.

೨೮. ಎದೆಯಮೇಲೆ ಹಚ್ಚೆ ಇದ್ದರೆ ಪುಣ್ಯ ಬರುತ್ತದೆ.

೨೯. ಮೊದಲ ಬಾರಿಗೆ ಹಚ್ಚೆ ಹಾಕಿಸಿಕೊಳ್ಳುವವರಿಗೆ ಬೇರೆ ಯಾರಾದರೂ ಹಾಕಿಸಬೇಕು.

೪೦ .ಹಚ್ಚೆ ಹಾಕಿಸಿಕೊಂಡರೆ ಹರಕೆ ಈಡೇರುತ್ತದೆ.

**ಹಚ್ಚೆ ಸಾಮಗ್ರಿ:**

ಕರ್ನಾಟಕದಲ್ಲಿ ಹಚ್ಚೆಯನ್ನು ಹೊಯ್ಯುವಾಗ ಉಪಯೋಗಿಸುವ ಸಾಮಗ್ರಿಗಳು ಈ ಕೆಳಗಿನಂತಿವೆ.

೧. ಸೂಜಿಯ ದಿಂಡು (ಚಕ್ರಗಳು)

9. ಉಪ್ಪಿನ ಕುಡಿಕೆ

೩. ಚಿತ್ರ ಬರೆಯುವ ಕಡ್ಡಿ.

೪. ಹಚ್ಚೆಯ ನಕ್ಷೆ: ಚಿತ್ರಗಳಿರುವ ಕಡತ

೫. ಹಚ್ಚೆ ಹಾಕುವಾಗ ಬಳಸುವ ಹಚ್ಚೆ ಮಸಿಯ ಚಿಕ್ಕ 'ಕುಡಿಕೆ.

೬. ಹಚ್ಚೆ ಚುಚ್ಚುವ ಸೂಚಿಗಳನ್ನಿಡುವ ಕುಡಿಕೆ, ಬಿದಿರಿನ ಕೊಳವೆ, ಬಾಟ್ಲಿ.

ಹೀಗೆ ಹಚ್ಚೆ ಹಾಕುವ ಸಾಮಗ್ರಿಗಳು ಹಲವಾರು ಇದ್ದು ಇಲ್ಲಿ ಇವುಗಳನ್ನು ಒಂದೊಂದಾಗಿ ಹೀಗೆ ವಿವರಿಸಬಹುದಾಗಿದೆ.

**೧. ಸೂಜಿಯ ದಿಂಡು:** ಹಚ್ಚೆ ಹೊಯ್ಯಲು ಉಪಯೋಗಿಸುವ ಚೂಪಾದ ಸೂಜಿಗಳ ಕಟ್ಟಿಗೆ ದಿಂಡು ಎನ್ನತ್ತಾರೆ. ಒಂದುವರೆ ಇಂಚಿನಷ್ಟು ಉದ್ದದ ೩/೫, ೬/ ೭ ಹೀಗೆ ತಮಗೆ ಬೇಕಾದಷ್ಟು ಸೂಜಿಗಳನ್ನು ಒಂದೇ ಸಮನಾಗಿ ಜೋಡಿಸಿ, ಅವುಗಳ ಎರಡೂ ಬದಿಗೆ ಬಿದಿರಕಡ್ಡಿಯ ಸಣ್ಣ ಪಟ್ಟಿಗಳನ್ನಿಟ್ಟು ದಾರದಿಂದ ಬಿಗಿಯಾಗಿ ಸುತ್ತಿ ಕಟ್ಟಿರುತ್ತಾರೆ. ಸೂಜಿಯ ಮೊನಚು ಭಾಗ ಕಾಲು ಇಂಚಿನಷ್ಟಾದರೂ ಹೊರಕ್ಕೆ ಕಾಣುತ್ತಿರುವಂತೆ ಕಟ್ಟಿರಬೇಕಾಗುತ್ತದೆ. ಸಣ್ಣ ಹಚ್ಚೆ ಚಿತ್ರಗಳಿಗೆ ಕಡಿಮೆ ಸೂಚಿಗಳಿರುವ ದಿಂಡಿನಿಂದ ಹಚ್ಚೆ ಹೊಯ್ದರೆ ದೊಡ್ಡ ಹಚ್ಚೆಯ ಚಿತ್ರಗಳಿಗೆ ೫/೬/೭ ಸೂಜಿಗಳಿರುವ ಸೂಜಿಯ ದಿಂಡಿನಿಂದ ಹಚ್ಚೆಯ ಹೊಯ್ಯುತ್ತಾರೆ. ಇಂಥ ಸೂಜಿಯ ದಿಂಡುಗಳಿಗೆ ಕೊರವರು ರಾಜಶ್ರೀ ಎಂದು ಕರೆದರೆ ಕಿಳ್ಳಿಕೇತರರು ಸೂಜಿಕಟ್ಟು ಎಂದು ಕರೆಯುತ್ತಾರೆ. ಇನ್ನೂ ಕಟಬರು ಇದಕ್ಕೆ ಸೂಜಿದಿಂಡು ಎಂದರೆ ಶಿವಮೊಗ್ಗದ ಕಡೆಗೆ ಚಕ್ರ ಎಂದು ಹೆಸರಿಸುತ್ತಾರೆ.

**೨. ಕಪ್ಪಿನ ಕುಡಿಕೆ** : ಹಚ್ಚೆ ಹೊಯ್ಯುವ ಮೊದಲೇ ಸಿದ್ಧಬಪಡಿಸಿಟ್ಟು

ಕೊಂಡ ಒಣಗಿದ ಮಸಿಯನ್ನು ತುಂಬಿಟ್ಟುಕೊಂಡಿರುವ ಪಾತ್ರೆ ಇದಾಗಿದೆ. ವರ್ಷಾವಧಿ ಬೇಕಾಗುವಷ್ಟು ಮಸಿಯನ್ನು ಬಿಡುವಿನ ವೇಳೆಯಲ್ಲಿ ಸಂಗ್ರಹಿಸಿಟ್ಟು ಕೊಂಡಿರುತ್ತಾರೆ. ಊರಿಂದೂರಿಗೆ ಹೋಗುವಾಗ ಈ ಕಪ್ಪಿನ ಕುಡಿಕೆಯಲ್ಲಿ ಒಣಗಿದ ಮಸಿಯನ್ನು ಹಾಕಿಕೊಂಡು ಹೋಗುತ್ತಾರೆ.

**೩. ಚಿತ್ರ ಬರೆಯುವ ಕಡ್ಡಿ :** ಮುಂದೆ ಚೂಪಾಗಿ ಕೆತ್ತಿದ ಬಿದಿರಿನ ನವಿಲು ಗರಿಯ ಅಥವಾ ಯಾವುದಾದರೂ ಸಣ್ಣಕಡ್ಡಿಯನ್ನು ಹಚ್ಚೆಯ ಚಿತ್ರ ಬರೆಯಲು ಇಟ್ಟುಕೊಂಡಿರುತ್ತಾರೆ. ಇವು ಆಕಾರದಲ್ಲಿ ಬೆಂಕಿಪೊಟ್ಟಣದ ದೀಪದ ಕಡ್ಡಿಯಷ್ಟಿರುತ್ತವೆ. ಕೆಲವು ಸಲ ದೀಪದ ಕಡ್ಡಿಯನ್ನೇ ಬಳಸುತ್ತಾರೆ. ಇನ್ನೂ ಕೆಲವು ಸಹ ಹಚ್ಚೆ ಹಾಕುವ ಸ್ಥಳದ ಮೇಲೆ ನೀರು ಹಚ್ಚಿ, ಸೂಜಿಯಿಂದಲೇ ನೇರವಾಗಿ ಹಚ್ಚೆಯ ವಿನ್ಯಾಸಗಳನ್ನು ಹೊಯ್ಯತೊಡಗುತ್ತಾರೆ. ಕಪ್ಪಿನಲ್ಲಿರುವ ಮಸಿಯೊಳಗೆ ಕಡ್ಡಿಯನ್ನು ಅದ್ದಿ ಹಚ್ಚೆಗೆ ಲೇಪಿಸುತ್ತಾರೆ.

**೪. ಹಚ್ಚೆಯ ನಕ್ಷೆ ಚಿತ್ರಗಳಿರುವ ಕಡತ** : ಪ್ರಾಚೀನ ಕಾಲದಲ್ಲಿ ತಲೆಮಾರಿನಿಂದ ತಲೆಮಾರಿಗೆ ಕೇಳಿ, ನೋಡಿ, ತಿಳಿದುಕೊಂಡು, ಸ್ಮರಣೆಯಿಂದ ಹಚ್ಚೆ ಹೊಯ್ಯುತ್ತಿದ್ದರು. ಕಾಲಕ್ರಮದಲ್ಲಿ ಹಚ್ಚೆಯ ನಕ್ಷೆ ಚಿತ್ರಗಳನ್ನು ಪುಸ್ತಕರೂಪದಲ್ಲಿ ರೇಖಿಸಿ, ಚಿತ್ರಿಸಿ ಇಟ್ಟಕೊಂಡರು. ಹಚ್ಚೆ ಹಾಕಿಸಿಕೊಳ್ಳುವವರಿಗೆ ಈ ಕಡತ ತೋರಿಸಿ. ಅವರ ಮನಸ್ಸು ಒಪ್ಪಿದ ಚಿತ್ರವನ್ನು ಮಾತ್ರ ಹಚ್ಚೆ ಹಾಕುವವರು ಚಿತ್ರಿಸುತ್ತಾರೆ. ಉತ್ತರ ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿಯೂ ಈ ಕಡತ ದೊರೆಯುತ್ತವೆ. ಹಚ್ಚೆಯ ನೂರಾರು ಚಿತ್ರವಿನ್ಯಾಸಗಳು ಈ ಕಡತದಲ್ಲಿ ದೊರೆಯುತ್ತವೆ. ಇಲ್ಲಿಯ ರೇಖಾಚಿತ್ರಗಳನ್ನು ಹಚ್ಚೆ ಹಾಕುವವರೇ ಬರೆದಿಟ್ಟಿರುತ್ತಾರೆ. ಕೆಲವು ಸ ಲ ತಾವು ರೂಢಿಸಿಕೊಂಡು ಬಂದ ಹಳೆಯ ಮಾದರಿಯ ಚಿತ್ರಗಳನ್ನು ಕಲಾವಿದರಿಗೆ ತೋರಿಸಿ, ಅವರಿಂದಲೂ ಚಿತ್ರಿಸಿಕೊಂಡು ಜೋಪಾನವಾಗಿ ಕಾಯ್ದುಕೊಂಡು ಬರುತ್ತಾರೆ. ಇಲ್ಲಿರುವ ನಕ್ಷೆಚಿತ್ರಗಳಿಗೆ ಕ್ರಮಬದ್ಧತೆ ಇರುವುದಿಲ್ಲ. ಒಂದೋಂದೇ ಚಿತ್ರನ್ನು ಹಲವು ವಿಧದಲ್ಲಿ ಚಿತ್ರಿಸಿರುವುದು ಗೊತ್ತಾಗುತ್ತದೆ ಹಚ್ಚೆಯ ಕಡತವನ್ನು ಇಡಲು ಚರ್ಮದ ಚೀಲವಂದನ್ನು ಮಾಡಿಕೊಂಡಿರುತ್ತಾರೆ. ಇದು ಅದರ ರಕ್ಷಣೆಯನ್ನು ಹೊಂದಿರುತ್ತದೆ.

**೫. ಚಿಕ್ಕ ಕುಡಿಕೆ:** ಇದು ಮಣ್ಣಿನ ಇಲ್ಲವೆ ಹಿತ್ತಾಳೆಯದಾಗಿರುತ್ತದೆ. ಹಚ್ಚೆ ಹಾಕಲು ಬೇಕಾಗುವಷ್ಟು ಪ್ರಮಾಣ ಅಂದರೆ ಸಣ್ಣ ಚಮಚೆಯಷ್ಟು ಒಣಗಿದ ಕಪ್ಪು ಹಚ್ಚೆಯ ಪುಡಿಯನ್ನು ನೀರಿನಲ್ಲಿ ಹಾಕಿ ಮಸಿ ತಯಾರಿಸಿಕೊಂಡು, ಈ ಚಿಕ್ಕ ಕುಡಿಕೆಯಲ್ಲಿಟ್ಟುಕೊಳ್ಳುತ್ತಾರೆ. ಮಸಿ ಹೆಚ್ಚಿಗೆಯಾದದ್ದಾದರೆ ಕೆಡುತ್ತದೆಂಬ ಭಾವನೆಯಿಂದ ಸ್ವಲ್ಪ ಪ್ರಮಾಣದ ಮಸಿಯನ್ನು ಮಾತ್ರ ಸಿದ್ಧಪಡಿಸಿಕೊಳ್ಳುತ್ತಾರೆ. ಈ ಮಸಿ ಕುಡಿಕೆಯನ್ನು ಆಗಾಗ ಸ್ವಚ್ಛಗೊಳಿಸುತ್ತಾರೆ. ಹಚ್ಚೆ ಹೊಯ್ಯಲು ಹೋಗುವಾಗ ತಪ್ಪದೆ ಅದನ್ನು ಸ್ವಚ್ಛಗೊಳಿಸುವುದುಂಟು. ಧಾರವಾಡ ಭಾಗದಲ್ಲಿ ಮಣ್ಣಿನ ಕುಡಿಕೆಗಳನ್ನೇ ಹೆಚ್ಚಾಗಿ ಬಳಸುತ್ತಾರೆ. ಹಿತ್ತಾಳೆ ಕುಡಕೆಯಾದರೆ ಕಿಲುಬು ಬರುತ್ತದೆಯೆಂಬ ಭಾವನೆ ಇವರಲ್ಲಿದೆ.

**೬. ಹಚ್ಚೆ ಸೂಜಿಗಳನ್ನಿಡುವ ಕುಡಿಕೆ, ಬಿದಿರಿನ ಕೊಳವೆ:** ಹಚ್ಚೆ ಹೊಯ್ಯುವುದಾದ ಮೇಲೆ ಆ ಸೂಜಿಗಳನ್ನು ಚಿಮಣಿ ಎಣ್ಣೆಯಲ್ಲಿ ತೊಳೆದು, ಅವುಗಳಿಗೆ ಒಳ್ಳೆಣ್ಣೆಯನ್ನು ಲೇಪಿಸಿ, ನಂತರ ಸ್ವಚ್ಛವಾಗಿ ಒರೆಸಿ, ಅರಳೆಯಲ್ಲಿ ಹಾಕಿ ಉದ್ದವಾದ ಅರವಿಯಲ್ಲಿ ಸುತ್ತಿ ಕಟ್ಟುತ್ತಾರೆ. ನಂತರ ಸಾಮಾನ್ಯವಾಗಿ ಹಚ್ಚೆ ಹೊಯ್ಯುವವರೇ ಈ ವಸ್ತುಗಳನ್ನು ಸಿಧಪಡಿಸುತ್ತಾರೆ. ಕೆಲವು ಸಣ್ಣ ಕುಡಿಕೆಯಲ್ಲಿ ಚಿಮಣಿ ಎಣ್ಣೆಯನ್ನು ಹಚ್ಚೆಯ ಸೂಜಿ ಕಟ್ಟುಗಳನ್ನು ಅದರಲ್ಲಿ ಇಡುತ್ತಾರೆ. ಇದರಿಂದ ಜಂಗು ಹತ್ತುವದಿಲ್ಲ. ಹೀಗೆ ಮುಂಜಾಗ್ರತೆ ವಹಿಸದಿದ್ದರೆ, ಜಂಗು ಹಿಡಿದ ಸೂಜಿಗಳಿಂದ ಹಚ್ಚೆ ಚುಚ್ಚದರೆ ನಂಜಾಗುವ ಸಂಭವವೂ ಉಂಟು.

## ಹಚ್ಚೆಯ ಮಸಿ ತಯಾರಿಸುವ ವಿಧಾನ:

ಬೇರೆ ಬೇರೆ ಪ್ರದೇಶ ಮತ್ತು ಬೇರೆ ಬೇರೆ ಜನಾಂಗಗಳಿಗನುಗುಣವಾಗಿ ತಮ್ಮಲ್ಲಿ ಉಪಲಬ್ದವಿರುವ ಸಾಮಗ್ರಿಗಳಿಂದ ಹಚ್ಚೆಯ ಮಸಿಯನ್ನು ತಯಾರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಕಾಡಿಗೆಯ ಪುಡಿ ಹಾಗೂ ನೀರಿನಿಂದ ಕಲಿಸಿದ ಕಪ್ಪು ಮಸಿಯನ್ನು ಹಚ್ಚೆಗೆ ಉಪಯೋಗಿಸುತ್ತಾರೆ.

ಬೆಳಗಾವಿ ಜಿಲ್ಲೆಯಲ್ಲಿ ಬರಗ-ರಾಗ, ಹೊನಗನ್ನೆ, ಎದೆಹಾಲು, ಮರವರಿಕೆ,

ಮಣಿ ಅವರೆ, ತುಂಬೆ, ಹಾಗಲಕಾಯಿ ಎಲೆಯ ರಸ ಕಿರುಗೋಣಿ ಸೊಪ್ಪು ಹಚ್ಚೆಗಿಡದ ಸೊಪ್ಪು ಇತ್ಯಾದಿ ವಸ್ತುಗಳಿಂದ ಕಪ್ಪನ್ನು ತಯಾರಿಸುತ್ತಾರೆ. ವಿಜಾಪೂರ, ಕಲಬುರ್ಗಿ ಬೀದರ ಭಾಗದಲ್ಲಿ ಮಾಗಿದ ಜೋಳದ ತೆನೆಗಳಲ್ಲಿರುವ ಕಾಡಿಗೆ ಪುಡಿಯನ್ನು ಸಂಗ್ರಹಿಸಿ ಅದರಲ್ಲಿ ನೀರು ಕೂಡಿಸಿ ಹಚ್ಚೆಗೆ ಉಪಯೋಗಿಸುತ್ತಾರೆ. ಧಾರವಾಡದ ಮಲೆನಾಡು ಭಾಗ, ಕಾರವಾರ, ಬಳ್ಳಾರಿ ಭಾಗದಲ್ಲಿ ಔಡಲ ಎಣ್ಣೆ, ಅರಷಿಣಪುಡಿ ಮಿಶ್ರಮಾಡಿ ಅದಕ್ಕೆ ಸ್ವಲ್ಪ ಹಸಿರು ಬಣ್ಣವನ್ನು ಕೂಡಿಸುತ್ತಾರೆ. ಇಲ್ಲವೆ ದೀಪದ ಕುಡಿಯಿಂದ ಕಪ್ಪನ್ನು ಕಲಸಿಕೊಳ್ಳುತ್ತಾರೆ.

ದಕ್ಷಿಣ ಕರ್ನಾಟಕದ ಭಾಗದಲ್ಲಿ ಹೆಚ್ಚು ಕಡಿಮೆ ಬೆಳಗಾವಿ ಭಾಗದಲ್ಲಿಯಂತೆಯೇ ಹಚ್ಚೆ ಮಸಿ ರರಿಸುತ್ತಾರೆ. ಅಲ್ಲದೆ ಇಲ್ಲಿ ವೀಳ್ಯದೆಲೆ ರಸದಿಂದಲೂ ಹಚ್ಚೆ ಮಾಡುವುದುಂಟು. ಆದರೆ ಇದಕ್ಕೆ ಸೆಗಣಿಯನ್ನು ಸ್ವಲ್ಪ ಸೇರಿಸಿ ಕಪ್ಪನ್ನು ಪಡೆಯಲು ಹರಳೆಣ್ಣೆ ದೀಪ ಬಳಸಬೇಕು. ಹಚ್ಚೆಯ ಸೊಪ್ಪೆಂದೇ ಒಂದು ಸೊಪ್ಪಿದೆ. ಆದರ ರಸಕ್ಕೆ ಸ್ವಲ್ಪ ಇದ್ದಿಲಪುಡಿಯನ್ನು ಬೆರೆಸಿದರೆ ಆಯಿತು. ಇಂಥ ಹಲವಾರು ಬಗೆಯ ಮಾಹಿತಿ ಇಲ್ಲಿ ದೊರೆಯುತ್ತದೆ.

ಬಳ್ಳಾರಿ ಭಾಗದಲ್ಲಿ ಹಚ್ಚೆ ಮಸಿಗೆ ಹಚ್ಚೆಯ ಕಪ್ಪ ತಯಾರಿಸುವುದು ಎನ್ನುತ್ತಾರೆ. ಹಚ್ಚೆಯ ಕಪ್ಪನ್ನು ಸಿದ್ಧಗೊಳಿಸುವ ರೀತಿ ಹೀಗಿದೆ. ಹೊಸ ಗಡಿಗೆಯನ್ನು ತಂದು ಗಡಿಗೆಯ ಮೇಲಿನ ಕಂಠ ಒಡೆದು ಗಡಿಗೆಯನ್ನು ಕಂಠರಹಿತ ಮಾಡುವರು. ನಂತರ ಹಚ್ಚೆ ಸೊಪ್ಪು, ಒಣ ಅಂಚರಿಕಿ ಸೊಪ್ಪು, ಅರಷಿಣಗಳನ್ನು ಸಮನಾಗಿ ಕೂಡಿಸಿ, ಕುಟ್ಟಿ, ನೀರು ಬೆರೆಸಿ ರಸ ಮಾಡುತ್ತಾರೆ. ಈ ರಸವನ್ನು ಆ ಹೊಸ ಗಡಿಗೆಯ ಒಳಬದಿಗೆ ಲೇಪಿಸುತ್ತಾರೆ. ಇದಾದ ಮೇಲೆ ಅರ್ಧಕಿಲೊ ಒಳ್ಳೆಣ್ಣೆ ಔಡಲೆಣ್ಣೆಯನ್ನು ಪಣತಿಯಲ್ಲಿ ಹಾಕಿ ಒಂಭತ್ತು ಬತ್ತಿಗಳು ಪಣತಿಯಲ್ಲಿ ಉರಿಯುವಂತೆ ಮಾಡಿ, ಅದನ್ನು ಆ ಹೊಸ ಗಡಿಗೆಯಲ್ಲಿ ಇಡುತ್ತಾರೆ. ಆ ಗಡಿಗೆಯ ಮೇಲೆ ಡಬ್ಬಿಯೊಂದನ್ನು ಮುಚ್ಚುತ್ತಾರೆ. ಸಮಾನಾಂತರದಲ್ಲಿರುವ ಬೆರಳಳತೆಯ ಬತ್ತಿಗಳು ರಾತ್ರಿಯಿಡೀ ಉರಿಯುತ್ತವೆ. ಬೆಳಿಗ್ಗೆ ಮುಚ್ಚಳ ತೆಗೆದಾಗ ದೀಪದ ಕಪ್ಪು ಹಚ್ಚೆಯ ಸೊಪ್ಪಿನ ಒಳ ಅಂಬರಕಿ ಸೊಪ್ಪಿನ ಅರಿಷಿಣ ಮಿಶ್ರಣದ ರಸದೊಂದಿಗೆ ಕಲ ಬೆರಕಿಯಾಗಿರುತ್ತದೆ. ಈ ಕಪ್ಪನ್ನು ಸಣ್ಣ ಕುಡಿಕೆಯಲ್ಲಿ ತಮಗೆ ಬೇಕಾದಷ್ಟು ಸಂಗ್ರಹಸಿಕೊಂಡು ಹಚ್ಚೆಹೊಯ್ಯಲು ಒಯ್ಯುತ್ತಾರೆ. ಮಧ್ಯಪ್ರದೇಶದಲ್ಲಿ ಕಪ್ಪಿನೊಂದಿಗೆ, ಅಗಸಿ ಎಣ್ಣೆ ಬೆರಸಿ ಸಿದ್ಧಗೊಳಿಸುತ್ತಾರೆ. ಮಹಾರಾಷ್ಟ್ರ, ಆಂಧ್ರ, ಕೇರಳಗಳಲ್ಲಿ ಇದೇ ರೀತಿ ತಯಾರಿಸುತ್ತಾರೆ. ಮಧ್ಯಪ್ರದೇಶದ ಆದಿವಾಸಿ ಹೆಂಗಸರ

ಹಚ್ಚೆ ಮಸಿ ತಯಾರಿಕೆ ಈ ರೀತಿ ಇದೆ: ಸುಟ್ಟ ಹಾವಿನ ಚರ್ಮದ ಬೂದಿಯನ್ನು ಅಗಸಿ ಎಣ್ಣೆಯಲ್ಲಿ ಮಿಶ್ರಮಾಡಿ ಹಚ್ಚೆಗೆ ಬಳಸುತ್ತಾರೆ. ದೀಪದ ಕುಡಿಯ ಕಾಡಿಗೆಯೊಂದಿಗೆ ಹಸಿರಲೆಗಳರಸ ಮಿಶ್ರಣ ಮಾಡಿಯೂ ಹಚ್ಚೆಗೆ ಬಳಸುತ್ತಾರೆ. ಭಾರತಕ್ಕೆ ಬಂದ ವಿದೇಶಿ ತಾವತ್ತೋ [೧೬೪೧-೧೬೬೭] ಹೆಂಗಸರ ಹಚ್ಚೆಯ ಬಗ್ಗೆ ಹೇಳುತ್ತ ಹೂವಿನ ಹಚ್ಚೆ ಹೊಯ್ದಿಕೊಳ್ಳಲು ಅದಕ್ಕೆ ಯಾವುದೋ ಬೇರಿನ ರಸದಿಂದ ವಿಧ ವಿಧವಾದ ಬಣ್ಣ ಹಾಕುತ್ತಾರೆ. ಎಂದಿದ್ದಾನೆ.

ಮಧ್ಯಭಾರತದಲ್ಲಿ ಇನ್ನೂ ಕೆಲವು ಬುಡಕಟ್ಟು ಜನಾಂಗಗಳು ಬೀಟೆ ಮರದ ತೊಗಟೆಗೆ ನೀರು ಹಾಗೂ ಅರಿಷಿಣ ಪುಡಿಯನ್ನು ಸೇರಿಸಿ ಬಣ್ಣ ತಯಾರಿಸುತ್ತಾರೆ. ಕೆಲವು ನೀಲಗಿರಿ ಮರದ ಎಲೆಯ ರಸಕ್ಕೆ ದೀಪದ ಕಪ್ಪನ್ನು ಕೂಡಿಸಿ ಬಣ್ಣ ತಯಾರಿಸುವುದುಂಟು. ಕರ್ನಾಟಕದಲ್ಲಿಯೂ ಇದೇ ರೀತಿಯ ತಯಾರಿಕೆ ಇರುವುದನ್ನು ಗಮನಿಸಬೇಕು. ಹಚ್ಚೆಯ ಕಲೆ ಒಂದು ರೀತಿಯಲ್ಲಿ ಸಂಚಾರಿ ಕಲೆಯಿದ್ದಂತೆ. ಹಚ್ಚೆ ಹಾಕುವ ಜನಾಂಗ ದೂರದೂರಕ್ಕೆಲ್ಲ ವಲಸೆ ಹೋದಂತೆ ಆ ಚಿತ್ರವಿನ್ಯಾಸ ಆ ಮಸಿಯ ತಯಾರಿಕೆಯನ್ನು ಕುಲಿತಿರುತ್ತಾರೆ. ಹೀಗಾಗಿ ಹಚ್ಚೆಯ ಮಸಿ ತಯಾರಿಸುವ ವಿಧಾನಗಳಲ್ಲಿ ಕೆಲವು ಸಲ ಸಾಮ್ಯತೆಗಳು ಕಂಡುಬರುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಸುಲಭವಾಗಿ ಸಿಗುವಂತಹ ಸಾಮಗ್ರಿಗಳಿಂದಲೇ ಹಚ್ಚೆಯ ಬಣ್ಣವನ್ನು ಕರ್ನಾಟಕದ ವಿವಿಧ ಕಡೆಗಳಲ್ಲಿ ತಯಾರಿಸಿರುತ್ತಾರೆ. ಕರ್ನಾಟಕದಲ್ಲಿ ಹಚ್ಚೆಯ ಬಣ್ಣ ತಯಾರಿಸುವ ವಿಧಾನಗಳು ಹೀಗಿರುತ್ತವೆ.

೧. ಮನೆಯವರೇ ಸೊಪ್ಪನ್ನು ಹಂಚಿಗೆ ತಿಕ್ಕಿ, ಹರಳೆಣ್ಣೆಯ ದೀಪಕ್ಕೆ ಹಿಡಿದು, ಅದರಿಂದ ಬಂದ ಕಪ್ಪಿಗೆ ನೀರನ್ನು ಹಾಕಿ ಮಸಿ ಸಿದ್ಧಗೊಳಿಸಲಾಗುವುದು.

೨. ವೀಳ್ಯದೆಲೆಯ ರಸವನ್ನು ಹೊಸ ಹಂಚಿಗೆ ಹಚ್ಚಿ, ಹರಳೆಣ್ಣೆಯ ದೀಪಕ್ಕೆ ಹಿಡಿದರೆ ಅದರಿಂದ ಕಪ್ಪು ಬಣ್ಣ ಬರುತ್ತದೆ. ಅದಕ್ಕೆ ಆಕಳು ಹಾಲು ಇಲ್ಲವೆ ಮೊಲೆ ಹಾಲನ್ನು ಬೆರೆಸಿ, ಬಣ್ಣ ತಯಾರಿಸುತ್ತಾರೆ.

೩. ಎಳ್ಳೆಣ್ಣೆ ದೀಪದ ಬತ್ತಿಯ ಕಪ್ಪಗೆ ಮೊಲೆ ಹಾಲನ್ನು ಬೆರೆಸಿ ಬಣ್ಣ ತಯಾರಿಸುತ್ತಾರೆ.

೪. ಇದ್ದಿಲಿನ ನುಣುಪಾದ ಪುಡಿಗೆ ಹಚ್ಚೆಯ ಸೊಪ್ಪಿನ ರಸವನ್ನು ಬೆರೆಸಿ, ಬಣ್ಣ ತಯಾರಿಸುತ್ತಾರೆ.

೫. ಹಾಗಲ ರಸ ಇಲ್ಲವೆ ಚಪ್ಪರದವರೆಗೆ ರಸವನ್ನು ಮಣ್ಣಿನ ಕುಡಿಕೆಯಲ್ಲಿ ಹಾಕಿ, ಸ್ವಲ್ಪ ಬೆಚ್ಚಗೆ ಮಾಡಿದರೆ ಲೋಳೆಯಾಕಾರದ ಬಣ್ಣ ತಯಾರಾಗುತ್ತದೆ.

೬. ಕಿರುಗೋಣಿಸೊಪ್ಪಿನ ರಸಕ್ಕೆ ಅಥವಾ ನೆಲ್ಲಿಸೊಪ್ಪಿನ ರಸಕ್ಕೆ ಎಳ್ಳೆಣ್ಣೆಯ ದೀಪದ ಕಪ್ಪನ್ನು ಸೇರಿಸಿ ಬಣ್ಣ ತಯಾರಿಸುತ್ತಾರೆ.

೭. ತುಂಬೆ ಸೊಪ್ಪಿನ ರಸಕ್ಕೆ ಮೊಲೆಹಾಲು ಮತ್ತು ಕೊಬ್ಬರಿಎಣ್ಣೆ ಬೆರೆಸಿ, ಬಣ್ಣ ತಯಾರಿಸುತ್ತಾರೆ.

೮. ಬರಗರನ ಸೊಪ್ಪಿನ ರಸ ಅಥವಾ ಹೊನಗನ ಸೊಪ್ಪಿನ ರಸವನ್ನು ಮಡಕೆಯಲ್ಲಿ ಬೆರೆಸಿ, ಮೊಲೆಹಾಲನ್ನು ಸೇರಿಸಿ, ಬಣ್ಣ ತಯಾರಿಸುತ್ತಾರೆ.

೯. ಶಿವಮೊಗ್ಗದ ಕಡೆಗೆ ಕಾಚು, ಅಳಲೆಕಾಯಿ, ವೀಳ್ಯದೆಲೆಯನ್ನು ಸುಟ್ಟು ಕರಕುಮಾಡಿ, ಅದಕ್ಕೆ ಚಿಮಣಿ ದೀಪದ ಕಪ್ಪು ಸೇರಿಸಿ ಬಣ್ಣ ತಯಾರಿಸುತ್ತಾರೆ.

ಈ ರೀತಿ ಹಚ್ಚೆ ಮಸಿಯ ತಯಾರಿಕೆ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದಿತು. ಇದರಲ್ಲಿ ಕಪ್ಪು ಮಿಶ್ರಿತ ಹಸಿರು, ಕಂದುಹಸಿರು, ಬಣ್ಣವೇ ಹೆಚ್ಚಾಗಿ ಕಂಡುಬರುತ್ತದೆ. ಇತ್ತೀಚೆಗೆ ಆಧುನಿಕ ಉಪಕರಣಗಳ ಮೂಲಕ ಕೆಂಪು, ಹಳದಿ, ನೀಲಿ, ಹಸಿರು ಬಣ್ಣದ ಹಚ್ಚೆಯನ್ನೂ ಹಾಕುತ್ತಿದ್ದಾರೆ. ಹಳೆಯ ತಲೆಮಾರಿನವರು ಮಾತ್ರ ಹಿಂದಿನಿಂದ ಬಂದ ಕಪ್ಪು ಮಿಶ್ರಿತ ಹಸಿರು ಬಣ್ಣದ ಹಚ್ಚೆಯನ್ನೇ ಬಯಸುತ್ತಾರೆ. ಬೇರೆ ಬೇರೆ ವರ್ಣಗಳಿಂದ ಹಚ್ಚೆ ಹಾಕಿಸಿಕೊಂಡ ಜನರು ಕರ್ನಾಟಕದಲ್ಲಿ ಮಾತ್ರ ಅಷ್ಟಾಗಿ ಕಂಡುಬರುವುದಿಲ್ಲ. ಮುಂಬೈ, ಪೂನಾ, ಗೋವಾದ ಕಡೆಗೆ ವಲಸೆ ಹೋದ ಜನರು ಮಾತ್ರ ಕೆಂಪು, ಹಳದಿ ಬಣ್ಣದ ಹಚ್ಚೆ ಹಾಕಿಸಿಕೊಂಡಿರುವುದನ್ನು ಗುರುತಿಸಬಹುದಾಗಿದೆ.


## ಹಚ್ಚೆ ಹಾಕಿಸುವವರು:


ಹುಡುಗ ಅಥವಾ ಹುಡುಗಿ ಮೊದಲು ತೊಟ್ಟುಕೊಳ್ಳುವ ಬಟ್ಟೆಗೆ ಹುಟದಟ್ಟೆಯೆಂದು ಹೆಸರು. ಈ ಹುಟದಟ್ಟೆಯನ್ನು ಸೋದರಮಾವ, ಸೋದರತ್ತೆ, ಅಜ್ಜ, ಅಜ್ಜಿ ಇದರಲ್ಲಿ ಯಾರಾದರೊಬ್ಬರು ತರಬೇಕೆಂಬ ನಿಯಮವಿದೆ. ಇದರಂತೆ ಯಾವುದೇ ವ್ಯಕ್ತಿಗೆ ಮೊದಲನೆಯ ಹಚ್ಚೆಯನ್ನು ಬೇರೆಯವರೇ ಹಾಕಿಸುವ ಪದ್ಧತಿ ಇದೆ.


ಕರ್ನಾಟಕದಲ್ಲಿ ಈ ಮೊದಲು ಹಚ್ಚೆಯನ್ನು ಸ್ನೇಹಿತ ಸ್ನೇಹಿತನಿಗೆ,
















































































ತ್ರಿಶೂಲ.







ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕೊಡುಗೆ

ಗೆಳೆಯ ಗೆಳತಿಗೆ, ಗೆಳತಿ ಗೆಳತಿಯರಿಗೆ, ಅಣ್ಣ ತಂಗಿಯರಿಗೆ, ತಂಗಿ ಅಕ್ಕಂದಿರಿಗೆ, ಅತ್ತಿಗೆ ಮೈದುನನಿಗೆ, ಭಾವ ನಾದಿನಿಗೆ, ಅಜ್ಜ ಅಜ್ಜಿಗೆ, ಮೊಮ್ಮಕ್ಕಳಿಗೆ ತಾಯಿ- ತಂದೆಗಳು ತವರೂರು ನೆನಪಿಗಾಗಿ ಹಚ್ಚೆ ಹೊಯ್ಸಿಸುತ್ತಾರೆ.

ಹೀಗೆ ಪ್ರೀತಿಯ ಕುರುಹಾಗಿ, ನೆನಪಿನ ಸಂಕೇತವಾಗಿ ಒಬ್ಬರು ಇನ್ನೊಬ್ಬರಿಗೆ ಹಚ್ಚೆ ಹಾಕಿಸುವ ಸಂಪ್ರದಾಯ ಕರ್ನಾಟಕದಲ್ಲಿದೆ. ಹಚ್ಚೆ ಹಾಕಿಸಿದವರು, ಹಾಡು ಕಲಿಸಿದವರು ಮತ್ತು ಹಸುಮಕ್ಕಳಿಗೆ ಹಾಲು ಹಾಕಿದವರು ಸತ್ತಿಗೆಯ ನೆರಳಲ್ಲಿ ಬರುವರೆಂಬ ನಂಬಿಕೆ ಜನಪದರಲ್ಲಿದೆ.

ತನ್ನ ತೋಳಿನ ಮೇಲೆ ಸುಂದರವಾದ ಹಚ್ಚೆ ಹಾಕಿಸಿದ್ದಕ್ಕೆ ಗರತಿ ಪಡುವ ಸಂತೋಷ ಅಪರಿಮಿತ. ಆಕೆ ಹಚ್ಚೆ ಹಾಕಿಸಿದ ಸ್ನೇಹಕ್ಕೆ ಪ್ರೀತಿಯಾಗಿ ಹಚ್ಚೆ ಹಾಕಿಸಿದವರನ್ನು ಅಂತಃಕರಣದಿಂದ ಹೀಗೆ ನೆನೆಯುತ್ತಾಳೆ.

ಹಚ್ಚೆ ಉಯ್ದಿದಮ್ಮನ ಎಲ್ಲಮ್ಮ ನೆನೆಯೋದು
ಕಲಬಾವಿ ತಾವ ಕೈತೊಳೆದು ಸುವ್ವಯ್ಯಾ
ಕಲಬಾವಿ ತಾವ ಕೈಯ ತೊಳೆದು ಬರುವಾಗ
ಹಚ್ಚೆ ಉಯಿಸ್ಥಮ್ಮಗೆ ಸುಖಬಾಳ ಸುವ್ವಯ್ಯ

ಹಚ್ಚೆ ಹೊಯ್ಯುವವರು ಹಚ್ಚೆ ಹಾಕಿಸುವವರನ್ನು ಸ್ಮರಿಸುವದಷ್ಟೇ ಅಲ್ಲದೆ ಮನೆಗೆ ಇನ್ನು ಕೆಲವುಸಲ ಹಚ್ಚೆ ಹಾಕಿಸುವವರ ಹೆಸರನ್ನೇ ತಮ್ಮ ಕೈಮೇಲೆ ಹಾಕಿಕೊಂಡ ಉದಾಹರಣೆಗಳೂ ಕಂಡುಬರುತ್ತವೆ. ಹಚ್ಚೆ ಹಾಕಿದ ಹಚ್ಚೆಯವರೂ ಹಚ್ಚೆ ಹಾಕಿಸುವವರನ್ನು ನೆನೆದಿದ್ದಾರೆ. ಅದು ಹೀಗಿದೆ:

ಹಚ್ಚೆ ಉಯಿಸಮ್ಯಗೆ ಎಲ್ಲ ಭಾಗ್ಯವು ಬರಲಿ.
ಪಲ್ಲಕ್ಕಿ ಮೇಲೆ ಮಗ ಬರಲಿ ಸುವ್ವಯ್ಯಾ.
ಪಲ್ಲಕ್ಕಿ ಮೇಲೆ ಮಗ ಬರಲಿ ಅವ್ವಯ್ಯಾ.
ಮಲ್ಲಿಗೆ ಮುಡಿಯೋ ಸೊಸೆಬರಲಿ ಸುವ್ವಯ್ಯಾ
ಹಚ್ಚೆ ಹೊಯ್ಯುವವರು ಹಚ್ಚೆ ಹಾಕಿಸುವವರನ್ನು ಸ್ಮರಿಸುವದಷ್ಟೇ ಅಲ್ಲದೆ

ಮನೆಗೆ ಮಗ ಬರಲಿ, ಸೌಭಾಗ್ಯ ಬರಲಿ, ಮಲ್ಲಿಗೆ ಮುಡಿಯೋ ಸೊಸೆ ಬರಲಿ ಎಂದು ಹೇಳುವ ಹರಕೆ ಯಾರಿಗೆ ಪ್ರಿಯವಾಗುದಿಲ್ಲ. ಇಂತಹ ಆತ್ಮೀಯತೆ, ಹಚ್ಚೆ ಹಾಕಿಸುವವರಿಗೆ ಸ್ಫೂರ್ತಿಯನ್ನು ಕೊಟ್ಟಿರಬೇಕು.

ಸ್ನೇಹದ ಕುರುಹಾಗಿ, ಸೌಂದರ್ಯದ ಪ್ರತೀಕವಾಗಿ ಹುಟ್ಟಿಕೊಂಡ ಹಚ್ಚೆ ಸಂಪ್ರದಾಯ ಮುಂದೆ ಧಾರ್ಮಿಕ ವಿಧಿಯಾಗಿ, ಅದು ವಿಧಿಕ್ರಿಯೆಯ ಸ್ವರೂಫವನ್ನು ಪಡೆಯಿತಲ್ಲದೆ ಉದ್ದೇಶ, ಸ್ವರೂಪಗಳಲ್ಲಿ ವ್ಯತ್ಯಾಸ ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡಿತು.

## ಹಚ್ಚೆಹಾಕುವ ವಿಧಾನ:

ಹಚ್ಚ ಹಾಕುವಿಧಾನಗಳನ್ನು ೧. ಪ್ರಾಚೀನ ವಿಧಾನ ೨, ಆಧುನಿಕ ವಿಧನವೆಂದು ವರ್ಗಿಕರಿಸಿಕೊಂಡು ಇಲ್ಲಿ ವಿವೇಚಿಸಲಾಗಿದೆ.

**೧. ಪ್ರಾಚೀನ ವಿಧಾನ**: ಇದರಲ್ಲಿ ಅ. ಸಾಮಾನ್ಯ ಹಚ್ಚೆ ಹೊಯ್ಯುವವಿಧಾನ,
ಆ) ಹುಬ್ಬು ಚರ್ಮದ ಹಚ್ಚಹೊಯ್ಯುವ ವಿಧಾನ ಎಂದು ಎರಡು ಬಗೆಗಳಿವೆ.

ಅ. ಸಾಮಾನ್ಯ ಹಚ್ಚೆಹೊಯ್ಯುವ ವಿಧಾನ: ಪ್ರಾಚೀನ ಕರ್ನಾಟಕದಲ್ಲಿ ಹಚ್ಚೆ ಹಾಕುವ ವೃತ್ತಿಯವರು ಊರೂರಿಗೆ ಮನೆ ಮನೆಗೆ ಅಲೆದಾಡಿ ಹಚ್ಚೆ ಹೊಯ್ಯುತ್ತಿದ್ದುದನ್ನು ಕಂಡು ಬಂದಿದೆ. ಹೆಚ್ಚಾನುಹೆಚ್ಚು ಕೆಳವರ್ಗದ ಜನರು ಮಾತ್ರ ಈ ವೃತ್ತಿಯನ್ನು ಪರಂಪರಾಗತವಾಗಿ ಅನುಸರಿಸಿಕೊಂಡು ಬಂದಿದ್ದಾರೆ.

ತಮ್ಮ ತಮ್ಮ ಊರುಗಳಲ್ಲಿ ಹಚ್ಚೆ ಹೊಯ್ಯುವವರು ಮಂಗಳವಾರ, ಶುಕ್ರವಾರದ ದಿನಗಳಲ್ಲಿ ಹಚ್ಚೆ ಹಾಕಿದರೆ ಬೇಸಿಗೆ ಕಾಲದಲ್ಲಿ ಹಬ್ಬ, ಹುಣ್ಣಿವೆ, ಜಾತ್ರೆ, ಉತ್ಸವಗಳಲ್ಲಿ ಬೇರೆ ಊರುಗಳಿಗೆ ಹೋಗಿ ಹಚ್ಚೆಯನ್ನು ಹೊಯ್ಯುತ್ತಿದ್ದರು. ಕೆಲವರಿಗೆ ಇದು ವೃತ್ತಿಯೂ ಹೌದು: ಪ್ರವೃತ್ತಿಯೂ ಹೌದು. ಹಚ್ಚೆ ಹಾಕುವವರು ತಮ್ಮನ್ನು ತಾವು ಒಂದು ಮಾದರಿಯಂತೆ ತಮ್ಮ ಮೈಮೇಲಿನ ಹಚ್ಚೆ ಚಿತ್ರಗಳನ್ನು ತೋರಿಸುತ್ತ, ಸ್ತ್ರೀವರ್ಗವನ್ನು ಆಕರ್ಷಿಸುತ್ತ ಹಚ್ಚೆಗೆ ತೊಡಗುತ್ತಿದ್ದರು. ಇದಕ್ಕೆ ಹಚ್ಚೆ ಹಾಕುವವರು ಸ್ತ್ರೀ ಪ್ರಧಾನ ವೃತ್ತಿಯೊಂದು ಕಾರಣವಾದರೆ ಅವರ ಭಾವವನ್ನು ಗಟ್ಟಿಗೊಳಿಸುವಲ್ಲಿ ಈ ಹಚ್ಚೆ ಹಾಕುವವರ ಭಾವುಕ ಮಾತುಗಳು, ಸಂದರ್ಭಾನುಸಾರ ಕತೆಗಳು ಹೆಚ್ಚು ಪ್ರಮುಖವಾಗಿವೆ. ಹಚ್ಚೆ ಹಾಕಿಸಿಕೊಳ್ಳದಿದ್ದರೆ ಮುಕ್ತಿ ಇಲ್ಲ. ಹಚ್ಚೆ ಹಾಕಿಸಿಕೊಂಡರೆ ಮಾಡಿದ ಅಡುಗೆ ಹಳಿಸುವುದಿಲ್ಲ. ಹಚ್ಚೆಗಾಗಿ ಸೀತಾ ದೌಪದಿಯರು ಅದೆಷ್ಟು ಪರಿಶ್ರಮಪಟ್ಟರೂ

ಅವರಿಗೆ ಹಚ್ಚೆಯ ಸೌಭಾಗ್ಯ ದೊರೆಯದ್ದರಿಂದ ಬಹಳಷ್ಟು ದುಃಖ ಅನುಭವಿಸಬೇಕಾಯಿತು. ಕುಂಕುಮ ಬೊಟ್ಟಿಗಾದರೂ ಹಣೆಯ ಮೇಲೊಂದು ಹಂಚಿಬೊಟ್ಟು ಇರಬೇಕು. ಇದರಿಂದ ಗಂಡಸರು ತುಂಬಪ್ರೀತಿಸುತ್ತಾರೆ. ಎಂಬಂತಹ

ಹಚ್ಚೆ ಚಿತ್ರಕಲೆ.........................................................................................................೧೪

ಭಾವುಕ ಮಾತುಗಳನ್ನು ಹೇಳುತ್ತಾ ಎಳೆಯ ಹುಡಗರಿಗೆ ಹಚ್ಚೆಯ ಆಶೆಯನ್ನು ಹುಟ್ಟಿಸಿ ಹಚ್ಚೆಗೆ ತೊಡಗುವುದು ಒಂದು ರೀತಿ ಜನಪದರಲ್ಲಿ ಪರಂಪರೆಯಿಂದ ಬಂದ ಹಚ್ಚೆ ಸಾಂಪ್ರದಾಯವನ್ನು ಬಿಡಲಾರದೆ ತಮ್ಮ ಸ್ತ್ರೀಯರಿಗೆ ಹಚ್ಚೆ ಹಾಕಿಸಬೇಕೆಂಬ ಪೂರ್ವ ನಿಶ್ಚಿತ ಆಶೆಯಿಂದಾಗಿ ಹಚ್ಚೆ ಹೊಮ್ಮಿಸುವುದು ಇನ್ನೊಂದು ರೀತಿ.

ಹಚ್ಚೆ ಹೊಯ್ಯಲು ತೊಡಗುತ್ತಾರೆ ಎಂದರೆ ತಮ್ಮಲ್ಲಿನ ಹಚ್ಚೆಯ ಕಡತ ತೆರೆದು ಚಿತ್ರಗಳನ್ನು ತೋರಿಸಿ ಅವರಿಗೆ ಮೆಚ್ಚಿಕೆಯಾದ ಚಿತ್ರಗಳನ್ನು ಚಿತ್ರಿಸಲು ಸಿದ್ಧತೆ ಮಾಡಿಕೊಳ್ಳುತ್ತಾರೆ. ಸಿದ್ಧತೆಯ ಪೂರ್ವಕ್ರಮವಾಗಿ ಸೂಜಿಯ ಕಟ್ಟು, ಕಪ್ಪುದ್ರವದ ಕುಡಿಕೆ, ಕಡ್ಡಿಯಂತಹ ಸಾಮಗ್ರಿಗಳು ಓರಣಗೊಳ್ಳುತ್ತವೆ.

ಪ್ರಾಚೀನ ಪರಂಪರೆಯವರಿಗೆ ರೂಢಿಗತ ಹಚ್ಚೆ ಬೇಕಾಗಿದ್ದರೆ ಚಿತ್ರ ನೋಡದೆ ಸಲೀಸಾಗಿ ಹಚ್ಚೆ ಹೊಯ್ಯುವವರು ಚಿತ್ರ ನಕ್ಷೆಯನ್ನು ಬರೆಯುತ್ತಾರೆ. ಕಡತದಲ್ಲಿದ್ದುದನ್ನು ಆಯ್ಕೆ ಮಾಡಿದವರಿಗೆ ಆ ಪುಸ್ತಕ ನೋಡುತ್ತ ಹಚ್ಚೆ ಹೊಯ್ಯುವ ಸ್ಥಳದ ಮೇಲೆ ನಕ್ಷೆ ಹಾಕುತ್ತಾರೆ.

ಹಚ್ಚೆ ಹಾಕುವ ಶರೀರದ ಭಾಗದಲ್ಲಿ ಮೊದಲು ಕೊಬ್ಬರಿ ಎಣ್ಣೆಯನ್ನು ಲೇಪಿಸಿ ಸ್ವಲ್ಪ ಸಮಯ ತಡೆದು ನೀರಲ್ಲಿ ಅದ್ದಿದ ಕಡ್ಡಿಯಿಂದ ನೀರಿನ ಗೆರೆ ಮೂಡುವಂತೆ ಹಚ್ಚೆಯ ನಕ್ಷೆ ಬಿಡಿಸುತ್ತಾರೆ. ನೀರಿನಿಂದ ಇಲ್ಲವೆ ಹಚ್ಚೆ ಮಸಿಯಿಂದಲೂ ರೇಖೆಗಳನ್ನು ಮೂಡಿಸಿ ನಂತರ ಆ ರೇಖೆಗಳನ್ನು ಮೇಲೆ ಸರಿಯಾದ ಕ್ರಮದಲ್ಲಿ ಹಚ್ಚೆ ಹೊಯ್ಯತೊಡಗುತ್ತಾರೆ.

ತುಕ್ಕು ಅಥವಾ ಜಂಗು ಹತ್ತದಿರುವ ಸೂಜಿಗಳ ಕಟ್ಟನ್ನು ಪರೀಕ್ಷಿಸಿ ಸಣ್ಣ ಚಿತ್ರ ವಿನ್ಯಾಸವಿದ್ದರೆ ಮೂರು ಸೂಜಿಗಳ ಕಟ್ಟನ್ನೂ ದೊಡ್ಡ ಚಿತ್ರದ ವಿನ್ಯಾಸವಿದ್ದರೆ ಮೂರಕ್ಕಿಂತ ಹೆಚ್ಚು ಸೂಜಿಗಳಿರುವ ಕಟ್ಟನ್ನು ಹೊಯ್ಯಲು ಉಪಯೋಗಿಸುತ್ತಾರೆ.

ಹಚ್ಚೆಯ ಮಸಿಯನ್ನು ಚಿಕ್ಕ ಕುಡಿಕೆಯಲ್ಲಿ ಹಾಕಿಟ್ಟುಕೊಂಡು ಸೂಜಿಗಳ ಮೊನಚನ್ನು ಆ ಮಸಿಯಲ್ಲಿ ಅದ್ದಿ, ನಕ್ಷೆ ಹಾಕಿದ ಶರೀರದ ಭಾಗದ ಮೇಲೆ ಕ್ರಮವಾಗಿ ಚುಚ್ಚುತ್ತ ಹೋಗುತ್ತಾರೆ. ನೀರಿನಿಂದ ಇಲ್ಲವೆ ಮಸಿಯಿಂದ ಮೂಡಿದ ರೇಖಾ

ವಿನ್ಯಾಸವೆಲ್ಲ ಸೂಜಿಯ ಚುಚ್ಚುವಿಕೆಗೆ ಒಳಪಡುತ್ತದೆ.ಹಾಳೆಗಳ ಮೇಲೆರಂಧ್ರಗಳ ಚಿತ್ರವಿನ್ಯಾಸ ಮೂಡುವಂತೆ ಸೂಜಿ ಚುಚ್ಚಲ್ಪಡುತ್ತದೆ.

ಹಚ್ಚೆ ಹೊಯ್ಯುವ ಈ ಸಂದರ್ಭದಲ್ಲಿ ಕಂಡುಬರುವ ಹಚ್ಚೆ ಹಾಕಿಸಿಕೊಳ್ಳವವರ ವೇದನೆಯನ್ನು ಅವರೇ ಬಲ್ಲರು. ಆ ನೋವನ್ನು ಮರೆಸಲು ಹಚ್ಚೆ ಹಾಕುವವರು ಹಾಸ್ಯಭರಿತವಾಗಿ ಸುಂದರವಾದ ಕೆಲವು ಸಲ



ಶೃಂಗಾರಮಯವಾದ ಅಶ್ಲೀಲ ಹಾಡುಗಳನ್ನು ಇಲ್ಲವೆ ಶಿಶುಪ್ರಾಸದಂತಿರುವ ನಗೆಯ ಚಟುವಟಿಕೆಗಳನ್ನು ಕತೆಗಳನ್ನು ಹೇಳುತ್ತಿರುತ್ತಾರೆ. ಹೊಯ್ಯುವ ಸಮಯದುದ್ದಕ್ಕೂ ಹಚ್ಚೆ ಹಾಕುವವರು ಸಮಾಧಾನಿಸುತ್ತಿದ್ದರೆ ಹಾಕಿಸಿಕೊಳ್ಳುವವರ ವೇದನೆಯಿಂದ ನರಳುತ್ತಿರುತ್ತಾರೆ: ಅಳುತ್ತಿರುತ್ತಾರೆ. ಹರೆಯದ ಹುಡುಗಿಯರು ಸಂಕೋಚಕ್ಕೊಳಗಾಗಿ ಹಲ್ಲು ಮುಡಿ ಕಚ್ಚಿಕೊಂಡು ನೋವನ್ನು ನುಂಗುತ್ತ ನಡುನಡುವೆ ಹಾಸ್ಯ, ಅಶ್ಲೀಲ, ಚುಟುಕು, ಹಾಡು, ಕತೆಗಳಿಗೆ ನಗುತ್ತಲೂ ಕೂತಿರುತ್ತಾರೆ. ಹಚ್ಚೆ ಹೊಯ್ದಾದ ನಂತರ ನೀನು ನಿಜಕ್ಕೂ ಅಪ್ಸರೆ: ಇನ್ನೇನು ಮುಗಿದೇ ಹೋಯಿತು ಎಂಬಂತಹ ಮಾತನ್ನು ಹೇಳುತ್ತಿರುತ್ತಾರೆ. ತಾವು ಶಾಶ್ವತವಾದ ಪವಿತ್ರವಾದ ಸೌಭಾಗ್ಯದ ಸಂಕೇತವೊಂದನ್ನು ಪಡೆದೆವೆಂಬ ಸಂಭ್ರಮ, ಹೆಮ್ಮೆ ಹಚ್ಚೆ ಹಾಕಿಸಿಕೊಂಡವರಲ್ಲಿ ಉಂಟಾಗುತ್ತದೆ. ಹೊಯ್ಯುವುದು ಮುಗಿದ ಮೇಲೆ ಹಚ್ಚೆ ಚುಚ್ಚಿದ ಆ ಭಾಗದ ಮೇಲೆ ಕಪ್ಪು ಮಸಿಯನ್ನು ಲೇಪಿಸುತ್ತಾರೆ.

ಸುಮಾರು ಅರ್ಧ ಗಂಟೆಯಿಂದ ಒಂದೆರಡು ಗಂಟೆಯ ತನಕವೂ ಹಚ್ಚಯ ಹೊಯ್ಯುವಿಕೆ ಸಾಗಿರುತ್ತದೆ. ನಡುನಡುವೆ ಬಿಡುವು ಕೊಟ್ಟು ಕೊಳ್ಳುವುದೂ ಉಂಟು, ಚರ್ಮದ ಮೇಲ್ಪದರವನ್ನು ಛೇದಿಸಿ ಒಳಪದರಿಗೆ ಮುಟ್ಟುವಷ್ಟು ಮಾತ್ರ ಸೂಜಿ ಚುಚ್ಚಲ್ಪಡುತ್ತಿರುತ್ತದೆ. ಹೀಗಾಗಿ ಚುಚ್ಚುವಿಕೆಯಲ್ಲಿ ಸಮಾನಗತಿ, ಸಂಯಮ ಇರಬೇಕಾಗುತ್ತದೆ. ಹಚ್ಚೆ ಹೊಯ್ದಮೇಲೆ ನೀರು ಹಾಕಿ, ಹಚ್ಚೆ ಹೊಯ್ದ ಭಾಗವನ್ನು ತೊಳೆಯುತ್ತಾರೆ. ಸೂಜಿಯು ಮಾಡಿದ ರಂಧ್ರದೊಳಗೆ ಹಚ್ಚೆ ಮಸಿ ಇಳಿದು ಚಿತ್ರವಿನ್ಯಾಸ ಸರಿಯಾಗಿ ಮೂಡಿದ್ದರೆ ಸರಿ: ಇಲ್ಲದಿದ್ದರೆ ಮತ್ತೆ ಮೂಡದೆ ಇರುವ ಜಾಗದಲ್ಲಿ ಕಡ್ಡಿಯಿಂದ ರೇಖೆಯನ್ನು ಚಿತ್ರಿಸಿ ಮೊದಲಿನಂತೆ ಹಚ್ಚೆ ಹೊಯ್ಯುತ್ತಾರೆ. ನಂತರ ಅದರ ಮೇಲೆ ದಟ್ಟವಾಗಿ ಕಪ್ಪನ್ನು ಸವರುತ್ತಾರೆ. ಬಹಳಷ್ಟು ನೋವು ಕಾಣಿಸಿಕೊಂಡರೆ ಆ ಗಾಯದ ಮೇಲೆ ಯೊಬ್ಬರಿ ಎಣ್ಣೆಯನ್ನು ಹಚ್ಚುತ್ತಾರೆ. ಇಲ್ಲವೆ ಅರಿಷಿಣಪುಡಿಯನ್ನು ಲೇಪಿಸುತ್ತಾರೆ.

ಇದು ದಕ್ಷಿಣ ಕರ್ನಾಟಕದಲ್ಲೂ ಕಂಡುಬರುವ ವಿಧಿವಿಧಾನವಾಗಿದೆ. ಕೇರಳದಲ್ಲಿ ಇದೇ ಬಗೆ ಪ್ರಚಲಿತವಾಗಿದೆ. ಹೀಗೆ ಹಚ್ಚೆ ಹಾಕುವ ಬಗೆಗೆ ಅವರಲ್ಲಿ ಪಚ್ಚ ಕುತ್ತುಕ ಎಂದರೆ ಹಸಿರು ಬಣ್ಣವನ್ನು ಹಚ್ಚುವುದು ಎಂದು ಹೆಸರಿದೆ. ಈ ವಿಧಾನ,

ಹಳೆಯ ರೀತಿಯದು, ಇದು ಎಲ್ಲ ಗ್ರಾಮೀಣ ಪ್ರದೇಶದಲ್ಲಿ ಪ್ರಚಲಿತವಿರವಂತಹದು. ಇದನ್ನು ಸಾಮಾನ್ಯ ಹಚ್ಚೆ ಹೊಯ್ಯುವ ವಿಧಾನವೆಂದೂ ಕರೆಯುತ್ತಾರೆ.



**ಆ) ಉಬ್ಬ ಚರ್ಮದ ಹಚ್ಚೆ ಹೊಯ್ಯುವವಿಧಾನ**: ಇದು ತುಂಬ ವೇದನಾಪರವಾದುದು. ಚರ್ಮವನ್ನು ಸುಲಿದು ಇಲ್ಲವೆ ಕತ್ತರಿಸಿ ಕೊರೆದು ಅದರ ಆಳಕ್ಕೆ ಮಾಂಸಖಂಡದಲ್ಲಿ ಕಪ್ಪು ಮಸಿ ತುಂಬಿ ಚರ್ಮವನ್ನು ಉಬ್ಬಿಸಿ ನಂತರ ಹೊಲಿಯುತ್ತಾರೆ. ಕಾಲಕ್ರಮದಲ್ಲಿ ಅದು ವಾಸಿಯಾದ ನಂತರ ಅಲ್ಲಿ ಕಪ್ಪು ಬಣ್ಣದ ಹಚ್ಚೆ ಕಾಣಿಸುತ್ತದೆ ಇದಕ್ಕೆ ರಣಹಚ್ಚೆ ಎಂದು ಕರೆಯಬಹುದು. ಇದನ್ನು ಸೌಂದರ್ಯವರ್ಧನೆಗಾಗಿ ಹಾಕಿಸಿಕೊಳ್ಳದೆ ಶತ್ರು ವರ್ದನ ಪ್ರಸಂಗಕ್ಕಾಗಿ ಮಾತ್ರ ಹೊಯ್ದಿಕೊಳ್ಳುತ್ತಾರೆ. ಭಯಂಕರ ರೂಪದ ಇದನ್ನು ಹೆಚ್ಚಾಗಿ ಪುರುಷರು ತಮ್ಮ ಪೌರುಷದ ಸಂಕೇತವಾಗಿ ಹಾಕಿಸಿಕೊಳ್ಳುವುದು ಕಂಡುಬರುತ್ತದೆ. ಶತ್ರುಗಳಿಗೆ ಭೀತಿಯನ್ನುಂಟು ಮಾಡಲು ಹಾಕಿಕೊಂಡ ಇದು ಕೆಲವು ವಿಶಿಷ್ಟ ಜನಾಂಗಗಳಲ್ಲಿ ಮಾತ್ರ ಕಂಡುಬರುತ್ತದೆ. ಕಡುಗಪ್ಪು ಬಣ್ಣದ ಬುಡಕಟ್ಟಿನ ಜನರಿರುವ ಆಸ್ಟ್ರೇಲಿಯಾ, ತಾನಿಯಾ, ನ್ಯೂಕಾಲೆಡೊನಿಯಾ, ಫಿಜಿಯೇ ಆದಿಯಾದ ಮಲೆನೇಷ್ಯಾ ದೇಶಗಳು, ಅಂದಮಾನ್ ದ್ವೀಪಗಳು ಮತ್ತು ಆಫ್ರಿಕಾದಲ್ಲಿ ಮಾತ್ರ ಈ ಕಲಾ ರೂಢಿಯಲ್ಲಿದ್ದುದಾಗಿ ತಿಳಿದುಬರುತ್ತದೆ. ಪಾಶ್ಚಾತ್ಯ ಪ್ರವಾಸಿ ಹರ್ಮನ್‌ಪಿಲ್ವನ್ ತನ್ನ ಪ್ರವಾಸದ ಅನುಭಭವಗಳನ್ನು ಹೇಳುವಾಗ ಟೈಪಿ ಜನರ ವಿಕೃತಿಹಚ್ಚೆಯ ವಿಧಾನವನ್ನು ಹೀಗೆ ವಿವರಿಸಿದ್ದಾನೆ. “ನಾನು ಮೊದಲನೆಯ ಸಲ ಹಚ್ಚೆ ಕೊಚ್ಚುವ ಕಾರ್ಯಕ್ರಮವನ್ನು ಕಣ್ಣಾರೆ ನೋಡುವುದು ಸಾಧ್ಯವಾಯಿತು. ಒಬ್ಬ ಮನುಷ್ಯ ನೆಲದ ಮೇಲೆ ಮೈಚಾಚಿ ಮಲಗಿದ್ದ, ತುಂಬ ಕಷ್ಟಪಟ್ಟು ಅವನು ತನ್ನ ಮುಖಭಾವದಲ್ಲಿ ಸಮಾಧಾನವನ್ನು ವ್ಯಕ್ತಿಪಡಿಸಲು ಪ್ರಯತ್ನಿಸುತ್ತಿದ್ದರೂ ಅವನು ತುಂಬ ನೋವನ್ನು ಅನುಭವಿಸುತ್ತಿದ್ದನೆಂಬುವುದು ಸ್ಪಷ್ಟವಾಗಿ ತಿಳಿಯುತ್ತಿತ್ತು. ಅವನನ್ನು ಹಿಂಸಿಸುತ್ತಿದ್ದ ಮನುಷ್ಯ ಉಳಿ ಕೊಡತಿಗಳನ್ನು ಹಿಡಿದುಕೊಂಡು ಕಲ್ಲುಕುಟಿಗನಂತೆ ಅವನ ಮೇಲೆ ಬಾಗಿ ತನ್ನ ಕೆಲಸವನ್ನು ನಡೆಸುತ್ತಿದ್ದ. ಆ ಮನುಷ್ಯನ ಒಂದು ಕೈಯಲ್ಲಿ ತೆಳ್ಳನೆಯ ಒಂದು ಕಡ್ಡಿ ಅದಕ್ಕೆ ಹುಲಿಮೀನಿನ ಹಲ್ಲಿನ ಮೊನೆ, ಆ ಮೊನೆಯನ್ನೇರಿ ಆತ ಸುತ್ತಿಗೆಯಂತಿದ್ದ ಸಣ್ಣದೊಂದು ಮರದ ತುಂಡಿನಿಂದ ಬಡಿಯುತ್ತಿದ್ದ. ಹೀಗೆ ಅವನು ತೊಗಲಿಗೆ ತೂತು ಕೊರೆದು ತನ್ನ ಉಪಕರಣವನ್ನು ಬಣ್ಣದ ನೀರಲ್ಲಿ ಅದ್ದಿ, ಚರ್ಮದಲ್ಲಿ ಆಗಿದ್ದ ರಂಧ್ರದಲ್ಲಿ ಚೆನ್ನಾಗಿ ತುಂಬುತ್ತಿದ್ದ. ಈ ದ್ರವವಿದ್ದ ತೆಂಗಿನಕಾಯಿ ಚಿಪ್ಪು ನೆಲದ ಮೇಲೆ ಇತ್ತು. ಈ ದ್ರವವನ್ನು ಒಂದು ವನಸ್ಪತಿಯ ರಸವನ್ನು ಅರ್ಮೋನರ್ ಅಥವಾ ದೀಪದ ಕಾಯಿಗಳನ್ನು ಸುಟ್ಟು ಮಾಡಿದ ಬೂದಿಯಲ್ಲಿ ಮಿಶ್ರಣ ಮಾಡಿ ಸಿದ್ಧಪಡಿಸಲಾಗುತ್ತದೆ.

ಆ ಕಾಡುಮನುಷ್ಯನ ಹತ್ತಿರ ಒಂದು ಕೊಳೆಯಾದ ಟಾಪಾ ಬಟ್ಟೆಯ ತುಂಡಿನ ಮೇಲೆ ವಿಚಿತ್ರವಾದ ಕಪ್ಪಾಗಿ ಕಾಣುತ್ತಿದ್ದ, ಮೊಳ ಮರಗಳಿಂದ ಮಾಡಿದ್ದ ಸಣ್ಣ ಸಣ್ಣ ಸಲಕರಣಗೆಗಳು ಹರಡಿದ್ದವು. ಅವುಗಳಲ್ಲಿ ಕೆಲವಕ್ಕೆ ಒಂದೇ ಒಂದು ಸೂಕ್ಷ್ಮವಾದ ಮೊನೆಯಿದ್ದು ಅವುಗಳನ್ನು ತೆಳ್ಳನೆಯ ಪೆನ್ಸಿಲ್ಲುಗಳಂತೆ ಹಚ್ಚೆಯ ಕೆಲಸದ ಕೊನೆಯ ಹಂತದಲ್ಲಿ ಉಪಯೋಗಿಸಲಾಗುತ್ತದೆ. ಅಥವಾ ದೇಹದ ಅತ್ಯಂತ ಸೂಕ್ಷ್ಮವಾದ ಸ್ಥಳಗಳಲ್ಲಿ ಕೆಲಸ ಮಾಡುವಾಗ ಈಗ ಈ ಕಲೆಗಾರ ಮಾಡುತ್ತಿದ್ದಂತೆ ಉಪಯೋಗಿಸುತ್ತಾರೆ.ಉಳಿದವುಗಳ ಕೊನೆಯಲ್ಲಿ ಸಾಲಾಗಿ ಗರಗಸದಂತೆ ಮೊನೆಗಳು, ಇವುಗಳನ್ನು ಕಲೆಯ ಕೆಲಸಗಳಿಗೆ ಉಪಯೋಗಿಸ ಲಾಗುತ್ತದೆ. ಮುಖ್ಯವಾಗಿ ನೇರವಾದ ಗುರುತುಗಳನ್ನು ಕೊಚ್ಚುವಾಗ ಕೆಲವು ಸಲಕರಣೆಗಳ ತುದಿಯ ಮೊನೆಯಲ್ಲಿ ಕೆಲವು ಸಣ್ಣ ಆಕಾರಗಳು ಇದ್ದವು. ಇವುಗಳನ್ನು ಮೈಮೇಲೆ ಇಟ್ಟು, ಸುತ್ತಿಗೆಯಿಂದ ಒಂದು ಸಲ ಕುಟ್ಟಿದ್ರೆ ಆ ಆಕೃತಿಗಳು ಅಲ್ಲಿ ಅಳಿಸಲಾರದೆ ಅಚ್ಚಾಗುತ್ತವೆ. ಆ ಮುದಕ ಎಷ್ಟೋ ಕಷ್ಟಪಟ್ಟು ನೋವನ್ನು ಸಹಿಸಿಕೊಳ್ಳುತ್ತಿದ್ದರೂ ಆತನ ಮುಖ ವಿಕಾರದ ಮೂಲಕ ಆತನ ಆತ್ಮದ ಕಿಡಿಗಳ ಬಾಗಿಲುಗಳು ಎಷ್ಟು ಸಂವೇದಶೀಲ ಎಂಬುದು ತಿಳಿಯುತ್ತಿತ್ತು. ಆದರೆ ಆ ಕಲೆಗಾರ ಸೇವೆಯ ಡಾಕ್ಟರನಂತೆ ತನ್ನ ಕೆಲಸವನ್ನು ಒಂದಿಷ್ಟೂ ಕರುಣೆಯಿಲ್ಲದೆ ಮುಂದುವರಿಸಿಕೊಂಡು ಹೋಗುತ್ತಿದ್ದ. ಕೆಲಸ ಮಾಡುತ್ತ ಏನೋ ಹಾಡಿಕೊಳ್ಳುತ್ತಿದ್ದ: ಹಾಡುತ್ತ ಮರಕುಟ್ಟಿಗನಂತೆ ಕುಟ್ಟುತ್ತಲೇ ಇದ್ದ. ಇದು ಒಂದು ರೀತಿ ಉಬ್ಬು ಚರ್ಮದ ಹಚ್ಚೆಯನ್ನಬಹುದು ಆಫ್ರಿಕಾ ದೇಶದ ಹಲವು ಜನಾಂಗಗಳಲ್ಲಿ ವೀರರಾದವರು ಮಾತ್ರ ಈ ಹಚ್ಚೆ ಹಾಕಿಸಿಕೊಳ್ಳುತ್ತಿದ್ದರು. ಯುದ್ಧಕ್ಕೆ ಹೊರಡುವಾಗ ಮುಖವನ್ನು ಹಚ್ಚೆಯಿಂದ ತುಂಬಿಸಿಕೊಂಡು ನೋಡಲು ಭಯಂಕರವಾಗಿ ಕಾಣಿಸಿಕೊಳ್ಳುವುದೇ ಇಲ್ಲಿನ ಉದ್ದೇಶವಾಗಿದ್ದಿತು ಎಂಬ ಮಾತನ್ನು ಇಲ್ಲಿ ಗಮನಿಸಬೇಕು. ಈ ಮೇಲಿನ ವಿವರಗಳು ಉಬ್ಬುಚರ್ಮದ ಹಚ್ಚೆಯ ವಿಧಾನವನ್ನು ಕುರಿತವುಗಳಾಗಿವೆ.

ಹಚ್ಚೆ ಹಾಕಿಸಿಕೊಳ್ಳುವಾಗ ಮೈ ನೋವಾಗುವುದು ತಪ್ಪುವಂತಿಲ್ಲ. ಚೂಪಾದ ಆಯುಧದಿಂದ ತೊಡಕಾದ ವಿನ್ಯಾಸಗಳನ್ನು ಮೈಮೇಲೆಲ್ಲ ಕೊರೆಯಿಸಿಕೊಳ್ಳುವುದು ಆಫ್ರಿಕಾ ದೇಶ ನುಡು ಜನರಲ್ಲಿ ವಿಶೇಷವಾಗಿ ವಾಡಿಕೆಯಲ್ಲಿದೆ. ಮಾವೋರಿ ಜನರು ಯುದ್ಧ ಸನ್ನದ್ಧರಾದಾಗ ಹಚ್ಚೆಗಳಿಂದ ವಿಲಕ್ಷಣವಾಗಿ ಕಾಣುತ್ತಿದ್ದರು. ಹಚ್ಚೆ ಹೆಂಗಸರಿಗೆ ಆಕರ್ಷಕ, ಗಂಡಸರಿಗೆ ಭಯಾನಕ ಎನ್ನುವ ಭಾವನೆಯಿದ್ದಂತೆ ತೋರುತ್ತದೆ.

ಈ ರೀತಿ ಉಬ್ಬು ಚರ್ಮದ ಹಚ್ಚೆ ಸೀಮಿತ ಉದ್ದೇಶಗಳ ಚೌಕಟ್ಟಿನಲ್ಲಿ

ಹೆಚ್ಚಾಗಿ ಪುರುಷರಿಗೆ ಮೀಸಲಾದ ಕಲೆಯಾಗಿದ್ದಿತು. ಇದು ಆದಿವಾಸಿ ಬುಡಕಟ್ಟಿನ ಕೆಲವು ಜನಾಂಗಗಳಲ್ಲಿ ಮಾತ್ರ ಉಳಿದುಕೊಂಡು ಬಂದಿರುವಂತಿದೆ. ಈಗ ಈ ರೀತಿಯ ಹಚ್ಚೆ ಸಾಮಾನ್ಯವಾಗಿ ಬೇರೆ ಕಡೆ ಕಾಣಬರುತ್ತಿಲ್ಲ.

ಮೇಲೆ ಹೇಳಿದ ಹಚ್ಚೆಯ ಈ ಎರಡೂ ವಿಧಾನಗಳಲ್ಲಿ ಉಬ್ಬು ಚರ್ಮದ ಹಚ್ಚೆ ಪ್ರಾಚೀನ ಕರ್ನಾಟಕದಲ್ಲಿದ್ದುದರ ಉಲ್ಲೇಖ ಸದ್ಯ ಉಪಲಬ್ದವಿರುವುದಿಲ್ಲ. ಆದರೆ ಸಾಮಾನ್ಯ ಹಚ್ಚೆ ಹೊಯ್ಯುವ ವಿಧಾನ ಮಾತ್ರ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕಗಳಲ್ಲಿ ಈಗಲೂ ಜೀವಂತವಾಗಿ ಉಳಿದುಕೊಂಡಿದೆ.

೨. **ಆಧುನಿಕ ವಿಧಾನ**: ಆಧುನಿಕತೆಯ ಪ್ರಭಾವದಿಂದ ಹಚ್ಚೆ ಹಾಕುವ ವಿಧಾನಗಳಲ್ಲಿ ಬದಲಾವಣೆ ಕಾಣಿಸಿಕೊಂಡಿತು. ಹಚ್ಚೆ ಹಾಕುವ ಸೂಜಿಗೆ ಬದಲಾಗಿ ಸ್ವಯಂಚಾಲಿತ ವಿದ್ಯುತ್ ಯಂತ್ರದಬಳಕೆ ರೂಢಿಯಲ್ಲಿ ಬಂದಿತು.

ಇಂಗ್ಲೆಂಡಿನ ಕೆಲವು ಬಂದರುಗಳಲ್ಲಿ ಹಚ್ಚೆ ಹಾಕುವ ಆಧುನಿಕ ಮಾದರಿಯ ವಿವಿಧ ಅಲಂಕಾರ ಗೃಹಗಳಿವೆ. ಅಮೇರಿಕೆಯಲ್ಲಿ ಪ್ರಪ್ರಥಮ ವಿದ್ಯುತ್ ಚಾಲಿತ ಹಚ್ಚೆಯ ಯಂತ್ರ ೧೮೯೧ರಲ್ಲಿ ಸ್ಥಾಪನೆಗೊಂಡಿತು. ಅಲ್ಲಿ ನೂರಕ್ಕಿಂತ ಅಧಿಕ ಸಂಖ್ಯೆಯ ಹೆಜ್ಜೆಯ ಅಲಂಕಾರ ಗೃಹಗಳಿವೆ. ಮುಂದುವರಿದ ಜನಾಂಗ ವರ್ಣರಂಜಿತ ಯಂತ್ರಗಳೆದುರು ಸಾಲುಗಟ್ಟಿ ಕುಳಿತ ತರುಣಿಯರು ತಮ್ಮ ತುಂಬುಮೊಲೆ, ಯೋನಿಗಳ ಮೇಲೆ ಹಚ್ಚೆ ಬರೆಯಿಸಿಕೊಳ್ಳುವುದು ಒಂದು ಫ್ಯಾಷನ್ ಆಗಿದೆ.

ಇಲ್ಲಿ ವಿದ್ಯುತ್ ಚಾಲಿತ ಸೂಜಿಗಳು ಕೋಮಲ ಮೊಲೆಗಳನ್ನು ಚಿತ್ರಾಕೃತಿಯಲ್ಲಿ ಚುಚ್ಚುತ್ತ ಹೋದಂತೆ, ಇನ್ನೊಂದು ಸೂಜಿ ಬಣ್ಣವನ್ನು ಲೇಪಿಸುತ್ತದೆ. ಅದರ ಮೇಲೆ ಮಲಾಮಿನ ಲೇಪನ ಮಾಡುತ್ತಾರೆ. ಲಂಡನ್, ನ್ಯೂಯಾರ್ಕ, ಬರ್ಲಿನ್‌ಗಳಲ್ಲಿ ಇಂಥ ಚರ್ಮ ಚಿತ್ರಕಲಾವಿದರಿಗೆ ಬಹಳೇ ಬೇಡಿಕೆಯಿದೆ. ಮೊಲೆ ಅಥವಾ ಯೋನಿಗಳ ಮೇಲೆ ಚಿತ್ರ ಬರೆದರೆ ೨೫ ರಿಂದ ೧೫೦ ರೂಪಾಯಿ ಸಂಭಾವನೆ ಪಡೆಯುತ್ತಾರೆ.

ಗುಪ್ತಾಂಗಗಳ ಮೇಲೆ ಹಚ್ಚೆ ಬರೆಯಿಸಿಕೊಳ್ಳುವುದರಲ್ಲಿ ಪಾಶ್ಚಾತ್ಯ ಯುವಕರಿಗೆ ಹೆಚ್ಚು ಒಲವು ಕಾಣಿಸುತ್ತದೆ. ಅದು ಲೈಂಗಿಕ ಹತಾಶೆ, ಅಸಾಮರ್ಥ್ಯ, ಶೀಘ್ರಸ್ಖಲನಗಳ ನಿವಾರಕವೆಂಬ ನಂಬಿಕೆಯೂ ಇದೆ.

ಆಧುನಿಕ ಉಪಕರಣದಿಂದ ಭಾರತದಲ್ಲಿಯೂ ಕಾಲುದಾರಿಯ ಮೇಲೆ ಕುಳಿತುಕೊಂಡು ಹಚ್ಚೆ ಹಾಕುವ ವಿಧಾನವನ್ನು ಕಾಣುತ್ತೇವೆ. ಭಾರತದ ದೊಡ್ಡ ದೊಡ್ಡ ಪಟ್ಟಣಗಳಾದ ಮುಂಬಯಿ, ದಿಲ್ಲಿ, ಮದ್ರಾಸ, ಕಲಕತ್ತ, ಪುಣೆಗಳಲ್ಲಿ ಆಧುನಿಕ ಯಂತ್ರದಿಂದ ಹಚ್ಚೆ ಹಾಕುವ ಸಲೂನಗಳಿವೆ.

ಹುಬ್ಬಳ್ಳಿಯಲ್ಲಿ ಟಿ.ಎ. ವಾಜ್ ಅವರ ಹತ್ತಿರ ತಾವೇ ತಯಾರಿಸಿದ ಹಚ್ಚೆ ಉಪಕರಣವಿದೆ. ಪಟ್ಟಿಗೆ ವಾಯರಿನಿಂದ ಚಿಕ್ಕದಾದ ಮತ್ತೊಂದು ಪಟ್ಟಿಗೆಗೆ ವಾಯರ್ ಜೋಡಿಸಲಾಗಿದೆ. ಇದರಿಂದ ಹಚ್ಚೆ ಚುಚ್ಚುವ ಸೂಜಿಗೆ ಕರೆಂಟ್ ಬರುವಂತೆ ವ್ಯವಸ್ಥೆ ಮಾಡಲಾಗಿದೆ. ಆಗಾಗ ಮುಂದಿನ ಸಣ್ಣ ಸೂಜಿಯಿಂದ ಚಿಕ್ಕ ಬಾಟಲಿಯಲ್ಲಿ ಮೊದಲೇ ಸಂಗ್ರಹಿಸಿದ ಬಣ್ಣದಲ್ಲಿ ಸೂಜಿಯನ್ನು ಅದ್ದಿ ಚಿತ್ರ ಬಿಡಿಸಲಾಗುತ್ತದೆ. ಈ ಆಧುನಿಕ ವಿಧಾನದಿಂದ ಸೂಜಿ ಚರ್ಮದಲ್ಲಿ ಅಷ್ಟು ಆಳವಾಗಿ ಹೋಗುವುದಿಲ್ಲ. ರಕ್ತವೂ ಬಹಳ ಬರುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ನೋವು ಬರುವುದಿಲ್ಲ. ಜನರಿಗೆ ಪ್ರಿಯವಾಗುವ ಹಚ್ಚೆಯ ಚಿತ್ರಗಳನ್ನು ಈತ ಹಾಕುತ್ತಾನೆ. ಇದಕ್ಕಾಗಿ ೫ ರೂಪಾಯಿಯಿಂದ ೧೫೦ ರೂಪಾಯಿಯ ವರೆಗೆ ಸಂಭಾವನೆ ಪಡೆಯುತ್ತಾನೆ. ಆದರೂ ಹಚ್ಚೆ ಹಾಕುವ ನಕ್ಷೆಗಳಿಗೆ ಬೇರೆ ಬೇರೆ ದರಗಳಿವೆ. ಈತನು ಪಾರಂಪರಿಕ ಚಿತ್ರಗಳೊಂದಿಗೆ ಡ್ರಾಗನ್ ಮಾದರಿ ಚಿತ್ರವಿನ್ಯಾಸ ಹಾಗೂ ಚಲನಚಿತ್ರನಟನಟಿಯರ, ಆಟಗಾರರ ಚಿತ್ರಗಳ ಹಚ್ಚೆ ಹಾಕುತ್ತಾನೆ.

ಕರ್ನಾಟಕದುದ್ದಕ್ಕೂ ಹೆಂಗಸರೇ ಹಚ್ಚೆ ಹಾಕುತ್ತಿದ್ದರೂ ವಿಜಾಪೂರ, ಕಲಬುರ್ಗಿ, ಹುಬ್ಬಳ್ಳಿ, ಕಾರವಾರ ಜಿಲ್ಲೆಯ ಗೋಕರ್ಣ ಜಾತ್ರೆ, ಬೆಳಗಾವಿ ಬಾಗಲಕೋಟ ಜಿಲ್ಲೆಯ ಬನಶಂಕರಿ ಜಾತ್ರೆ ಮುಂತಾದ ಭಾಗಗಳಲ್ಲಿ ಗಂಡಸರೂ ಹಚ್ಚೆ ಹಾಕುವುದು ಕಂಡುಬರುತ್ತದೆ. ಗಂಡಸರು ಹಾಕುವ ಹಚ್ಚೆಯ ವಿಧಾನ ಹೆಂಗಸರು ಹಾಕುವ ವಿಧಾನದಂತೆಯೇ ಇದ್ದು, ಇವರು ಹೆಚ್ಚಾಗಿ ಗಂಡಸರಿಗೆ ಹಚ್ಚೆ ಹೊಯ್ಯುತ್ತಾರೆ. ಹೆಂಗಸರಿಗೆ ಕೆಲವರು ಜೊತೆಗೆ ಕರೆದುಕೊಂಡು ಬಂದ ತಮ್ಮ ಹೆಂಗಸರಿಂದ ಹಚ್ಚೆ ಹಾಕಿಸುತ್ತಾರೆ. ಕೆಲವು ಸಲ ಮುದುಕರೇ ಎಲ್ಲ ವಯಸ್ಸಿನ ಸ್ತ್ರೀಯರು, ಚಿಕ್ಕಮಕ್ಕಳು, ಗಂಡಸರಿಗೆಲ್ಲ ಹಚ್ಚೆಹಾಕುವುದನ್ನು ಕಾಣುತ್ತೇವೆ.

ಪುರುಷರು ಮಾತ್ರ ಪರಂಪರಾಗತ ಚಿತ್ರವಿನ್ಯಾಸಗಳ ಜೊತೆಗೆ ಆಧುನಿಕ ಚಿತ್ರ ವಿನ್ಯಾಸಗಳನ್ನೂ ಹಚ್ಚೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಆದರೆ ಸ್ತ್ರೀಯರು ಹೊಯ್ಯುವ ಹಚ್ಚೆಯಲ್ಲಿ ಯಾವ ಬದಲಾವಣೆಗಳೂ ಆಗಿರುವುದಿಲ್ಲ. ಗಂಡಸರು

ಹೊಯ್ಯುವ ಹಚ್ಚೆಯಲ್ಲಿ ಹಾಡು ಹೇಳುವುದಿಲ್ಲ. ಬಹಳಂದರೆ ಹಾಸ್ಯ ಚಟಾಕಿ ಹೇಳುತ್ತಾರೆ.

## ಹಚ್ಚೆ ಹಾಕಿಸಿಕೊಂಡ ಮೇಲೆ ಅನುಸರಿಸುವ ನಿಯಮಗಳು:

ಪ್ರಾಚೀನ ಕಾಲದಿಂದಲೂ ಹಚ್ಚೆ ಹಾಕುತ್ತ ಬಂದ ಹಚ್ಚೆಯವರು ಹಚ್ಚೆ ಹಾಕಿಸಿಕೊಂಡರೆ ಹಲವು ನಿಯಮಗಳನ್ನು ಹೇಳುತ್ತಾರೆ. ರಾತ್ರಿ ಮಲಗುವಾಗ ಹಚ್ಚೆ ಹಾಕಿದ ಭಾಗವು ಕೆಳಮುಖವಾಗಿ ಇರುವಂತೆ ನೋಡಿಕೊಳ್ಳಬೇಕು. ಇದರಿಂದ ಮೇಲೆ ಹಚ್ಚಿದ ಕಪ್ಪು ಚುಚ್ಚಿದ ಭಾಗದಲ್ಲಿ ಚರಕ್ಕೆ ಇಳಿದದ್ದು ರಕ್ತದೊಂದಿಗೆ ಮಿಶ್ರವಾಗುತ್ತದೆ. ಹೀಗೆ ಮಾಡುವುದರಿಂದ ಈ ಕಪ್ಪು ಬಣ್ಣ ಚರ್ಮದ ಮೇಲ್ಪದರಿನಲ್ಲಿ ಬಂದು ನಿಲ್ಲುತ್ತದೆ. ಚಿತ್ರ ಚೆನ್ನಾಗಿ ಕಾಣಿಸಿಕೊಳ್ಳಲು ಇದು ಸಾಧ್ಯವಾಗುತ್ತದೆ.

ಹಚ್ಚೆ ಹಾಕಿಸಿಕೊಂಡವರು ಕುಟ್ಟುವ, ಬೀಸುವ, ನೀರು ಸೇದುವ ಮೊದಲಾದ ಕೆಲಸದಲ್ಲಿ ತೊಡಗಿಕೊಂಡಿರುಬೇಕು. ಇಲ್ಲದಿದ್ದರೆ ಹಚ್ಚೆ ಹಾಕಿದ ಭಾಗದಲ್ಲಿ ನರಗಳು ಗಂಟು ಕಟ್ಟುತ್ತವೆ.

ಕೆಲವುಸಲ ದೊಡ್ಡ ಹಚ್ಚೆ ಹಾಕಿಸಿಕೊಂಡಾಗ ದೃಷ್ಟಿ ತೆಗೆಯಲು ಹೇಳುತ್ತಾರೆ ಉಪ್ಪು, ಮೆಣಸಿನಕಾಯಿ, ಹಸಿಹಿಟ್ಟು, ಕೇರ, ಲಿಂಬೆಹಣ್ಣು ಮುಂತಾದವುಗಳನ್ನು ಹಚ್ಚೆ ದೊಡ್ಡ ಹಚ್ಚೆಗೆ ಮಾತ್ರ ಇದನ್ನು ಮಾಡುತ್ತಾರೆ. ಇನ್ನು ಹಚ್ಚೆ ಹಾಕಿಸಿಕೊಂಡವರಿಗೆ ಹೇಳುವ ಪಥ್ಯವನ್ನು ಹೀಗೆ ಸಂಗ್ರಹಿಸಿ ಹೇಳಬಹುದು:

೧. ಗಂಡಂದಿರು ಏಳುದಿವಸದವರೆಗೆ ಹಾಸಿಗೆ ಪಥ್ಯ ಮಾಡಬೇಕು.

೨. ಚೊಬ್ರಿ ಎಣ್ಣೆ, ಅರಷಿಣ ಪುಡಿಯನ್ನು ಹಚ್ಚೆಯ ಮೇಲೆ ಹಚ್ಚುತ್ತಿರಬೇಕು.

೩. ಬದನೆಕಾಯಿ, ಸೇಂಗಾ, ಪುಠಾಣಿ, ಕಡಲೇಬೇಳೆ ಊಟ ಮಾಡಬಾರದು.

೪. ಎಣ್ಣೆಯಲ್ಲಿ ಕರಿದ ಪದಾರ್ಥಗಳನ್ನು ಕನಿಷ್ಠ ಏಳು ದಿವಸಗಳ ವರೆಗಾದರೂ ತಿನ್ನಬಾರದು.

೫. ಗಾಯಕ್ಕೆ ನೀರು ಹಚ್ಚಬಾರದು.

೬. ಹಚ್ಚೆ ವಾಸಿಯಾಗುವವರೆಗೆ ಶನಿವಾರ ದಿನ ಹನುಮಂತ ದೇವರಿಗೆ ದೀಪ ಹಾಕಿ ಬರಬೇಕು.

## ಹಚ್ಚೆ ಹಾಕುವ ಜನಾಂಗಗಳು:

ಕರ್ನಾಟಕದಲ್ಲಿ ಹಚ್ಚೆ ಹಾಕುವ ಜನಾಂಗಗಳು ಪ್ರಾದೇಶಿಕವಾಗಿ ಬೇರೆ ಬೇರೆಯಾಗಿರುತ್ತವೆ. ಡಾ. ನಂ.ತಪಸ್ವೀಕುಮಾರ ಅವರು ದಕ್ಷಿಣ ಕರ್ನಾಟಕದಲ್ಲಿ ಕೊರವಂಜಿ, ಕೊರಮರು, ಕುಕೊರಮರು, ಸಿಳ್ಳೇಕ್ಯಾತರು, ಮೇದರು, ಜೋಗಿಗಳು, ಬುರುಡೇ ಬೆಸ್ತರು, ಚಿತ್ರಮರಾಠಿ ಜನ ಹಚ್ಚೆಹಾಕುವುದಾಗಿ ಹೇಳುತ್ತಾರೆ. ಡಾ. ಎಚ್.ಎಂ. ಮಹೇಶ್ವರಯ್ಯ ಅವರು ಕೊರಮರು, ಕುಕ್ಕೆ ಕೊರಮರು,ಕರೆಗಾರರು, ಬೆಸ್ತರು, ಗುಂಡೆ ಬೆಸ್ತರು, ಕೊರವಂಜಿಗಳು, ಬ್ಯಾಡರು, ಒಡ್ಡರು, ಗೊಂಬೆಯಾಟದ ಮರಾಠಿಗರು, ಜಾತಿಗಾರರು, ದೊಂಬರು ಹಚ್ಚೆ ಹಾಕುವುದನ್ನು ಉಲ್ಲೇಖಿಸುತ್ತಾರೆ.

ಈ ಲೇಖಕರು ಗಮನಿಸಿದ ಕೊರವಂಜಿ, ಕುಕ್ಕೇಕೊರಮರು, ಕೊರವರು, ಕುಂಚಿ ಕೊರವೆಯರು, ಒಂದೇ ಜಾತಿಯವರು, ಹಾಗೆಯೇ ಕಿಳ್ಳಿಕೇತರು, ಸಿಳ್ಳಿಕೇತರು, ಚಿತ್ರ ಮರಾಠಿ ಜನ, ಬುರಡೇಬೆಸ್ತರು, ಗೊಂಬೆಯಾಟದ ಮರಾಠಿಗರು, ಕರಿಗಾರರು ಇವರೆಲ್ಲರೂ ಕಿಳ್ಳಿಕ್ಯಾತ ಜನಾಂಗದವರೇ ಆಗಿದ್ದು, ಬೇರೆ ಬೇರೆ ಕಡೆಗೆ ನೆಲೆಸಿ ಆಯಾ ವೃತ್ತಿ ಮಾಡುತ್ತಿದ್ದರಿಂದ ಅವರಿಗೆ ಬೇರೆ ಬೇರೆ ಹೆಸರು ಬಂದಿವೆ. ಒಟ್ಟಿನಲ್ಲಿ ಹಚ್ಚೆ ಹಾಕುವವರನ್ನು ಇಲ್ಲಿ ಹೀಗೆ ಪಟ್ಟಿ ಮಾಡಬಹುದು:

೧. ಕಿಳ್ಳಿಕ್ಯಾತರು (ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿ)

೨. ಕೊರವರು (ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿ)

೩. ಜೋಗೇರು (ವಿಜಾಪೂರ, ಗುಲ್ಬರ್ಗಾ, ರಾಯಚೂರ, ಬೀದರ)

೪. ಮೇದಾರರು (ವಿಜಾಪೂರ, ಗುಲ್ಬರ್ಗಾ, ರಾಯಚೂರ, ಬೀದರ)

೫. ಒಡ್ಡರು (ವಿಜಾಪೂರ, ಗುಲ್ಬರ್ಗಾ, ರಾಯಚೂರ, ಬೀದರ)

೬. ಹೊಲೆಯರು (ವಿಜಾಪೂರ, ಗುಲ್ಬರ್ಗಾ , ರಾಯಚೂರ, ಬೀದರ)

೭. ಮಾದರು (ವಿಜಾಪೂರ, ಗುಲ್ಬರ್ಗಾ, ರಾಯಚೂರ, ಬೀದರ)

೮. ಗೊಂದಲಿಗರು (ಬೆಳಗಾವಿ, ವಿಜಾಪೂರ)

ಇವರಲ್ಲದೆ ಬ್ಯಾಡರು, ಕುರುಬರು, ದಕ್ಷಿಣ ಕರ್ನಾಟಕದಲ್ಲಿ ಹಚ್ಚೆ ಹಾಕುತ್ತಿರುವುದು ತಿಳಿದುಬರುತ್ತದೆ. ಉತ್ತರ ಕರ್ನಾಟಕದಲ್ಲಿ ಮೇಲೆ ಹೇಳಿದ

ಜನಾಂಗದವರು ಹಚ್ಚೆ ಹಾಕುವ ವೃತ್ತಿಯನ್ನು ಮಾಡುತ್ತಾರೆ.

## ಹಚ್ಚೆ ಹಾಕುವವರು ಪಡೆವ್ 'ಚಾಜ'

ಹಚ್ಚೆ ಹಾಕಿಸಿಕೊಂಡವರು ತಮ್ಮ ಅಂತಸ್ತಿಗೆ ತಕ್ಕಂತೆ ಮೊರದ ತುಂಬ ಧಾನ್ಯ, ಫಲ ತಾಂಬೂಲಗಳಿಂದ ಉಡಿ ತುಂಬುತ್ತಾರೆ. ಇದನ್ನೇ ಹಚ್ಚೆ ಹಾಕುವವರು ತಮ್ಮ 'ಚಾಜ' ಎಂದು ಹೇಳುವರು. ಬಹುಶಃ ಇಂಗ್ಲಿಷಿನ ಚಾರ್ಜ ಗ್ರಾಮೀಣರ ಬಾಯಲ್ಲಿ 'ಚಾಜ' ಎಂದಾಗಿರಬೇಕು. ಹೀಗೆ ಸಂಭಾವನೆ ಪಡೆದ ಮೇಲೆ ಅವರಿಗೆ ಒಳ್ಳೆಯದಾಗಲೆಂದು ಹರಸುತ್ತಾರೆ. ಇವರೊಂದಿಗೆ ಕೆಲವರು ರಾಶಿಯ ಕಣಕ್ಕೆ ಹೋಗಿಯೂ ಧಾನ್ಯ ಪಡೆಯುವುದುಂಟು. ಇದನ್ನು ಪಡೆದ ಹಚ್ಚೆಯವರು ರಾಸಿ ಕಣ ಹತ್ತರಷ್ಟಾಗಲಿ, ಅವರ ಮನೆ ಬೆಳೆಯಲಿ, ಗೌಡರ ಕುಲ ಮುಂದುವರಿಯಲಿ ಎಂದು ಹರಕೆ ಹೇಳುತ್ತಾರೆ.

ಈ ಹರಕೆಗಳ ಹಿಂದೆ ಹಚ್ಚೆ ಹಾಕಿಸಿಕೊಂಡವರ ವಂಶ ಬೆಳೆಯಲಿ, ತಮ್ಮ ವಂಶದವರೇ ಇವರಿಗೆ ಹಚ್ಚೆ ಹೊಯ್ಯಲು ಬರುವಂತಾಗಲಿ ಎಂಬ ಆಶಯ ಅಡಗಿರುವುದನ್ನು ಕಾಣುತ್ತೇವೆ. ಆರಂಭದಲ್ಲಿ ಹಣೆಗೆ ಚುಚ್ಚುವ ಹಚ್ಚೆಗಾಗಿ ಉಡಿ ತುಂಬಿ ಮೇಲೆ ಒಂದು ರೂಪಾಯಿಯನ್ನೂ, ಐದು ವರ್ಷದ ಮಗುವಿನ ಹಚ್ಚಗೆ ಪೀಡೆ ತೊಲಗಲಿ ಎಂದು ಆ ಮಗು ಹಾಕಿಕೊಂಡಿದ್ದ ಬಟ್ಟೆಯನ್ನೂ (ಕಾಣಿಕೆ) ಚಾಜವಾಗಿ ಕೊಡುತ್ತಿದ್ದರು. ಹಚ್ಚೆಯವರಿಗೆ ಕೊಡುವ ಈ ಸಂಭಾವನೆಯಲ್ಲಿ ಏಕರೂಪತೆಯಿಲ್ಲ. ಇದರಲ್ಲಿ ಪ್ರಾದೇಶಿಕ ವ್ಯತ್ಯಾಸಗಳಿದೆ. ಇವುಗಳನ್ನು ಹೀಗೆ ವಿವರಿಸಬಹುದಾಗಿದೆ:

೧. ಎರಡು ನಾಲ್ಕು ಸೇರು ಅಕ್ಕಿ ಅಥವಾ ಎರಡು ಗಿದ್ದ ಭತ್ತ ಕೊಡುತ್ತಾರೆ.

೨. ಹತ್ತು ಬಿಲ್ಲೆಗಳನ್ನು ಕೊಡುವುದುಂಟು.

೩. ಶಿವಮೊಗ್ಗಜಿಲ್ಲೆಯ ಕೊಡಕಣಿ ಗ್ರಾಮದ ಹುಣಸೀಕಟ್ಟೆ ಬಸಮ್ಮ ಒಂದು ಕುಬುಸದ ಕಣ, ಒಂದು ಸೇರ ಅಕ್ಕಿ ನುಚ್ಚು ಕೊಟ್ಟು ಹಚ್ಚೆ ಹಾಕಿಸಿಕೊಂಡಿದ್ದಾಳೆ.

೪. ಹಿರೇಶಕುನಗ್ರಾಮದ ಶಿಗ್ಗದ ಹುಚ್ಚಮ್ಮ ದೀಪಾವಳಿ ಹಬ್ಬದಲ್ಲಿ ಏಳು ಚಕ್ಕಲಿಕೊಟ್ಟು ಸಣ್ಣ ಗಿಂಡಿ ಹಚ್ಚೆ ಹಾಕಿಸಿಕೊಂಡಿರುವಳು

೫. ಹಳೆಯ ಸೀರೆಗಳನ್ನು ಕೊಡುವರು.

೬. ಐದು ಅಣೆ, ಒಂದು ರೊಟ್ಟಿ, ಮೂರು ಮೆಣಸಿಕಾಯಿ ಕೊಡುವರು.

೭. ನಾಲ್ಕು ಪಾವಲಿಯಿಂದ ಒಂಬತ್ತು ಪಾವಲಿ ಹಣ ಕೊಡುವುದುಂಟು.

೮. ಧಾರವಾಡ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಹಚ್ಚೆ ಹಾಕಿಸಿಕೊಂಡವರು ಬಾಳೆಯಹಣ್ಣು, ಅಡಿಕೆ, ಊದಿನಕಡ್ಡಿ ಕೊಡುತ್ತಾರೆ.

೯. ವಿಜಾಪೂರ ಗುಲ್ಬರ್ಗಾ ಪ್ರದೇಶಗಳಲ್ಲಿ ಕಟಬ, ಒಡ್ಡ ಜನಾಂಗದವರು ವರ್ಷದುದ್ದಕ್ಕೂ ಆಗಾಗ ಮನೆಗೆ ಬಂದು ಮಕ್ಕಳಿಗೆ ಹಚ್ಚೆ ಹಾಕುತ್ತಾರೆ. ಆಗ ಹಚ್ಚೆ ಹಾಕಿದುದಕ್ಕೆ ಅಷ್ಟಾಗಿ ಸಂಭಾವನೆ ಪಡೆಯುವುದಿಲ್ಲ. ಒಂದು ರೊಟ್ಟಿ, ಸ್ವಲ್ಪ ಅಕ್ಕಿ ಇಲ್ಲವೆ ಜೋಳವನ್ನು ಪಡೆದುಕೊಂಡಿರುತ್ತಾರೆ. ಮುಂದೆ ಹಬ್ಬ ಹುಣ್ಣಿವೆ ಸಂದರ್ಭದಲ್ಲಿ ನಾಗರಪಂಚಮಿ ದೀಪಾವಳಿ ಮುಂತಾದ ದೊಡ್ಡ ಹಬ್ಬಗಳು ಬಂದಾಗ ಇಲ್ಲವೆ ಒಕ್ಕಲಿಗರು ಹೊಲದಲ್ಲಿ ರಾಸಿ ಮಾಡುವಾಗ, ಮದುವೆಯ ಸಂದರ್ಭದಲ್ಲಿ ಇವರು ತಪ್ಪದೆ ಆಗಮಿಸುವರು.

ಹಚ್ಚೆ ಹಾಕುವವರು ತಮ್ಮ ಸಂಬಂಧಿಕರಿಗೆ ಹಚ್ಚೆ ಹೊಯ್ದಿದರೆ ಹೆಚ್ಚಿನ 'ಚಾಜ' ಪಡೆಯುತ್ತಾರೆ. ರೂಢಿಯಿಂದ ನಡೆದುಕೊಂಡು ಬಂದ ಈ ಪದ್ಧತಿಯಲ್ಲಿಯೂ ಪ್ರಾದೇಶಿಕ ಭಿನ್ನತೆಗಳಿರುತ್ತವೆ. ಶಿವಮೊಗ್ಗ ಜಿಲ್ಲೆಯ ಬುಲ್ಲೆ ಬೆಸ್ತರ ಹೆಣ್ಣುಮಕ್ಕಳಿಗೆ ಅವರ ಸೋದರತ್ತೆಯರೇ ಹಚ್ಚೆ ಹಾಕಬೇಕು. ಹೀಗೆ ಹಾಕಿದವರಿಗೆ ಹಾಲುಣ್ಣಲು ಒಂದು ಎಮ್ಮೆ ಅವರು ಬಯಸಿದಂತಹ ಸೀರೆ, ಗಂಗಾಳ, ಚೆಂಬನ್ನು ಕೊಡಬೇಕು. ಪ್ರಾರಂಭದಲ್ಲಿ ಹಣೆಗೆ ಹಚ್ಚೆ ಚುಚ್ಚೆ ನಂತರ ಇತರ ಭಾಗಗಳಿಗೆ ಚುಚ್ಚುತ್ತಾರೆ. ಹಚ್ಚೆ ಹಾಕಿದ ನಂತರ ಆಕಳ ಸೆಗಣಿಯಿಂದ ಬೆನಕನನ್ನು ಮಾಡಿ ಅದಕ್ಕೆ ಒಂದು ಟೆಂಗಿನಕಾಯಿ ಒಡೆದು ದೃಷ್ಟಿ ತಾಗದಿರಲೆಂದು ಬೆಂಕಿಗೆ ಹಾಕುತ್ತಾರೆ. ಹಚ್ಚೆ ಹಾಕುವವರು ಹಚ್ಚೆ ಹಾಕಿಸಿಕೊಳ್ಳುವವರ ಅಭಿವೃದ್ಧಿಗೆ ಮಂತ್ರವನ್ನು ಉಚ್ಚರಿಸಿ ಇಲ್ಲವೆ ಗೋಪಿಕಾಗೀತ ಅಥವಾ ಬೇರಾವುದಾದರೂ ಗೀತೆಗಳನ್ನು ಹಾಡಿ ಹಚ್ಚೆ ಹಾಕಲು ಪ್ರಾರಂಭಿಸುತ್ತಾರೆ. ಇದು ಶಿವಮೊಗ್ಗ ಜಿಲ್ಲೆಯ ಬುಲ್ಲೆ ಬೆಸ್ತರಲ್ಲಿ ಪ್ರಚಲಿತದಲ್ಲಿದೆ.

ಗುಲ್ಬರ್ಗಾ, ಬೀದರ, ರಾಯಚೂರ ಭಾಗದಲ್ಲಿ ಹಚ್ಚೆ ಹಾಕಿಸಿಕೊಂಡ ಮನೆಯವರು ಹಚ್ಚೆ ಹಾಕುವವರಿಗೆ ಹೊಸ ಅರಿವೆ, ಹಬ್ಬದೂಟ ಕೊಡುತ್ತಾರೆ. ವಿಜಾಪೂರ, ಬೆಳಗಾವಿ, ಧಾರವಾಡದ ಕಡೆಗೆ ಕಿಳ್ಳಿಕೇತರ ಜನಾಂಗದವರು ಹಚ್ಚೆ ಹಾಕುವ ಸಂಬಂಧಿಕರಿಗೆ ಜೋಳ ಇಲ್ಲವೆ ಯಾವುದಾದರೂ ಕಾಳುಗಳನ್ನು ಕೊಟ್ಟು ಉಡಿ ತುಂಬಿ ಆಯೇರಿ ಮಾಡಿ ಸಂಬಂಧಿಕರೆಲ್ಲರಿಗೂ ಊಟಹಾಕಿ ಕಳಿಸುತ್ತಾರೆ. ಬಡವರಿದ್ದರೆ ತಮ್ಮ ಶಕ್ಯಾನುಸಾರ ಕಾಣಿಕೆ ಕೊಡುತ್ತಾರೆ. ಹೀಗೆ ಹಚ್ಚೆ ಹಾಕುವವರು ಊರ ಜನರಿಂದಲೂ ತಮ್ಮ ಸಂಬಂಧಿಕರಿಂದಲೂ ಚಾಜ ಪಡೆಯುತ್ತಿದ್ದುದು

ಮೇಲಿನ ವಿವೇಚನೆಯಿಂದ ಗೊತ್ತಾಗುತ್ತದೆ.

## ಹಚ್ಚೆಯ ಹಾಡು:

ಹಚ್ಚೆ ಹಾಕುವಾಗ ಉಂಟಾಗುವ ನೋವನ್ನು ಉಪಶಮನ ಮಾಡುವ ಉದ್ದೇಶದಿಂದ ಹಚ್ಚೆ ಚುಚ್ಚುವ ಗತ್ತಿಗನುಗುಣವಾಗಿ ಹಾಡುಗಳನ್ನು ಹೇಳುತ್ತಾರೆ. ಇವುಗಳಲ್ಲಿ ಹಚ್ಚೆಯ ವರ್ಣನೆ, ಅದರ ಹಿರಿಮೆಯನ್ನು ಕುರಿತು ಹಾಡುಗಳಿದ್ದು ಇವು ಅತ್ಯಂತ ಚಿಕ್ಕವಾಗಿರುತ್ತವೆ. ಇನ್ನೂ ಕೆಲವು ದೀರ್ಘವಾದ ಹಾಡುಗಳಿದ್ದು ದೇವರ ಸ್ತುತಿ, ಗಂಡು ಹೆಣ್ಣಿನ ಬಾಂಧವ್ಯವನ್ನು ಕುರಿತಾಗಿರುತ್ತವೆ. ಹಚ್ಚೆ ಹಾಕುವಾಗ ಇಂಥವೇ ಹಾಡುಗಳನ್ನು ಹೇಳಬೇಕೆಂಬ ನಿಯಮವಿಲ್ಲ. ಸಾಮಾನ್ಯವಾಗಿ ಹೆಣ್ಣು ಮಕ್ಕಳು ತಾವು ಕಲಿತ ಹಾಡುಗಳನ್ನು ಹೇಳಬೇಕೆಂಬ ನಿಯಮವಿಲ್ಲ ಸಾಮಾನ್ಯವಾಗಿ

ಹೆಣ್ಣು ಮಕ್ಕಳು ತಾವು ಕಲಿತ ಹಾಡುಗಳನ್ನೇ ರಾಗಬದ್ಧವಾಗಿ, ಇನ್ನು ಕೆಲವು ಸಲ ಹಾಸ್ಯಭರಿತವಾಗಿ ಹೇಳುತ್ತ ಹಚ್ಚೆ ಚುಚ್ಚುವ ಕಾರ್ಯವನ್ನು ಮಾಡುತ್ತಾರೆ. ಹಚ್ಚೆಯವರು ಹೇಳುವ ಈ ಹಾಡುಗಳಿಗೆ ವಿಶಿಷ್ಟವಾದ ದಾಟಿಯಿದ್ದು ಇವುಗಳನ್ನು ಹಚ್ಚೆ ಚುಚ್ಚುವ ಗತ್ತಿಗನುಗುಣವಾಗಿ ಹಾಡುತ್ತಾರೆ. ಈ ಹಾಡುಗಳನ್ನು ಕೇಳಿಯೇ ಅನುಭವಿಸಬೇಕು. ಹಚ್ಚೆಯ ಹಾಡುಗಳ ಕುರಿತು ಸಾಹಿತ್ಯಕವಾದ ಅಧ್ಯಯನ ವಿಶೇಷವಾಗಿ ಆಗಬೇಕಾದ ಅವಶ್ಯಕತೆಯಿದೆ.

## ಹಚ್ಚೆಯ ಕುರಿತ ಒಗಟು:

ಹಚ್ಚೆಯ ಕುರಿತು ಒಗಟುಗಳೂ ಹುಟ್ಟಿಕೊಂಡಿವೆ. ಇಂಥ ಒಗಟುಗಳನ್ನು ಸಂಗ್ರಹಿಸಿ, ಹೀಗೆ ಹೇಳಬಹುದು:

೧. ಬಿತ್ತಿದ ಬೆಳೆ ಕಿತ್ತಲಾರ ಸುಣ್ಣದ ಗಡಗಿ ಸುತ್ತಲಾರ

- ಹಣಚಿಬೊಟ್ಟು

೨. ಕಣ್ಣಿಗೆ ಕಾಣತದ ಕೈಗೆ ಸಿಗಲ್ಲ

- ಹಚ್ಚೆ

೩. ಹಚ್ಚಿದ ಕುಳ್ಳ ಕಿತ್ತುದಿಲ್ಲ.

-ಹಚ್ಚೆ

೪.	ಅಕ್ಕನ ಕೈಗೆ ಪಚ್ಚೆ ಕಡಗ ಹಾಕುವವರುಂಟು
ತೆಗೆಯುವವರು ಇಲ್ಲ.

--ಹಚ್ಚೆ

೫.	ಅಣ್ಣಯ್ಯನ ತೋಟಕ್ಕೆ ಎಪ್ಪತ್ತೈದು ಬಿಗ
ಅತ್ತರೂ ಬರದು ಕಿತ್ತರೂ ಬರದು

- ಹಚ್ಚೆ

೬.	ಚಿಕ್ಕ ಪೆಟ್ಟಿಗೆ ಚೀನಾಲಿ ಪೆಟ್ಟಿಗೆ
ಮಕ್ಕಳ ಕಂಡರೆ ಅಳಿಸುವ ಪಟ್ಟಿಗೆ

- ಹಚ್ಚೆ ಪಟ್ಟಿಗೆ

೭.	ಮಾರುದ್ದ ಮರಕ್ಕೆ
ನಿಮ್ಮಪ್ಪನೂ ಹತ್ತಲಾರ ನಮ್ಮಪ್ಪನೂ ಹತ್ತಲಾರ

-ಹಂಚಿಕಡ್ಡಿ

೮.	ಅಂತಪ್ಪನ ಹಿತ್ತಲದಾಗ ಅಂತ್ರಾಣಿ ಗಿಡಹುಟ್ಟೈತಿ
ಅತ್ತರೂ ಬರುವುಲ್ಲು, ಕಿತ್ತೂ ಬರವಲ್ಲು

- ಹಚ್ಚೆಬೊಟ್ಟು

೯.	ಹಾಕಾಕ ಬರ್‍ತೈತಿ ತಗಿಯಾಕ ಬರುವದಿಲ್ಲ

- ಹಚ್ಚೆ

೧೦.	ಅಲಕ ಮಲಕು ಚಿಲಕ ಚಿತ್ತಾರ
ಹಾಕಲು ಬರುತ್ತದೆ, ತೆಗೆಯಲು ಬರುವದಿಲ್ಲ.

-ಹಚ್ಚೆ ಚುಚ್ಚಿಸಿಕೊಳ್ಳುವುದು

೧೧.	ಹಚ್ಚಿದ ಕುಳ್ಳ ಕಿತ್ತೋದಲ್ಲ
ಹಚ್ಚ ಮುಂದ ನಗೋದಿಲ್ಲ

- ಹಚ್ಚೆಯ ಬೊಟ್ಟು

೧೨. ಸೋಲಾಪರದ ಬೀಜಾ
ಬಿತ್ತಾಕ ಬರ್ತದ ಕಿತ್ತಾಕ ಬರಲ್

-ಹಚ್ಚೆ

೧೩. ಎತ್ರಾಸದ ಮೇಲೆ ಉತ್ರಾಣಿ ಗಿಡ ಹುಟ್ಟಿದ್ರೆ
ಕಿತ್ತರೂ ಬರಲ್ಲ ಕೀರಾಡಿದರೂ ಬರಲ್ಲ

- ಹಚ್ಚೆ

## ಹಚ್ಚೆಯ ಚಿತ್ರವಿನ್ಯಾಸಗಳು:

ಹಚ್ಚೆ, ಪುರುಷ ಮತ್ತು ಸ್ತ್ರೀಯರಿಬ್ಬರಲ್ಲಿಯೂ ಕಂಡುಬರುತ್ತಿದೆ. ಆದರೆ ಪುರುಷರಿಗಿಂತ ಸ್ತ್ರೀಯರೇ ಹೆಚ್ಚಿನ ಸಂಖ್ಯೆಯ ಹಚ್ಚೆಯ ಚಿತ್ರಗಳನ್ನು ಶರೀರದ ಅಂಗಾಗಂಗಗಳಲ್ಲಿ ಹಾಕಿಸಿಕೊಳ್ಳುತ್ತಾರೆ. ಪ್ರಪಂಚದ ವಿವಿಧ ಭಾಗದಲ್ಲಿ ಕಂಡುಬರುವ ಹಚ್ಚೆ ಕಲೆಯನ್ನು ವಿವಿಧ ಜನಾಂಗದವರು, ಶರೀರದಲ್ಲಿ ತಮಗಿಷ್ಟವೆನಿಸಿದ ಭಾಗದಲ್ಲಿ ಹಾಕಿಸಿಕೊಳ್ಳುತ್ತಾರೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹಚ್ಚೆಯಿಂದ ಮೈತುಂಬ ಚಿತ್ರ ಬಿಡಿಸಿಕೊಂಡವರಿದ್ದಾರೆ. ಶರೀರದ ನೂರಕ್ಕೆ ೮೫
ರಷ್ಟು ಭಾಗ ಹಚ್ಚೆ ಹಾಕಿಸಿಕೊಂಡು ಗಿನ್ನಿಸ್ ದಾಖಲೆ ನಿರ್ಮಿಸಿದವರು ಇದ್ದಾರೆ.

ಭಾರತದಲ್ಲಿ ಹಚ್ಚೆಯನ್ನು ಹೆಚ್ಚಾಗಿ ಕಣ್ಣಿಗೆ ಕಾಣಿಸುವ ಶರೀರದ ಮೇಲೆ ಹಾಕಿಸಿಕೊಂಡುದು ಗೊತ್ತಾಗುತ್ತದೆಯಾದರೂ ಕೆಲವು ಸಲ ಕಣ್ಣಿಗೆ ಕಾಣಿಸದೇ ಇರುವ ಸ್ಥಳಗಳಲ್ಲಿಯೂ ಹಾಕಿಸಿಕೊಂಡಿರುವುದು ಕಂಡುಬರುತ್ತದೆ. ಹಚ್ಚೆ ಹಾಕಸಿಕೊಳ್ಳುವ ಶರೀರದ ಪ್ರಮುಖ ಭಾಗಗಳನ್ನು ಶಾರೀರಿಕ ಅಂಗರಚನಾ ವಿನ್ಯಾಸದ ಹಿನ್ನಲೆಯಲ್ಲಿ ೧. ಮುಖದ ಹಚ್ಚೆ, ೨. ಕೊರಳ ಹಚ್ಚೆ, ೩.ಕೈಹಚ್ಚೆ, ೪. ಎದೆಯ ಹಚ್ಚೆ. ೫. ಹೊಟ್ಟೆಯ ಸುತ್ತಲಿನ ಹಚ್ಚೆ ೬. ಬೆನ್ನು ಹಚ್ಚೆ ೭. ಗುಪ್ತಾಂಗದ ಹಚ್ಚೆ ೮. ಕಾಲಿನ ಹಚ್ಚೆ ಎಂದು ಸ್ಥೂಲವಾಗಿ ವಿಂಗಡಿಸಿಕೊಂಡು ಅವುಗಳನ್ನು ಒಂದೊಂದಾಗಿ ಈಗ ವಿವೇಚಿಸಬಹುದಾಗಿದೆ.

೧. ಮುಖದ ಹಚ್ಚೆ: ಈ ಹಚ್ಚೆಯ ಚಿತ್ರಗಳನ್ನು ಹೆಚ್ಚಾಗಿ ಸ್ತ್ರೀಯರಲ್ಲಿ

ಮಾತ್ರ ಕಾಣುತ್ತೇವೆ. ಕರ್ನಾಟಕೇತರ ಪ್ರದೇಶಗಳಲ್ಲಿಯೂ ಪುರುಷರು ಹಣೆ, ಗದ್ದ, ಕಣ್ಣಿನ ಸುತ್ತಲೂ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಉತ್ತರ ಕರ್ನಾಟಕದಲ್ಲಿ ಮುಖದ ಮೇಲೆ ಹಾಕಿಸಿಕೊಳ್ಳುವ ಹಚ್ಚೆಯನ್ನು ಹೀಗೆ ವಿವೇಚಿಸಬಹುದು: ಅ) ಹಣೆಯ ಹಚ್ಚೆ, ಆ) ಕಣ್ಣು ಕುಣಿಕೆ ಹಚ್ಚೆ, ಇ)ಗಲ್ಲಗಳಮೇಲೆ ಹಚ್ಚೆ ಈ) ಮೂಗಿನ ಹಚ್ಚೆ ಉ)ಮೆಲುಕಿನ ಹಚ್ಚೆ ಊ) ಗದ್ದದ ಹಚ್ಚೆ

**ಅ) ಹಣೆಯ ಹಚ್ಚೆ:** ಹಣೆಯಲ್ಲಿ ಹಾಕಿಸಿಕೊಳ್ಳುವ ಹಚ್ಚೆಯ ಚಿತ್ರವಿನ್ಯಾಸಗಳು ಪ್ರಾದೇಶಿಕವಾಗಿ, ಜನಾಂಗಿಕವಾಗಿ ಬೇರೆ ಬೇರೆಯಾಗಿರುತ್ತವೆ. ಸೌಭಾಗ್ಯ ಇಲ್ಲವೆ ಗರತಿತನದ ಕುರುಹಾಗಿ ಹಚ್ಚೆಯನ್ನು ಹಣೆಯಲ್ಲಿ ಹಾಕಿಸಿಕೊಳ್ಳುವುದು ಎಲ್ಲ ಪ್ರದೇಶ ಹಾಗೂ ಜನಾಂಗದಲ್ಲಿ ಮಾತ್ರ ಸಾಮಾನ್ಯವಾಗಿ ಕಾಣುತ್ತೇವೆ. ಹಣೆಯಲ್ಲಿ ಸೂರ್ಯ, ಅರ್ಧಚಂದ್ರ, ನಕ್ಷತ್ರ, ನಾಮಗಳು ಶಿಲುಬೆ, ಗಿಂಡಿ, ದೃಷ್ಟಿಬೊಟ್ಟು, ಕಮಲ, ಶಂಖ, ಗೋದಿಕಾಳು, ನವಣೆಕಾಳು, ನವಿಲು, ಮುಡಿ, ಹೆಜ್ಜೆಮೀನು ಮುಂತಾದ ಚಿತ್ರಗಳನ್ನು ಹಾಕಿಸಿಕೊಳ್ಳುತ್ತಾರೆ.

ಹಚ್ಚೆ, ಇಲ್ಲಿ ಚೆಲುವಿನ ಅರ್ಥವನ್ನು ಮೀರಿ, ಧಾರ್ಮಿಕ ಅರ್ಥವನ್ನು ಪಡೆಯುತ್ತದೆ. ವೈಷ್ಣವರು ಚಕ್ರಾಂಕನ ಮುದ್ರೆಯನ್ನು ವೀರಶೈವರು, ತ್ರೀಶೂಲ, ತ್ರಿಪುಂಡ, ಲಿಂಗ, ನಂದಿ ಚಿತ್ರಗಳನ್ನು, ಕ್ರೈಸ್ತರು ಶಿಲುಬೆ, ಪಕ್ಷಿ, ದೇವರ ಹೆಸರುಗಳನ್ನು ಹಾಕಿಸಿಕೊಳ್ಳುತ್ತಾರೆ. ಶುಭ ಸಂಕೇತಗಳೆಂದು ಕರೆಯಿಸಿಕೊಳ್ಳುವ, ಓಂ, ಶ್ರೀ ಸ್ವಸ್ತಿಕ ಮುಂತಾದ ಚಿಹ್ನೆಗಳನ್ನು ಸಾಮಾನ್ಯವಾಗಿ ಯಾವ ಜಾತಿ ಭೇದವಿಲ್ಲದೆ ಎಲ್ಲರೂ ಹಾಕಿಸಿಕೊಳ್ಳುವುದುಂಟು, ಹಣೆಯ ಮೇಲೆ ಹಾಕಿಸಿಕೊಳ್ಳುವ ಹಚ್ಚೆಬೊಟ್ಟು ಲಕ್ಷ್ಮೀಯ ಸಂಕೇತವೆಂದೂ ನವಿಲಿನ ಚಿತ್ರ ಸರಸ್ವತಿಯೆಂದೂ ಮುಡಿಯ ಚಿತ್ರ ಗೌರಿಯೆಂದು ಹೆಜ್ಜೆಯ ಚಿತ್ರ ಸೀತೆಯೆಂದೂ ಚಿತ್ರಿಸಿಕೊಳ್ಳುತ್ತಾರೆ. ಸಂತಾನದ ಭಾಗ್ಯಕ್ಕಾಗಿ ಮೀನಿನ ಚಿತ್ರದ ಹಚ್ಚೆ ಹಾಕಿಸಿಕೊಂಡರೆ ದಾಂಪತ್ಯದ ಸುಖ ಬೇಕೆನ್ನುವವರು ಬಾಚಣಿಗೆಯ ಹಚ್ಚೆಯನ್ನು ಹೊಮ್ಮಿಸಿಕೊಳ್ಳುವುದುಂಟು.

ಹೀಗೆ ಹಣೆಯಲ್ಲಿ ಹಾಕಿಸಿಕೊಂಡ ಹಚ್ಚೆಯನ್ನು ಹಚ್ಚೆ ಚಿತ್ರವೂ ಹಂಚಿ ಬೊಟ್ಟಿನ ಚಿತ್ರ, ಗಿಂಡಿಹಚ್ಚೆಯ ಚಿತ್ರ, ಗರತಿಹಚ್ಚೆಯ ಚಿತ್ರ, ಕುಂಕುಮ ಬಟ್ಟಿನ ಚಿತ್ರವಂದು ಕರೆಯಲಾಗುತ್ತದೆ.

ಹಣೆಯಮೇಲಿನ ಈ ಹಚ್ಚೆಯನ್ನು ಸ್ತ್ರೀಯರು ಮದುವೆಯ ಪೂರ್ವದಲ್ಲಿ ಮತ್ತು ಮದುವೆ ನಂತರದಲ್ಲಿ ಹಾಕಿಸಿಕೊಳ್ಳುತ್ತಾರೆ. ಮದುವೆಯಾದ ಸ್ತ್ರೀಯರು

ಹಣೆಯಮೇಲೆ ಸಾಮಾನ್ಯವಾಗಿ ಏಳು ವರ್ಷದ ಹುಡುಗಿಯರಿಗೆ ಚುಕ್ಕಿಯ ಒಂದು ಚಿತ್ರ, ಇಲ್ಲವೇ ಸೂರ್ಯ, ಚಂದ್ರರ ಚಿತ್ರ ಹಾಕಿಸುವದು ವಾಡಿಕೆ. ಏನೇ ಅಲಂಕಾರ ಮಾಡಿದರೂ ಅದು ಮದುವೆಯಾದವರಿಗೆ ಮಾತ್ರವೆಂದು ಹೇಳುತ್ತಾರೆ. ಇದರ ಹಿನ್ನಲೆಯಲ್ಲಿ ಮದುವೆಯಾಗದ ಹುಡುಗಿಯರ ಮೇಲೆ ಕೆಟ್ಟ ಕಣ್ಣಿನ ದೃಷ್ಟಿ ಬೀಳಬಾರದೆಂದು ಉದ್ದೇಶವಿದ್ದಂತಿದೆ.

**ಆ) ಕಣ್ಣು ಕುಣಿಕೆ ಹಚ್ಚೆ:** ಕಣ್ಣಿನ ಸುತ್ತಲೂ ಹಾಕಿಸಿಕೊಳ್ಳುವ ಈ ಹಚ್ಚೆಯನ್ನು ಕಣ್ಣು ಕುಣಿಕೆ ಹಚ್ಚೆ ಕಣಿಸೋಲೆ ಹಚ್ಚೆ, ಕಣ್ ಶಾವಿಗೆ ಹಚ್ಚೆಯೆಂದು ಕರೆಯಲಾಗುತ್ತದೆ. ಎರಡೂ ಕಣ್ಣುಗಳ ಹೊರಬದಿಯಲ್ಲಿ ಅರ್ಧ ವರ್ತುಳ ಇಲ್ಲವೆ ಮೂರು ಅಡ್ಡಗೆರೆ ಅಥವಾ ಮೂರು ಚುಕ್ಕೆಗಳ ಹಚ್ಚೆ ಇದಾಗಿರುತ್ತವೆ.

ಲಂಬಾಣಿ, ದೇವದಾಸಿ ಇನ್ನಿತರ ಕೆಳವರ್ಗದ ಸ್ತ್ರೀಯರು ಹೆಚ್ಚಾಗಿ ಕಣ್ಣಿನ ಸುತ್ತಲೂ ಹಚ್ಚೆಯ ಚಿತ್ರಗಳನ್ನು ಹಾಕಿಸಿಕೊಳ್ಳುತ್ತಾರೆ. ಈ ಚಿತ್ರಗಳ ಸಂಕೇತಗಳಿಂದ ಇವರು ಕದೇ ಜನಾಂಗದವರೆಂದೂ ಗುರುತಿಸಿಕೊಳ್ಳುತ್ತಾರೆ.

**ಇ) ಗಲ್ಲಗಳ ಮೇಲಿನ ಹಚ್ಚೆ:** ಗಲ್ಲ ಅಥವಾ ಕೆನ್ನೆಯ ಮೇಲೆ ಹಾಕಿಸಿಕೊಳ್ಳುವ ಈ ಹಚ್ಚೆಗೆ ದೃಷ್ಟಿಯ ಹಚ್ಚೆ, ದೃಷ್ಟಿಬೊಟ್ಟು, ಜೋಳದ ಕಾಳಿನ ಹಚ್ಚೆ ಯೆಂದು ಹೆಸರು. ಕೆನ್ನೆಯ ಮಧ್ಯದಲ್ಲಿ ಒಂದು ಚುಕ್ಕೆ, ಮೂರು ಚುಕ್ಕೆ, ಇನ್ನು ಕೆಲವುಸಲ, ಒಂದು ಚುಕ್ಕೆ ಅದರ ಸುತ್ತಲೂ ಸಣ್ಣ ಚುಕ್ಕೆಗಳ ಅಲಂಕಾರವಿರುತ್ತದೆ. ಈ ಅಲಂಕಾರ ಎರಡೂ ಕೆನ್ನೆಯಲ್ಲಿ ಇರಬಹುದು. ಇಲ್ಲವೆ ಒಂದೇ ಕೆನ್ನೆಯಲ್ಲಿ ಇರಬಹುದು. ಸುಂದರವಾದ ಸ್ತ್ರೀಯರಿಗೆ ದೃಷ್ಟಿಯಾಗದಿರಲೆಂದು ಈ ಹಚ್ಚೆ ಹಾಕಿಸುತ್ತಾರೆ. ಮದುವೆ ಪೂರ್ವದ ಹೆಣ್ಣು ಹುಡುಗಿಯರಿಗೂ ಈ ಹಚ್ಚೆ ಹಾಕಿಸುವ ರೂಢಿಯಿದೆ.

**ಈ) ಮೂಗಿನ ಮೇಲ್ಬದಿಯ ಹಚ್ಚೆ**: ಮೂಗಿನ ಮೇಲಿನ ಬಲಪಕ್ಕದಲ್ಲಿ ಚುಕ್ಕೆಯಿಂದ ಕೂಡಿದ ಹಚ್ಚೆಯಿರುತ್ತದೆ. ಈ ಹಚ್ಚೆ ಅಲಂಕಾರದ ಹಿನ್ನಲೆಯಿಂದ ಕೂಡಿದುದಲ್ಲ. ಮೂಗಿನ ಮೇಲೆ ಹಸಿರುನರ ಕೆಲವರಿಗೆ ಕಾಣಿಸಿಕೊಳ್ಳುತ್ತದೆ. ಅದು ಶುಭದ ಲಕ್ಷಣವಲ್ಲ. ಆದ್ದರಿಂದ ಅಣ್ಣ ತಮ್ಮಂದಿರರಿಗೆ ಕೇಡಾಗುತ್ತದೆ. ಅದರ ನಿವರಣೆಗಾಗಿ ಹಸಿರು ನರದ ಮೇಲೆ ಹಚ್ಚೆ ಹಾಕಿಸುತ್ತಾರೆ. ಇಲ್ಲಿಯ ಹಚ್ಚೆಯಲ್ಲಿ ಯಾವ ಚಿತ್ರ ವಿನ್ಯಾಸಗಳೂ ಕಂಡುಬಂದಿಲ್ಲ.

**ಉ) ಮೆಲುಕಿನ ಹಚ್ಚೆ:** ಮೆಲುಕಿನ ಮೇಲೆ ಹಾಕಿಸುವ ಹಚ್ಚೆಯನ್ನು ತಲೆನೋವು, ಅರ್ಧತಲೆನೋವು, ದೃಷ್ಟಿಮಂದತೆಯ ನಿವಾರಣೆ ಹಿನ್ನಲೆಯಲ್ಲಿಯೂ, ಸೌಂದರ್ಯದ ಹಿನ್ನಲೆಯಲ್ಲಿಯೂ ಹಾಕುವುದುಂಟು. ಮೂರು ಸಣ್ಣ ಚುಕ್ಕೆ ಅಡ್ಡಗೆರೆ

ಒಂದು ಚುಕ್ಕೆ, ಹೂ, ಜೋಳದ ಕಾಳದ ಹಚ್ಚೆ ಎರಡು ಗೆರೆ ಅದರ ಮೇಲೆ ಅರ್ಧವೃತ್ತದ ವಿನ್ಯಾಸ-ಈ ರೀತಿಯ ಚಿತ್ರವಿನ್ಯಾಸಗಳಿರುತ್ತವೆ. ಎಲ್ಲ ಜನಾಂಗ ಮತ್ತು ಪ್ರದೇಶಗಳಲ್ಲಿ ಇದು ಒಂದೇ ತೆರನಾಗಿ ಕಂಡುಬರುತ್ತವೆ.

**ಊ) ಗದ್ದದ ಹಚ್ಚೆ:** ಗದ್ದದ ಮೇಲೆ ಒಂದು ಚುಕ್ಕೆಯ ಅಥವಾ ಮೂರು ಚುಕ್ಕೆಗಳ ಹಚ್ಚೆ ಕಂಡುಬರುತ್ತಿದ್ದು, ದೃಷ್ಟಿಯಾಗದಿರಲೆಂಬ ಆಶಯದ ಹಿನ್ನಲೆಯಲ್ಲಿ ಇದನ್ನು ಹಾಕಿಸಿಕೊಳ್ಳುತ್ತಿರಬೇಕೆನಿಸುತ್ತದೆ. ಈ ಹಚ್ಚೆ ಕೆಳವರ್ಗದ ಜನರಲ್ಲಿ ಹೆಚ್ಚು ಕಂಡುಬಂದರೆ, ಉಳಿದ ವರ್ಗದವರಲ್ಲಿ ಕಡಿಮೆ ಪ್ರಮಾಣದಲ್ಲಿ ಗೋಚರಿಸುತ್ತದೆ.

**೨. ಕೊರಳ ಹಚ್ಚೆ**: ಕೊರಳಲ್ಲಿ ಹಾಕಿಕೊಳ್ಳುವ ಹಚ್ಚೆಯನ್ನು ಕೊರಳ ಹಚ್ಚೆಯೆಂದು ಕರೆಯಲಾಗುತ್ತದೆ. ಕೊರಳಲ್ಲಿ ಹಾಕಿಕೊಳ್ಳುವ ವಿವಿಧ ಸರ, ಆಭರಣಗಳನ್ನು ಅನುಸರಿಸಿ, ವಿವಿಧ ರೀತಿಯ ಸರ, ಆಭರಣಗಳಂತೆ ಹಚ್ಚೆ ಹಾಕಲಾಗುತ್ತದೆ. ಪ್ರಾಚೀನ ಕಾಲದಿಂದಲೂ ಇದು ಬಳಕೆಯಾಗುತ್ತ ಬಂದ ಹಚ್ಚೆ. ಈಗ ಕೆಳವರ್ಗದ, ಗಿರಿಜನರ, ಬುಡಕಟ್ಟು ಜನಾಂಗಕ್ಕೆ ಮಾತ್ರ ಈ ಹಚ್ಚೆ ಸೀಮಿತವಾಗಿದೆ. ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರಪ್ರದೇಶ ಕೆಳವರ್ಗದ ಜನರಲ್ಲಿ ಈಗಲೂ ಕೊರಳಚ್ಚೆ ಪ್ರಮುಖವಾಗಿ ಕಂಡುಬರುತ್ತದೆ. ಈಗ ಉತ್ತರಕರ್ನಾಟಕದಲ್ಲಿ ಇದು ಅಷ್ಟಾಗಿ ಪ್ರಚಲಿತದಲ್ಲಿಲ್ಲ. ದಕ್ಷಿಣ ಕರ್ನಾಟಕದ ಶಿವಮೊಗ್ಗ ಮುಂತಾದ ಕಡೆಗೆ ಈ ರೀತಿಯ ಹಚ್ಚೆ ಇರುವುದಾಗಿ ತಿಳಿದುಬರುತ್ತದೆ.

**೩. ಕೈ ಹಚ್ಚೆ**: ಹಚ್ಚೆಯ ಚಿತ್ರಗಳ ವೈವಿಧ್ಯತೆಗಳು ಕಂಡುಬರುವುದು ಕೈಯಲ್ಲಿ ಮಾತ್ರ ಕೈ ಹಚ್ಚೆಯಲ್ಲಿ ಚಿತ್ರಗಳನ್ನು ಬಿಡಿಸಲು ಸಾಕಷ್ಟು ಅನುಕೂಲತೆಗಳಿವೆ. ಎರಡೂ ಕೈಗಳ ಮುಂಭಾಗ, ಹಿಂಭಾಗದಲ್ಲಿ ಹಚ್ಚೆಯ ಚಿತ್ರಗಳು ಆಕಾರ ಪಡೆದುಕೊಂಡಿವೆ. ಎರಡೂ ಕೈಯನ್ನು ಸಂಪೂರ್ಣವಾಗಿ ಹಚ್ಚೆಯ ಚಿತ್ರಗಳಿಂದ ತುಂಬಿಸಿಕೊಂಡು ಸಂತೋಷಪಡುತ್ತಿದ್ದ ಕಾಲವೊಂದಿತ್ತು. ಐವತ್ತು, ಅರವತ್ತು ವರ್ಷಗಳ ಹಿಂದೆ, ಹಾಕಿಸಿಕೊಂಡ ಹಚ್ಚೆಯ ಚಿತ್ರಗಳು ಈಗಲೂ ಹಳ್ಳಿಯಲ್ಲಿ ಹೇರಳವಾಗಿ ಸಿಗುತ್ತವೆ. ಸ್ತ್ರೀಯರು ಮದುವೆಯಾದ ನಂತರ ಮಾತ್ರ ದೊಡ್ಡ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಈ ಕೈ ಹಚ್ಚೆಯನ್ನು ಚಿತ್ರಗಳ ಹಿನ್ನೆಲೆಯಲ್ಲಿ: ೧. ಎಡಗೈ ಹಚ್ಚೆಯ ಚಿತ್ರ, ೨. ಬಲಗೈ ಹಚ್ಚೆಯ ಚಿತ್ರ ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ.

**೧. ಎಡಗೈ ಹಚ್ಚೆಯ ಚಿತ್ರ**: ಎಡಗೈಯಲ್ಲಿ ಹಾಕಿಸಿಕೊಳ್ಳುವ ಚಿತ್ರ ವಿನ್ಯಾಸಗಳು ಕೈಯ ಮುಂಭಾಗ ಮತ್ತು ಹಿಂಭಾಗದಲ್ಲಿರುತ್ತವೆ. ಕೈಯ ಎರಡೂ ಬದಿಯಲ್ಲಿಯೂ ಹಚ್ಚೆ ಚಿತ್ರಗಳು ಸ್ತ್ರೀಯರಲ್ಲಿ ಅಧಿಕ ಪ್ರಮಾಣದಲ್ಲಿ, ಪುರುಷರಲ್ಲಿ

ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತವೆ. ಎಡಗೈಯಲ್ಲಿ ಹಚ್ಚೆಯ ಚಿತ್ರಗಳನ್ನು ಪ್ರಮುಖವಾಗಿ ಅ)ಭುಜದ ಹಚ್ಚೆ ಆ) ರಟ್ಟೆಯಹಚ್ಚೆ ಇ)ಮೊಳಕ್ಕೆ ಹಚ್ಚೆ ಈ) ಹಸ್ತದಹಚ್ಚೆ ಎಂದು ವಿಭಾಗಿಸಿ, ಇವುಗಳನ್ನು ಚರ್ಚಿಸಬಹುದು.

**ಅ) ಭುಜದ ಹಚ್ಚೆ:** ಭುಜದ ಮೇಲೆ ಹಾಕಿಕೊಳ್ಳುವ ಹಚ್ಚೆಯನ್ನು ತೋಳಚಪ್ಪರದ ಹಚ್ಚೆಯೆಂದು ಕರೆಯುತ್ತಾರೆ ಮುತ್ತಿನ ಬೊಟ್ಟು, ಮುತ್ತಿನ ಮಲಕು, ತೊಂಡೆಚಪ್ಪರ, ತೋಳಚಪ್ಪರ, ಗೌರಿಗದ್ದಿಗೆ, ಸೀತೆಯ ಸೆರಗು ಮೊದಲಾದ ಚಿತ್ರಗಳನ್ನು ಈ ಭುಜದ ಹಚ್ಚೆಯಲ್ಲಿ ಹಾಕಿಸಿಕೊಳ್ಳುತ್ತಾರೆ. ಪುರುಷರು ಭುಜದ ಮೇಲೆ ಹನುಮಪ್ಪ ಇಲ್ಲವೆ ದೇವತೆಗಳ ಚಿತ್ರಗಳನ್ನು ಬಿಡಿಸಿ ಕೊಂಡಿರುತ್ತಾರೆ.

**ಆ) ರಟ್ಟೆಯ ಹಚ್ಚೆ:** ರಟ್ಟೆಯ ಹಚ್ಚೆಯನ್ನು ಕುಬಸದ ಹಚ್ಚೆ, ರಕ್ಷಣೆಯ ಹಚ್ಚೆಯೆಂದು ಕರೆಯುತ್ತಾರೆ. ಕುಬಸ ಧರಿಸುವ ತೋಳಿನ ಸ್ಥಳದಲ್ಲಿ ಹಚ್ಚೆಯ



ಚಿತ್ರಗಳನ್ನು ಬಿಡಿಸಿ, ರಟ್ಟೆಯನ್ನು ಅಲಂಕರಿ ಸಿಕೊಳ್ಳುತ್ತಾರೆ. ವಡ್ಡರು ಹಾಲಕ್ಕಿಗಳು ಮುಂತಾದ ಜನಾಂಗಗಳಲ್ಲಿ ಕುಪ್ಪಸ ತೊಡುವ ಪದ್ಧತಿಯಿಲ್ಲ. ಇಂತಹ ಜನಾಂಗಗಳಲ್ಲಿ ಕುಬುಸದ ಬದಲು ಈ ಹಚ್ಚೆಯನ್ನೇ ಅಲಂಕರಿಸಿದುದು ತಿಳಿದು ಬರುತ್ತದೆ. ಮುಂದುವರಿದ ಜನಾಂಗದಲ್ಲಿ ರಕ್ಷಣೆ ಕೊಡುವ ಹಣಮಂತ, ದುರ್ಗಿ, ಲಕ್ಷ್ಮೀ, ಕೃಷ್ಣ ಗಣಪತಿ, ಈಶ್ವರ, ನಂದಿ ಮುಂತಾದ ದೇವಾನುದೇವತೆಗಳು ರಟ್ಟೆಯ ಹಚ್ಚೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಪುರುಷರಲ್ಲಿಯೂ ಇವೇ ಆಶಯದ ಚಿತ್ರಗಳು ಅಂದರೆ ಕೆಲವುಸಲ ಶಿಲುಬೆ, ಈಶ್ವರ, ಸ್ವಸ್ತಿಕ ಮುಂತಾದ ಚಿತ್ರಗಳ ಸಂಕೇತಗಳನ್ನು ಹಾಕಿಸಿಕೊಳ್ಳುತ್ತಾರೆ. ಇವು ರಟ್ಟೆಯ ಹೊರ ಮತ್ತು ಒಳಬದಿಗಳೆರಡರಲ್ಲಿಯೂ ಸ್ಥಾನ ಪಡೆದಿರುತ್ತವೆ.

**ಇ) ಮೊಳಕೈ ಹಚ್ಚೆ:** ಮೊಳಕೈಯ ಮುಂಬಾಗ ಮತ್ತು ಹಿಂಭಾಗದಲ್ಲಿ ಹಚ್ಚೆಯ ನೂರಾರು ಚಿತ್ರಗಳಿರುತ್ತವೆ. ಇಲ್ಲಿ ಹಿಂಭಾಗದಲ್ಲಿ ಹಾಕಿದ ಚಿತ್ರ ಮುಂಭಾದಲ್ಲಿಯೂ ಮುಂಬಾಗದಲ್ಲಿ ಹಾಕಿದ ಚಿತ್ರ ಹಿಂಭಾಗದಲ್ಲಿಯೂ ಭಿನ್ನಭಿನ್ನವಾಗಿ ವ್ಯಕ್ತಿಗಳಲ್ಲಿ ಕಂಡುಬರುತ್ತದೆ. ಮೊಳಕೈಯ ಹಚ್ಚೆಗಳಲ್ಲಿ ಕೆಲವನ್ನು ಪ್ರಾತಿನಿಧಿಕವಾಗಿ ಹೀಗೆ ಹೆಸರಿಸಬಹುದಾಗಿದೆ: ಗೌರಿಗದ್ದಿಗೆ, ಜೋಗಿಜಡೆ, ತಾವರೆ ಹೂ, ಗಾಲಿ, ತೇರು, ಅರುಗಾಲಿನ ತೇರು, ಬಸವಣ್ಣನ ರಥ, ಹಂಪಿ ತೇರು, ಗೆಳತಿಯರು

ಅಣ್ಣ-ತಮ್ಮಂದಿರು, ಬಾಳಿಗೊನೆ, ಕುಮಾರರಾಮನ ಚೆಂಡು, ಸೂರ್ಯಕಾಂತಿ, ಹೂ, ಕಮಲದ  ಹೂ, ದ್ರಾಕ್ಷಿಬಳ್ಳಿ, ಎಲೆ ಬಳ್ಳಿ, ಬಾಳಿದಿಂಡು, ಪಾರಿಜಾತ ಹೂ, ನಂದಿಕೋಲು, ಚೇಳು, ಗಿಳಿ, ನವಿಲು ರಂಗೋಲಿ ಮುಂತಾದ ನೂರಾರು ಚಿತ್ರವಿನ್ಯಾಸಗಳು ಇಲ್ಲಿ ವಿಶೇಷವಾಗಿ ಬಳಕೆಯಾಗಿರುತ್ತವೆ.

**ಈ) ಹಸ್ತದ ಹಚ್ಚೆ:** ಹಸ್ತದ ಹಿಂಭಾಗದಲ್ಲಿ ಮಾತ್ರ ಹಚ್ಚೆಯ ಚಿತ್ರಗಳನ್ನು ಹಾಕಿಸಿಕೊಳ್ಳುತ್ತಿದ್ದು, ಹಸ್ತದ ಪ್ರಾರಂಭದಲ್ಲಿ ಬಳೆಯ ಹಚ್ಚೆ ಚಿತ್ರಗಳಿರುತ್ತವೆ. ಬಳೆ ದರಿಸುವ ಸ್ಥಳದಲ್ಲಿ ಸುತ್ತಲೂ ವರ್ತುಳಾಕಾರದ ರೀತಿಯಲ್ಲಿ ಹಚ್ಚೆಯ ಚಿತ್ರನ್ನು ಬಿಡಿಸುತ್ತಾರೆ. ಇದಕ್ಕೆ ಬಳ ಹಚ್ಚೆಯೆಂದು ಹೆಸರು, ಹಸ್ತ ಹಿಂಬದಿಯ ಮಧ್ಯದ ಭಾಗದಲ್ಲಿ ಯಾವುದಾದರೊಂದು ಹೂವಿನ ಚಿತ್ರಗಳನ್ನು ಚಿತ್ರಿಸುತ್ತಾರೆ. ಎಡಗೈ ಹಸ್ತದ ಹಚ್ಚೆಯ ಚಿತ್ರಗಳಲ್ಲಿ ಪ್ರಮುಖವಾಗಿ ಬಳೆಗಳ ವಿನ್ಯಾಸದ ಹಚ್ಚೆ, ಗೆಳತಿಯರು,



ಕಮಲದ ಹೂ, ಪಾರಿಜಾತದ ಹೂ, ನತ್ತು, ನಾಗಪ್ಪ ಮುಂತಾದವುಗಳು ಇರುತ್ತವೆ. ಕೈಬೆರಳುಗಳಲ್ಲಿ ಚುಕ್ಕೆ ನೊಣದಕಾಲು ಎಲ್ಲ ಬೆರಳುಗಳಲ್ಲಿ ಚುಕ್ಕೆ, ಅದರ ಮೇಲೆ ಅಡ್ಡಗೆರೆ, ಅದರ ಮೇಲೆ ಅರ್ಧವರ್ತುಳದಂತಹ ಸಣ್ಣ ವಿನ್ಯಾಸದ ಹಚ್ಚೆ ಚಿತ್ರಗಳು ಸಾಮಾನ್ಯವಾಗಿರುತ್ತವೆ.

**ಬಲಗೈ ಹಚ್ಚೆಯ ಚಿತ್ರ:** ಹಚ್ಚೆಯ ವಿವಿಧ ಚಿತ್ರಗಳನ್ನು ತಮ್ಮ ಶರೀರದ ಮೇಲೆ ಮೂಡಿಸಿಕೊಳ್ಳಬೇಕೆಂಬ ಆಕಾಂಕ್ಷೆ, ಅನೇಕ ವೈವಿಧ್ಯಮಯವಾದ ಹಚ್ಚೆ ಚಿತ್ರವಿನ್ಯಾಸಗಳ ಸೃಷ್ಟಿಗೆ ಕಾರಣವಾಗಿದೆ. ಎಡಗೈಯಲ್ಲಿ ಹಾಕಿಕೊಂಡ ಚಿತ್ರವಿನ್ಯಾಸಗಳು ಬಲಗೈಯಲ್ಲಿ ಬರಬಾರದೆನ್ನುವ ನಂಬಿಕೆಯೂ ಹೊಸ ಹಚ್ಚೆಯ ಚಿತ್ರಗಳ ಆವಿಷ್ಕಾರಕ್ಕೆ ಕಾರಣವಾಗಿದೆ. ಹೀಗಾಗಿ ಬಲಗೈಯಲ್ಲಿ ಹಾಗೂ ಎಡಗೈಯಲ್ಲಿ ಕೆಲವು ನಿರ್ದಿಷ್ಟ ಚಿತ್ರಗಳನ್ನು ಮಾತ್ರ ಹಾಕಬೇಕೆಂದು ಹಚ್ಚೆ ಹಾಕುವವರು ಹಚ್ಚೆಯ ಚಿತ್ರಗಳ ಹೊತ್ತಿಗೆಯನ್ನೇ ಮಾಡಿಕೊಂಡಿದ್ದಾರೆ. ಇದರಲ್ಲಿಯ ಚಿತ್ರಗಳನ್ನು ತೋರಿಸಿ. ಹಾಕಿಕೊಳ್ಳುವ ಹಚ್ಚೆಯ ಚಿತ್ರಗಳನ್ನು ಎಡಗೈಯಲ್ಲಿ ಹಾಕಿಸಿಕೊಳ್ಳುವುದೂ ಉಂಟು ಇಂಥ ಸಂದರ್ಭದಲ್ಲಿ ಎಡಗೈಯಲ್ಲಿಯ ಹಚ್ಚೆಯ ಚಿತ್ರಗಳು ಬಲಗೈಯ ಮೇಲೆ ಬಲಗೈಯ ಹಚ್ಚೆಯ ಚಿತ್ರಗಳು ಎಡಗೈಯಲ್ಲಿ ಬರುತ್ತವೆ. ಹೀಗಾಗುವುದು ಬಹಳ ಕಡಿಮೆಯೆಂದು ಹೇಳುತ್ತಾರೆ.

ಹಚ್ಚೆಯ ವೃತ್ತಿಯವರ ಮನಸ್ಸಿನಲ್ಲಿ ಹಚ್ಚೆಯ ಚಿತ್ರಗಳ ಬಗೆಗೆ ಸ್ಪಷ್ಟವಾದ ಕಲ್ಪನೆಗಳಿದ್ದು, ಇಂತಹ ಸ್ಥಳದಲ್ಲಿ, ಇದೇ ಚಿತ್ರ ಹಾಕಬೇಕೆಂದು ನಿರ್ದರಿಸಿಕೊಂಡಿರುವುದು ಕಂಡು ಬರುತ್ತದೆ. ಹಾಕಿಸಿಕೊಳ್ಳುವವರಿಗೆ ಸರಿಯಾಗಿ ತಿಳುವಳಿಕೆಯನ್ನು ಕೊಟ್ಟಾದರೂ ಅಂತಹ ಹಚ್ಚೆಯ ಚಿತ್ರಗಳನ್ನು ಹಾಕುವುದುಂಟು, ಬಲಗೈಯ ಮೇಲೆ ಹಾಕುವ ಹಚ್ಚೆಯನ್ನು ಅ)ಭುಜದ ಹಚ್ಚೆ ಆ) ರಟ್ಟೆಯಹಚ್ಚೆ ಇ) ಮೊಳಕ್ಕೆ ಹಚ್ಚೆ ಈ) ಹಸ್ತದ ಹಚ್ಚೆ ಎಂದು ವಿಂಗಡಿಸಿಕೊಂಡು ವಿವೇಚಿಸಬೇಕಾಗುತ್ತದೆ.

**ಅ) ಭುಜದ ಹಚ್ಚೆ:** ಭುಜದ ಹಚ್ಚೆಯ ಚಿತ್ರಗಳಲ್ಲಿ ಎಡಭುಜದಲ್ಲಿ ದೇವರ ಹಚ್ಚೆಯ ಚಿತ್ರವಿದ್ದರೆ, ಬಲಭುಜದಲ್ಲಿ ಬೇರೆ ಚಿತ್ರವಿರುತ್ತದೆ. ತಮಗೆ ಪ್ರೀಯವಾದ ವ್ಯಕ್ತಿಗಳಹೆಸರನ್ನು ಇಲ್ಲವೆ ದೇವರ ಚಿತ್ರವನ್ನು ಹಚ್ಚೆಯಲ್ಲಿ ಹಾಕಿಸಿಕೊಳ್ಳುತ್ತಾರೆ. ಸ್ತ್ರೀ-ಪುರುಷರಿಬ್ಬರೂ ಬಲಗೈ ಭುಜದ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ.

**ಆ) ರಟ್ಟೆಯ ಹಚ್ಚೆ** : ಬಲಗೈ ರಟ್ಟೆ ಅಥವಾ ತೋಳಿನ ಹಿಂದೆ ಕುಪ್ಪಸದ ಹಚ್ಚೆ ಚಿತ್ರವನ್ನು ಬಿಡಿಸುತ್ತಿದ್ದರಂತೆ. ಆದರೆ ಚಿತ್ರಗಳ ವಿನ್ಯಾಸಗಳು ಎಡ ಮತ್ತು ಬಲಗೈಯಲ್ಲಿ ಬೇರೆ ಬೇರೆಯಾಗಿ ಇರುತ್ತವೆ. ಬಲಗೈ ರಟ್ಟೆಯಲ್ಲಿ ಹಾವು, ಚೇಳುಗಳನ್ನು ಬಿಡಿಸಿಕೊಂಡಿದ್ದರೆ ಅಂಥವರಿಗೆ ಅವುಗಳ ಕಾಟ ತಪ್ಪುತ್ತದೆಯೆಂದ ಅಂತಹ ಚಿತ್ರಗಳನ್ನು



ಹಚ್ಚೆಯಲ್ಲಿ ಹಾಕಿಸಿಕೊಳ್ಳುತ್ತಾರೆ. ಇಲ್ಲಿ ಪೂರ್ವಜರ ಹೆಸರನ್ನು ಹೊತ್ತ ಹಚ್ಚೆ ಚಿತ್ರಗಳು ಕೆಲವರಲ್ಲಿ ಕಂಡುಬರುತ್ತವೆ.

**ಇ) ಮೊಳಕ್ಕೆ ಹಚ್ಚೆ** : ಮೊಳಕೈಹಚ್ಚೆ ಚಿತ್ರಗಳು ಹೊರಬದಿಯಲ್ಲಿ ಕಡಿಮೆ ಪ್ರಮಾಣದಲ್ಲಿಯೂ ಒಳಬದಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿಯೂ ಇರುತ್ತದೆ. ಇವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದಾಗಿದೆ: ಗಿಳಿ, ಪದ್ಮ, ಯಾಲಕ್ಕಿಸಾಲು, ನಾಣ್ಯಗಳ ಸಾಲು, ನವಗ್ರಹಗಳು, ಬಿಲ್ವಪತ್ರೆ, ಬಾಳೆಯಗಿಡ, ಮುತ್ತನಾರತಿ, ಜೋಡುಎತ್ತು, ಜೋಗಿಜಡೆ, ಕಟ್ಟಾಣಿಸರ, ಕಂಚಿತೊಟ್ಟಿಲು, ತೊಂಡಲು ಪಾಂಡವರು, ಪಾಂಡವರ ಆಯುಧಗಳು, ಸೀತೆಸೆರಗು, ಶಿವನ ಬಾಸಿಂಗ ಮಲ್ಲಿಗೆದಂಡೆ, ರಾಮನ ತೊಟ್ಟಿಲು. ಮುತ್ತೈದೆಯರು ಹುಲಿ ಉಗುರು, ಪಗಡಿಸಾಲು, ನಾಗರಗೆಜ್ಜೆ, ತುಳಸಿಕಟ್ಟೆ, ತಿಳಸಿಗಿಡ, ತುಳಸಿಮರ, ಮಾಲೆ, ರಾಮಲಕ್ಷ್ಮಣರು, ಸಹೋದರರ ನೆರಳು, ವಾಲಿಗುಪ್ಪಿ, ನಾಗಪ್ಪ, ಹನಮಪ್ಪ, ಗಂಡ ಅಥವಾ ಹೆಂಡತಿಯ ಹೆಸರು,

ಪ್ರಿಯಕರರ ಹೆಸರು ಹಚ್ಚೆಹಾಕಿದವರ ಹೆಸರು ಬರೆಯಿಸಿಕೊಳ್ಳುತ್ತಾರೆ. ಪ್ರಾದೇಶಿಕವಾಗಿ ಇವುಗಳಲ್ಲಿ ವ್ಯತ್ಯಾಸಗಳಿರುತ್ತವೆ. ಹಚ್ಚೆ ಹಾಕುವವರು ಬೇರೆ ಪ್ರದೇಶದವರಾದುದರಿಂದ ಪ್ರಾದೇಶಿಕ ಮಟ್ಟದ ಹೆಸರುಗಳಿಂದ ಇವು ಇಲ್ಲಿ ಅಭಿವ್ಯಕ್ತಗೊಂಡಿರುತ್ತವೆ.

**ಈ) ಹಸ್ತದ ಹಚ್ಚೆ:** ಹಸ್ತದ ಮೇಲೆ ವಾಲಿಗುಪ್ಪಿ, ಹುಲಿಉಗುರು, ನಿಂಬೆಹೂ, ಶಂಖ ಸೂರ್ಯಕಾಂತಿಹೂ ಕಡಲಗೋಲಮಂಡಿ, ದ್ರಾಕ್ಷಿಬಳ್ಳಿ, ಅವರೆಹೂ ಗಿಂಡಿ, ಹೊನ್ನೇಮರ, ಮುತ್ತಿನಬಲೆ, ಜೋಳದ ತೆನಿ, ಗಿಳಿ ನಕ್ಷತ್ರ, ಸೂರ್ಯ, ಚಂದ್ರ ಅಧಿಕಚಿಹ್ನೆ, ಕಲ್ಲು ಕಟ್ಟೆ ಸಾಲು ನೆಲ್ಲಿಗಿಡ,
ಮರಿಚೇಳು, ಪಾಂಡವರ ಆಯುಧ, ಜೇಡ, ನೊಣ, ರೆಕ್ಕೆಗಳು, ಸೀತೆ ಹಸ್ತ ಅಷ್ಟಕೊಳ ಚಿತ್ರಗಳಿರುತ್ತವೆ. ಇದಲ್ಲದೆ
ಪ್ರತಿ ಬಲಗೈ ಹಸ್ತದ ಪಟ್ಟೆ ಚಿತ್ರಗಳು
ಬೆರಳುಗಳಲ್ಲಿ ನೊಳ, ಚೇಳು, ವಾಲಿಗುಪ್ಪೆ, ಹುಲಿಉಗುರುಗಳೇಇರಬೇಕೆಂಬ ಕಟ್ಟಳೆಗಳಿವೆ. ಇವು ಬೇರೆ ಕಡೆಗೂ ಬಳಕೆಯಾಗುತ್ತವೆ. ಎಡಗೈಗಿಂತಲೂ ಬಲಗೈಯಲ್ಲಿ ಹೆಚ್ಚು ವೈವಿಧ್ಯಮಯವಾದ ಚಿತ್ರಗಳಿರುತ್ತವೆ.
ಉ. ಎದೆಯ ಮೇಲಿನ ಹಚ್ಚೆ: ಎದೆಯ ಮೇಲಿನ ಹಚ್ಚೆಯಲ್ಲಿರುವ ಆಭರಣಗಳ ಹಚ್ಚೆಗಳು ಚುಕ್ಕೆಗಳ ವಿನ್ಯಾಸದಿಂದ ಕೂಡಿದವುಗಳಾಗಿರುತ್ತವೆ. ಮೊಲೆಯ ಸುತ್ತಲೂ ನವಿಲು, ಗಿಳಿ, ವಿವಿಧ ಹೂವಿನ ಚಿತ್ರಗಳು ವೃತ್ತಾರಕಾರದ ಚಿಕ್ಕ ಚುಕ್ಕೆಗಳ



ಸುಮದರವಾದ ಅಲಂಕಾರಗಳಿರುತ್ತವೆ. ಗಂಡಸರಲ್ಲಿ ಎದೆಯ ಮೇಲಿನ ಹಚ್ಚೆ ತೀರಾ ಅಪರೂಪ. ಅಪರಾಧ ಮಾಡಿದವರಿಗೆ ಜೇಲಿನಲ್ಲಿ ಬೇಡಿಯ ಹಚ್ಚೆ ಹಾಕುತ್ತಿದ್ದರೆಂದು ಜೈಲುವಾಸ ಮುಗಿಸಿ ಬಂದ ಕೈದಿಯೊಬ್ಬರು ಹೇಳಿದುದನ್ನು ಕೇಳಿದ್ದೇನೆ. ಅದು ವಿಶೇಷವಾಗಿ ಕರಿನೀರಿಗೆ ಕಳುಹಿಸುವವರಿಗೆ ಈ ರೀತಿ ಹಚ್ಚೆ ಹಾಕಿ ಕಳುಹಿಸುತ್ತಿದ್ದರಂತೆ. ಪರುಷರು ಎದೆಯ ಮೇಲೆ ಹಚ್ಚೆ ಹಾಕಿಕೊಂಡ ಉದಾಹರಣೆಗಳು ಉತ್ತರ ಕರ್ನಾಟಕದಲ್ಲಿ ಕಂಡುಬರುವುದಿಲ್ಲ.

**ಊ. ಹೊಟ್ಟೆಯ ಸುತ್ತಲಿನ ಹಚ್ಚೆ**: ಮುಖ, ಕೈಗಳಲ್ಲಿ ಕಂಡುಬಂದಂತೆ ಹೊಟ್ಟೆಯ ಮೇಲೆ ವೈವಿಧ್ಯಮಯವಾದ ರೀತಿಯಲ್ಲಿ ಹಚ್ಚೆ ಹಾಕಿಸುವುದಿಲ್ಲ. ಪಚನಕ್ರಿಯೆ ಹೊಟ್ಟೆನೋವುಗಳಿಂದಾ ಕಾರಣಕ್ಕಾಗಿ ಮಾತ್ರ ನೊಣದ ಕಾಲು, ಚಂದ್ರಾಮರ ಹಚ್ಚೆ ಹಾಕಿಸುತ್ತಾರೆ.

**೬. ಬೆನ್ನ ಹಚ್ಚೆ** : ಇದು, ಹುಟ್ಟಿದ ಮಕ್ಕಳು ಸಾಯುತ್ತಿದ್ದರೆ ಹಾಕುವಂತಹದು. ಅಲ್ಲಿ ಒಂದು ಚುಕ್ಕೆ ಮೇಲೆ ಅಡ್ಡಗೆರೆ, ಅದರ ಮೇಲೆ ಇಂಗ್ಲಿಷಿನ ಎ ಅದರಲ್ಲಿ ಚುಕ್ಕೆ ಈ ರೀತಿಯ ಹಚ್ಚೆಯನ್ನು ಬೆನ್ನಿನ ಮೇಲೆ ಹಾಕುತ್ತಾರೆ. ಇದಕ್ಕೆ ಕರಮಂತ್ರದ ಹಚ್ಚೆಯೆಂದು ಹೆಸರು. ಇನ್ನೊಂದು ಕಡ್ಲಿಬ್ಯಾಳಿ ಹಚ್ಚೆ, ಇದನ್ನು ಕೆಲವುಸಲ ಮೊದಲ ಮಗುವಿನ ನಂತರ, ಮತ್ತೆ ಮಕ್ಕಳು ತೀರಿಕೊಳ್ಳುತ್ತಿದ್ದರೆ, ಮೊದಲ ಮಗುವಿನ ಬೆನ್ನಿನಮೇಲೆ ಸುಳಿ ಇದ್ದಲ್ಲಿ ವರ್ತುಳದಲ್ಲಿ ಕತ್ತರಿಯಂತಹ ಚಿಹ್ನೆಯ ಹಚ್ಚೆಯನ್ನು ಹಾಕಿಸುತ್ತಾರೆ. ಇಲ್ಲಿ ಚಿತ್ರಗಳು ಸೌಂದರ್ಯದ ಆಶಯದಿಂದ ಕೂಡಿದವುಗಳಲ್ಲ, ಪ್ರಯೋಜನಮೂಲದವುಗಳಾಗಿವೆ.

**೭. ಗುಪ್ತಾಂಗದ ಮೇಲಿನ ಹಚ್ಚೆ**: ಗುಪ್ತಾಂಗದ ಮೇಲೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹೆಚ್ಚಾಗಿ ಆಧುನಿಕ ರೀತಿಯಲ್ಲಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಆದರೆ ಭಾರತದಲ್ಲಿ ಅದೂ ಉತ್ತರ ಕರ್ನಾಟಕದಲ್ಲಿ ಗುಪ್ತಾಂಗದ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದು ತೀರಾ ಅಪರೂಪವೆಂದೇ ಹೇಳಬೇಕು. ತೊನ್ನುರೋಗ ಇರುವ ಹೆಣ್ಣುಮಕ್ಕಳಿಗೆ ಹೆಚ್ಚಿಗೆ ಹಣ ಕೊಟ್ಟು ಗುಪ್ತಾಂಗದ ಮೇಲೆ ಗೌಪ್ಯವಾಗಿ ಹಚ್ಚೆ ಹಾಕಿದ್ದು ತಿಳಿದು ಬಂದಿದೆ.


**೮. ಕಾಲಿನ ಹಚ್ಚೆ:** ಕಾಲಿನ ಮೇಲೆ ಹಾಕುವ ಹಚ್ಚೆಯನ್ನು ಎಡಗಾಲಿನ ಹಚ್ಚೆ ಮತ್ತು ಬಲಗಾಲಿನ ಹಚ್ಚೆಯೆಂದು ವಿಂಗಡಿಸಬಹುದು. ಇವುಗಳ ಹೊರಭಾಗ ಮತ್ತು ಒಳಭಾಗವನ್ನು ಗಮನಿಸಿ ಅ) ತೊಡೆಯ ಹಚ್ಚೆ ಆ) ಮೊಳಕಾಲಿನ ಕೇಳಭಾಗದ ಹಚ್ಚೆ ಇ) ಪಾದದ ಹಚ್ಚೆಗಳೆಂದು



ಇವುಗಳಲ್ಲಿ ಮತ್ತೆ ಉಪ ವಿಭಾಗ ಮಾಡಿಕೊಂಡು, ಅಭ್ಯಾಸ ಮಾಡಬಹುದಾಗಿದೆ.

ಶರೀರದ ಇನ್ನಿತರ ಭಾಗಗಳಲ್ಲಿಯಂತೆ ಕಾಲಿನ ಮೇಲೆಯೂ ಹಚ್ಚೆ ಹಾಕಿಸುತ್ತಿದ್ದು ಅವು ಅಷ್ಟೊಂದು ವೈವಿಧ್ಯತೆಗಳಿಂದ ಕೂಡಿಲ್ಲ. ಸೀಮಿತವಾದ ಕೆಲವು ಚಿತ್ರಗಳು ಮಾತ್ರ ಇಲ್ಲಿರುತ್ತವೆ.

**ಅ) ತೊಡೆಯ ಹಚ್ಚೆ :** ತೊಡೆಯಲ್ಲಿ ಬಿಳಿಮಚ್ಚೆ ಇದ್ದರೆ ಮಾತ್ರ ಅದರ ಮೇಲೆ ಹಚ್ಚೆ ಹಾಕಿಸುತ್ತಾರೆ. ಇಲ್ಲದಿದ್ದರೆ ಹಾಕಿಸುವುದಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಂಡುಬಂದಂತೆ, ಇಲ್ಲಿ ತೊಡೆಯ ಮೇಲೆ ಹಚ್ಚೆಯ ಚಿತ್ರಗಳು ಕಾಣಿಸುವುದು ಅಪರೂಪ.



ಪಾದಗಳ ಹಚ್ಚೆ

**ಆ) ಮೊಳಕಾಲಿನ ಕೆಳಭಾಗದ ಹಚ್ಚೆ:** ಎರಡೂ ಮೊಳಕಾಲಿನ ಕೆಳಭಾಗದ ಮೀನು ಗಂಡಿನ ಮೇಲೆ ಸಾಮಾನ್ಯವಾಗಿ ಹಚ್ಚೆ ಹಾಕಿಸುವುದು ಪ್ರಚಲಿತದಲ್ಲಿದೆ. ಇಲ್ಲಿ ಕಮಲದ ಹೂ, ಜೋಗಿ ಜಡೆ, ಇತ್ಯಾದಿ ಚುಕ್ಕೆಗಳ ಅಲಂಕಾರವಿರುತ್ತದೆ. ಇದನ್ನು ಸ್ತ್ರೀಯರಲ್ಲಿ ಮಾತ್ರ ಕಾಣುತ್ತೇವೆ.

**ಇ) ಪಾದದ ಹಚ್ಚೆ:** ಎರಡೂ ಪಾದದ ಮೇಲೆ ವಿವಿಧ ಹೂವಿನ



ಹೆಸರಿನಿಂದ ಚಿತ್ರ ಬಿಡಿಸುತ್ತಾರೆ. ಇವುಗಳಲ್ಲಿ ಕಮಲದ ಹೂ ಪ್ರಸಿದ್ಧವಾಗಿದೆ. ಕಾಲಿನ ಬೆರಳುಗಳ ಮೇಲೆ ಹಚ್ಚೆಯ ಮೂರು ಚುಕ್ಕೆಗಳಿಂದ ಇಲ್ಲವೆ ಅಧಿಕ ಚಿಹ್ನೆಯಿಂದ ಅಲಂಕರಿಸುತ್ತಾರೆ. ಅಪರೂಪವಾಗಿ ಚೇಳಿನ, ನೊಣದ ಚಿತ್ರಗಳನ್ನೂ ಹಾಕುವುದುಂಟು. ಈ ಹಚ್ಚೆಯೂ ಹೆಣ್ಣುಮಕ್ಕಳಿಗೆ ಮಾತ್ರ ಸೀಮಿತವಾಗಿದೆ.

ಇಡಿ ಶರೀರದ ವಿವಿಧ ಅಂಗಾಂಗಗಳಲ್ಲಿ ಕಂಡುಬರುವ ಹಚ್ಚೆಯ ಚಿತ್ರಗಳು, ಹಲವಾರು ವಿಷಯಗಳನ್ನು ಹೊಂದಿವೆ. ಈ ಧಾರ್ಮಿಕ ಧಾರ್ಮಿಕೇತರ ವಿಷಯಗಳಲ್ಲಿ ಇವುಗಳನ್ನು ಗುರುತಿಸಬಹುದಾಗಿದೆ.

ಧಾರ್ಮಿಕ ಹಚ್ಚೆಗಳಲ್ಲಿ ದೇವಾನುದೇವತೆಗಳು, ಸ್ಥಳಿಯ ಊರಿನ ದೇವತೆಗಳು ಕುಲದೇವರ ಚಿತ್ರ ಪೌರಾಣಿಕ ಚಿತ್ರ, ರಾಮಾಯಣ, ಮಹಾಭರತದ ಚಿತ್ರಗಳು ವಿಶೇಷವಾಗಿ ಕಾಣಿಸಿಕೊಂಡಿವೆ. ವಿವಿಧ ಧರ್ಮದ ಜನರಲ್ಲಿ ಅವರವರ ಧರ್ಮದ ಹಿನ್ನಲೆಯ ಚಿತ್ರ ಸಂಕೇತಗಳು ಇಲ್ಲಿ ಗೋಚರಿಸುತ್ತವೆ.

ಧಾರ್ಮಿಕೇತರ ಹಚ್ಚೆಯ ಚಿತ್ರಗಳಲ್ಲಿ ಅಲಂಕಾರಿಕ ಚಿತ್ರ ಮಾನವಾಕೃತಿಯ ಚಿತ್ರಗಳು, ನೈಸರ್ಗಿಕ ಚಿತ್ರಗಳಾದ ಪ್ರಾಣಿ, ಪಕ್ಷಿ,ಹೂ, ಎಲೆ, ಬಳ್ಳಿ, ಮರ ಮುಂತಾದವುಗಳು ಮತ್ತು ಕೃಷಿಯಲ್ಲಿ ಬಳಕೆಯಾಗುವ ಹಲವಾರು ವಸ್ತುಗಳು, ಬೆಳೆಯುವ ವಿವಿಧ ಧಾನ್ಯಗಳ ವಿವಿಧ ರೀತಿಯ ಹೆಸರುಗಳು ಹಚ್ಚೆಯಲ್ಲಿ ಕಾಣಿಸಿಕೊಂಡಿವೆ.

ಇಲ್ಲಿಯ ಹಚ್ಚೆಯ ಚಿತ್ರಗಳಲ್ಲಿ ಸರಳ ರೇಖಾ ಚಿತ್ರ ವಿನ್ಯಾಸ ಮತ್ತು ವಕ್ರ ರೇಖಾ ಚಿತ್ರ ವಿನ್ಯಾಸಗಳನ್ನು ಕಾಣಬಹುದು. ಅಲಂಕಾರಿಕ ಕೃತಿಯ ಚಿತ್ರಗಳು, ಸರಳ ರೇಖೆಗಳಿಂದಲೂ ವ್ಯಕ್ತಿ, ದೇವತೆಗಳ ಚಿತ್ರಗಳು ವಕ್ರ ರೇಖೆಗಳಿಂದ ಕೂಡಿದವುಗಳಾಗಿವೆ. ಕೆಲವು ನಿಸರ್ಗದ ದೃಶ್ಯಗಳು ಈ ಮಾದರಿಯಲ್ಲಿ ನಿರೂಪಣೆಯಾಗಿವೆ. ಇವುಗಳೊಂದಿಗೆ ಭೂಮಿತಿ ಆಕೃತಿಯ ಚಿತ್ರಗಳೂ ಬಳಕೆಗೊಂಡಿವೆ.

ಒಂದು ಚಿತ್ರವನ್ನು ಪ್ರಾದೇಶಿಕವಾಗಿ ಹಲವಾರು ರೀತಿಯಲ್ಲಿ ಚಿತ್ರಿಸಲಾಗಿದೆ. ಇದು ಆಯಾ ಪ್ರದೇಶದ, ಸ್ಥಳೀಯ ಹಲವಾರು ವಿಷಯಗಳು ಹಚ್ಚೆಯಲ್ಲಿ ಹಾಸು ಹೊಕ್ಕಾಗಿರುತ್ತವೆ. ಸಾಂಕೇತಿಕತೆಯಿಂದ ಕೂಡಿದ ಕೆಲವು ಚಿತ್ರಗಳ ಸಂಕೇತಗಳೂ ಇಲ್ಲಿ ಬಳಕೆಯಾಗಿವೆ.

ಜಗತ್ತಿನ ಎಲ್ಲ ಕಡೆಯೂ ಪುರಾತನ ಕಾಲದಿಂದಲೂ ಬೆಳೆದುಬಂದಿರುವ ಹಚ್ಚೆ ಚಿತ್ರಕಲೆ ವಿವಿಧ ಜನರಿಗೆ ಅದು ವಿವಿಧ ರೀತಿಯ ಅಂತಸ್ತು, ಗೌರವದ ಚಿಹ್ನೆಯಾಗಿ, ಸಮಾಜದ ವಿವಿಧ ಸ್ಥರಗಳ ಜನರ

ಮಾಹಿತಿಯಾಗಿರುವದು ಹಚ್ಚೆ ಇತಿಹಾಸದಿಂದ ತಿಳಿದುಬರುತ್ತದೆ. ಪಾಲಿನೇಷ್ಯಾದ ಜನರಿಗೆ ಹಚ್ಚೆ ಒಂದು ಪ್ರಿಯವಾದ ಹವ್ಯಾಸ, ನ್ಯೂಜಿಲೆಂಡಿನ ಮಾವೋರಿ ಜನರಿಗೆ ಹಚ್ಚೆ ಭಯೋತ್ಪಾದನೆಯ ಸಂಕೇತವಾಗಿದ್ದರೆ, ವ್ಯಾಲೀಸ್ ದ್ವೀಪವಾಸಿಗರಿಗೆ ಇದು ಗೌರವದ ಕುರುಹು ಆಗಿದೆ. ಅಮೇರಿಕಾದ ರೆಡ್ ಇಂಡಿಯನ್ನರಿಗೆ ಹಚ್ಚೆ ಲೈಂಗಿಕ ಸೌಂದರ್ಯ ಮತ್ತು ಸಾಹಸ ಪ್ರೌವೃತ್ತಿಯ ಸಾಧನವಾಗಿದೆ. ಪೆಸಿಫಿಕ್ ಸಾಗರದ ದ್ವೀಪ ನಿವಾಸಿಗಳಿಗೆ ಹಚ್ಚೆ ಒಂದು ಅಲಂಕಾರ ಸಾಧನೆ. ಥೀಸಿಯಾದ ಮಹಿಳೆಯರಿಗೆ ಹಚ್ಚೆ ದೊಡ್ಡಸ್ತಿಕೆಯ ಸಂಕೇತವಾಗಿದೆ. ಇಥಿಯೋಪಿಯನ್ನರು ತಮ್ಮ ಪೂರ್ವಿಕರ ಚಿತ್ರಗಳನ್ನು ಹಚ್ಚೆಯಲ್ಲಿ ಹಾಕಿಸಿಕೊಳ್ಳುವದರಮೂಲಕ ಅವರ ರಕ್ಷೆ ತಮಗೆ ಇರುತ್ತದೆ ಎಂದು ಭಾವಿಸುತ್ತಾರೆ. ಬುಂದೇಲ ಖಂಡದ ಜಾತಿಯ ಹೆಂಗಸರು ಕೇವಲ ಕೈಮೇಲೆ ಹಚ್ಚೆ ಹಾಕಿಸಿಕೊಂಡರೆ, ಮದುವೆ ಯಾದನಂತರ ದೇಹದ ಇತರ ಭಾಗಗಳಿಗೂ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ತಮೀಳು ನಾಡಿನ ತೋದರು ಮದುವೆಯಾದ ನಂತರವೇ ಹಚ್ಚೆ ಹಾಕಿಸಿಕೊಳ್ಳುವದು ರೂಢಿಯಲ್ಲಿದೆ. ಉದಕ ಮಂಡಲದ ಪರಿಯ ಜನರು ಹದ್ದಿನ ಗುರುತನ್ನು ವಿಶೇಷವಾಗಿ ಹಚ್ಚೆಯಲ್ಲಿ ಹಾಕಿಸಿಕೊಳ್ಳುತ್ತಾರೆ.

ಒಟ್ಟಾರೆ ಹಚ್ಚೆ ಸೌಂದರ್ಯದ ಪ್ರತೀಕವಾಗಿ ಧಾರ್ಮಿಕ ಹಿನ್ನಲೆಯ ವಿಧಿಕ್ರಿಯೆಯಾಗಿ ಶುಭ ಸಂಕೇತವಾಗಿ ಜಾತಿ ಮತ್ತು ವೃತ್ತಿ ಸೂಚಕವಾಗಿ ಹೀಗೆ ಹತ್ತು ಹಲವು ಆಶೋತ್ತರಗಳ ಹಿನ್ನಲೆಯಲ್ಲಿ ವಿವಿಧ ಸಮಯ, ಸಂದರ್ಭ, ಆಯಾ ಪ್ರದೇಶದ ನೈಸರ್ಗಿಕತೆಯ ಪ್ರಭಾವ ವಲಯದಲ್ಲಿ ಇದು ಬೆಳೆದುಬಂದಿದೆ. ಸ್ಪೇನ್ ಮತ್ತು ಮ್ಯಾಕ್ಸಿಕೋ ಹಾಗೂ ಪೇರು ನಿವಾಸಿಗರು ದಟ್ಟ ನೀಲಿಯ ಮತ್ತು ಕೆಲವು ಬಣ್ಣಗಳ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಹಾಗೆಯೇ ಕ್ಯಾಲಿಫೋರ್ನಿಯಾದ ನಿವಾಸಿಗಳಲ್ಲಿ ಸಹ ಇದು ಕಂಡುಬಂದಿದೆ. ಭಾತರದಲ್ಲಿ ಹಸಿರು ಬಣ್ಣದ ಹಚ್ಚೆ ಮಾತ್ರ ಎಲ್ಲೆಡೆಯೂ ಸಾಮಾನ್ಯವಾಗಿ ಹಾಕಲಾಗುತ್ತದೆ. ಇತ್ತೀಚೆಗೆ ಆಧುನಿಕ ಬಣ್ಣಗಳನ್ನು ಹಚ್ಚೆಯಲ್ಲಿ ಮುಂದುವರೆದ ದೇಶಗಳಲ್ಲಿ ಹಾಕಿಸಿಕೊಳ್ಳುತ್ತಿರುವದನ್ನು ನೋಡಬಹುದು.

ಹಚ್ಚೆ' ನಮ್ಮ ಪೂರ್ವಿಕರ ಅಪೂರ್ವವಾದ ಒಂದು ಜನಪದ ಚಿತ್ರಕಲಾಸಂಪತ್ತು. ಈ ಕಲೆಯು ಈಗ ಅವಸಾನದ ಹಾದಿಯಲ್ಲಿದೆ. ಅದರಲ್ಲಿರುವ ವೈದ್ಯಕೀಯ, ಸಾಂಸ್ಕೃತಿಕ, ಸೌಂದರ್ಯಾತ್ಮಕ ಅಂಶಗಳು ಮತ್ತು ಚಿತ್ರಗಳ ಮೂಲಕ ಆಯಾ ಜನಾಂಗದ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿದುಕೊಳ್ಳಲು ಈ ಅಧ್ಯಯನ ಇಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯಬೇಕಾಗಿದೆ.

( ಹೆಚ್ಚಿನ ವಿವರಗಳಿಗೆ ಡಾ.ಎಸ್.ಸಿ.ಪಾಟೀಲ ಅವರ ಕರ್ನಾಟಕ ಜನಪದ ಚಿತ್ರಕಲೆ ಗ್ರಂಥವನ್ನು ನೋಡಬಹುದಾಗಿದೆ.)



ಡಾ. ಎಸ್.ಸಿ. ಪಾಟೀಲರವರು ೧೯೫೫ ರಲ್ಲಿ ಗುಲ್ಬರ್ಗಾ ಜಿಲ್ಲೆಯ ಮಾಣಶಿವಣಗಿಯಲ್ಲಿ ಜನನ. ಎಮ್.ಎ., ಎಮ್.ಈಡಿ., ಎ.ಎಮ್., ಜಿ.ಡಿ.ಆರ್ಟ್ ಇನ್ ಪೇಂಟಿಂಗ್, ಜಿ.ಡಿ. ಆರ್ಟ್ ಇನ್ ಮಾಡೆಲಿಂಗ್ (ಶಿಲ್ಪಕಲೆ) ಪದವಿಗಳನ್ನು ಪಡೆದುದಲ್ಲದೆ 'ಕರ್ನಾಟಕದ ಜನಪದ ಚಿತ್ರಕಲೆ' ಕುರಿತು ಪಿಎಚ್.ಡಿ. ಪದವಿಯನ್ನು ೧೯೯೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಪಡೆದಿದ್ದಾರೆ. ಬಹುಮುಖ ವ್ಯಕ್ತಿತ್ವದ ಪಾಟೀಲರು ಕನ್ನಡ ಸಾಹಿತ್ಯ, ಇತಿಹಾಸ ಜಾನಪದ, ಶಿಕ್ಷಣ, ಚಿತ್ರಕಲೆ, ಶಿಲ್ಪಕಲೆಯಲ್ಲಿ ವಿಶೇಷ ಪರಿಣತಿಯನ್ನು ಹೊಂದಿದವರಾಗಿದ್ದು, ಕರ್ನಾಟಕದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಮೊಟ್ಟ ಮೊದಲ ಪಿಎಚ್.ಡಿ ಪದವಿ ಪಡೆದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಏಕವ್ಯಕ್ತಿ ಮತ್ತು ಹಲವಾರು ಸಮೂಹ ಚಿತ್ರಕಲಾ ಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕಲಾಶಿಬಿರ, ಕಲಾಪ್ರದರ್ಶನ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

ಇಪ್ಪತ್ತಕ್ಕೂ ಹೆಚ್ಚು ಗ್ರಂಥಗಳನ್ನು ಮತ್ತು ಎಪ್ಪತ್ತೈದು ಸಂಶೋಧನ ಲೇಖನಗಳನ್ನು ಬರೆದಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಅನೇಕ ಜನ ವಿದ್ಯಾರ್ಥಿಗಳು ಎಂ.ಫಿಲ್. ಮತ್ತು ಪಿಎಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇತ್ತೀಚಿಗೆ ''ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಅಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಡ್ರಾಯಿಂಗ್ ಎಂಡ್ ಪೇಂಟಿಂಗ್'' ಎಂಬ ವಿಷಯದ ತಮ್ಮ ಎರಡನೆಯ ಡಾಕ್ಟರೇಟ್ ಪದವಿಯನ್ನು ಚಿತ್ರಕಲಾ ಕ್ಷೇತ್ರದಲ್ಲಿ ಪಡೆದುಕೊಂಡಿರುವುದು ಒಂದು ಅಪೂರ್ವ ದಾಖಲೆಯಾಗಿದೆ. ಜಿಲ್ಲೆ, ವಿಭಾಗ, ರಾಜ್ಯಮಟ್ಟದ ಶ್ರೇಷ್ಠ ಉಪನ್ಯಾಸಕ ಪ್ರಶಸ್ತಿಗಳು, ಉಡುಪಿಯ ಕು.ಶಿ.ಹರಿದಾಸ ಭಟ್ಟ ಜಾನಪದ ಪ್ರಶಸ್ತಿಗಳಲ್ಲದೆ, ಕರ್ನಾಟಕ ಲಲಿತಕಲಾ ಅಕಾಡೆಮಿ ಇವರ ಎರಡು ಕಲಾಗ್ರಂಥಗಳಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಈಗ ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರಾಗಿ ಮತ್ತು ಯು.ಜಿ.ಸಿ.ಯ ನ್ಯಾಕ್ (ಪೀಯರ್ ಟೀಮ್) ಸಮಿತಿಯ ರಾಷ್ಟ್ರೀಯ ಮಟ್ಟದಲ್ಲಿ ಸದಸ್ಯರಾಗಿ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದ ತಜ್ಞ ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ. ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗದಲ್ಲಿ ಪ್ರವಾಚಕರಾಗಿ ಮತ್ತು ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು - 560 002